
# ಅಖಿಲ ಭಾರತ ಪತ್ರಿಕೆ

## ಸೆಪ್ಟೆಂಬರ್ 2022




# ಭಾರತದ ಭಾವಸತ್ಯ

ಬೆಲೆ : 15/-



ಫೋಟೋ: ಇಮೇಜಿಂಗ್ ಸಾವಿತ್ರಿ

ವಿಜ್ಞಾನಮಯದ ಸಂಭೂತಿಪವನದನುಭೂತಿಗೊಳಲು ಪುಟಿತ
ಆಕಾಶಕೇರಿ ತಾ ಸ್ಪಂದಗೊಳುವ ಆ ಹಂತವಿರಲು ಸಹಿತ,
ಚಿಂತನದ ಊರ್ಧ್ವದುಡ್ಡಯನ–ಪಯಣ ತಂತಾನೆ ತಾನು ಇಲ್ಲಿ
ಚಿದ್ಘನದ ಗಗನ–ನೀಲದಲಿ ಮಾತ್ರ ತಾ ಲೀನವಾಗದಿಲ್ಲಿ

**– ಪುಟ್ಟು ಕುಲಕರ್ಣಿ**

**(ಶ್ರೀ ಅರವಿಂದರ 'ಸಾವಿತ್ರಿ'; ದಳ 7 ರೇಣು 3 ಪುಟ 497)**

# ಅಖಿಲ ಭಾರತ ಪತ್ರಿಕೆ

**ಸೆಪ್ಟೆಂಬರ್ 2022**

ಸಂಪುಟ: 32 ಸಂಚಿಕೆ: 09


## ಪರಿವಿಡಿ


**ಸಂಪಾದಕರು:**
ಶ್ರೀ ಪುಟ್ಟು ಕುಲಕರ್ಣಿ
ರಾಘವೇಂದ್ರ ಮಠದ ಹಿಂಭಾಗ,
ಗಿಬ್ ಸರ್ಕಲ್, ಹೆರವಟ್ಟ ರಸ್ತೆ,
ಕುಮಟಾ – 581 332.
ಫೋನ್: 9448774920
mayureshwarkp@gmail.com

**ಪರಿಶೀಲನಾ ಸಮಿತಿ**
ಡಾ॥ ಗುರುಲಿಂಗ ಕಾಪಸೆ
ಡಾ॥ ಆರ್.ಕೆ. ಕುಲಕರ್ಣಿ

**ಪ್ರಕಾಶಕರು:**
ಡಾ॥ ಅಜಿತ್ ಸಬ್ನೀಸ್
ಅಧ್ಯಕ್ಷರು, ಶ್ರೀ ಅರವಿಂದೋ
ಸೊಸೈಟಿ ರಾಜ್ಯ ಸಮಿತಿ ಕರ್ನಾಟಕ,
ಶ್ರೀ ಅರವಿಂದ ಮಾರ್ಗ,
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಾಯೋಜಕರು:**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.
ಫೋನ್: 080 – 2244 9882
http://abp.sirinudi.org

**ಡಿ.ಟಿ.ಪಿ.:**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಆಫ್‌ಸೆಟ್ ಮುದ್ರಣ:**
ಶೇಷಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.


## "ಭಾರತದ ಭಾವಸತ್ಯ"

ಜಡತ್ವದಲ್ಲಿ ದೈವತ್ವದ ಆವಿಷ್ಕಾರ. – ಶ್ರೀ ಅರವಿಂದರು


**ಭಾರತದ ಆತ್ಮ** 7
ಅನು: ಶ್ರೀ ಪುಟ್ಟು ಕುಲಕರ್ಣಿ

**ಭಾರತದ ಚಿತ್ತ** 11
ಅನು: ಪ್ರೊ. ವೀರಭದ್ರಪ್ಪ ಕೆ.
ಡಾ॥ ಬಿ.ಆರ್. ಭೀಡ್

**ಭಾರತದ ಜೀವ-ಜೀವನ** 25
ಅನು: ಡಾ॥ ಮಹಾದೇವ ಸಕ್ರಿ

**ಮಾತೃಭೂಮಿಯ ಸ್ವರೂಪ** 41
ಅನು: ನಾಗಜ್ಯೋತಿ ಮಾನವಿ

**ಶ್ರೀ ಅರವಿಂದರ 'ಗೀತಾ ಪ್ರಬಂಧಗಳು'** 45
ಅನು: ಜಾನ್ವಿ

**ಶ್ರೀ ಅರವಿಂದರ 'ತಾಂತ್ರಿಕಸಿದ್ಧಿ ಪ್ರಕರಣಂ'** 62
ಅನು: ಪುಟ್ಟು ಕುಲಕರ್ಣಿ

**ಶ್ರೀ ಅರವಿಂದರ ಕಾವ್ಯ "ಈಲಿಯನ್"** 67
ಅನು: ಡಾ॥ ಬಿ.ಆರ್. ಭೀಡ್

**ವಾರ್ತಾಪತ್ರ** 74

## ಸಂಪಾದಕರ ಟಿಪ್ಪಣಿ

ಭಾರತ ಎಂದರೆ ನಿಜವಾಗಿಯೂ ಏನು? ಭಾರತದ ಕುರಿತು ಬೇರೆ ಬೇರೆ ದೃಷ್ಟಿಕೋನಗಳ ವಿಚಾರಗಳಿವೆ; ಸಿದ್ಧಾಂತಗಳಿವೆ. ಆದರೆ ಬಹುತೇಕವಾಗಿ ಅನ್ಯ ಚಿಂತನಾ ಮಾದರಿಗಳಿಂದ ಎರವಲು ಪಡೆದು ರೂಪಿತಗೊಂಡ ಸಿದ್ಧಾಂತಗಳು ಮತ್ತು ಗ್ರಹಿಕೆಗಳಾಗಿವೆ. ಇದನ್ನೇ 'ದಾರಿದೀಪದಂತೆ' ಬಳಸಿಕೊಳ್ಳಲಾಗುತ್ತಿದೆ. ಇವುಗಳ ಮೂಲಕ ಭಾರತದ ಭೌತಿಕ ಸ್ಥಿತಿಯನ್ನು ಮಾತ್ರ ಅರ್ಥೈಸಿಕೊಳ್ಳಲು ಸಾಧ್ಯವಾದೀತೆ ವಿನಾ ಬೇರೆ ಅಲ್ಲ. ಭಾರತವನ್ನು "ಭಾರತದ ಆತ್ಮ"ದಿಂದಲೇ ಅಂದರೆ ಭಾರತದ ಆತ್ಮದ ದೃಷ್ಟಿಯಿಂದ ಮಾತ್ರ 'ಭಾರತ'ವನ್ನು ಅರ್ಥೈಸಿಕೊಳ್ಳಬಹುದು. ಈ ವಿಷಯದಲ್ಲಿ ಭಾರತದ ಶ್ರೇಷ್ಠ ಚಿಂತಕರಾದ ಶ್ರೀ ಅರವಿಂದರು ತಮ್ಮ ಅಪೂರ್ವ ಚಿಂತನೆಯ ಮೂಲಕ ಹಾಗೂ ಇಲ್ಲಿ ಆತ್ಮದ ಪ್ರಭಾವದ ನಿಯತಿಯನ್ನು ಪ್ರಸ್ತುತ ಪಡಿಸಿದ್ದಾರೆ.

---

## ಶ್ರೀ ಅರವಿಂದೋ ಅವರ ಭರತ ಖಂಡ

**– ಡಾ॥ ದ.ರಾ. ಬೇಂದ್ರೆ**

ಭರತ ಖಂಡದ ವಿಷಯದಲ್ಲಿ ಶ್ರೀ ಅರವಿಂದೋ ಅವರ ಭಾವನೆಯು ನಮ್ಮೆಲ್ಲದರಂತೆ ಸಂಕುಚಿತವಾಗಿಲ್ಲ; ಅವರು ಇದನ್ನು ಜಗತ್ತಿನ ಕಲ್ಯಾಣ ಮಂಟಪವೆಂದು ಅರಿತಿದ್ದಾರೆ. 1908 ರಲ್ಲಿ ಒಂದು ವರುಷದ ಕಡುತರವಾದ ಏಕಾಂತದಲ್ಲಿ ಯೋಗಮುಖದಿಂದ ಈಶ್ವರನು ಕೊಟ್ಟ ದಿವ್ಯ ಸಂದೇಶದ ಮೂಲಕವಾಗಿ ಇವರಿಗೆ ಈ ವಿಷಯವು ವಿದಿತವಾಯಿತು. ಅಂತಲೇ ಹಿಂದುಸ್ಥಾನದ ಶ್ರೀ ಅರವಿಂದೋ ಅವರು ಜಗತ್ತಿನ ಶ್ರೀ ಅರವಿಂದೋ ಆದರು.

ಶ್ರೀ ಅರವಿಂದೋ ಅವರಿಗೆ ಲಭಿಸಿದ ಆ ದಿವ್ಯ ಭಗವತ್ಸಂದೇಶವಿದು; "ಭಾರತ ವಾಸಿಗಳು ಸನಾತನ ಧರ್ಮದ ಸಲುವಾಗಿ ಎಚ್ಚತ್ತು ಏಳುತ್ತಿದ್ದಾರೆ. ಅವರ ಈ ಜಾಗೃತಿಯು ಸ್ವತಃ ಅವರ ಸಲುವಾಗಿ ಇರದೆ ಅದು ಜಗತ್ತಿನ ಸಲುವಾಗಿ ಉಂಟಾಗಿದೆ. ಜಗತ್ತಿನ ಸೇವೆಗೆಂದು ನಾನು ಅವರನ್ನು ವಿಮುಕ್ತರನ್ನಾಗಿ ಮಾಡಲಿದ್ದೇನೆ. ಯಾವ ಯಾವ ಹೊತ್ತಿಗೆ ಭರತ ಖಂಡವು ಏಳುತ್ತಿದೆಯೆಂದು

ಹೇಳುವರೋ ಆಯಾ ಕಾಲದಲ್ಲಿ ಸನಾತನ ಧರ್ಮವು ಏಳುತ್ತಿಲಿರುವದು. ಯಾವಾಗ ಹಿಂದುಸ್ಥಾನವು ಮಹತ್ತರವಾದ ಸ್ಥಿತಿಗೆ ಬರಲಿದೆಯೆಂದು ಹೇಳಲಾಗುವದೋ ಆವಾಗ ಸನಾತನ ಧರ್ಮವೂ ಜಗತ್ತಿನ ಮೇಲೆ ವ್ಯಾಪಕವೂ ವಿಸ್ತೃತವೂ ಆಗುವದು."

ಶ್ರೀ ಅರವಿಂದೋ ಅವರು "ಉತ್ತರಪಾಡಾ ಉಪನ್ಯಾಸ"ದಲ್ಲಿ ಉಲ್ಲೇಖಿಸಿದ ಈ ದೈವೀ ಸಂದೇಶದ ಸೂತ್ರದ ಮೇಲೆ ಮುಂದೆ ಹತ್ತು ವರ್ಷಗಳ ಅನಂತರ 'ಭಾರತೀಯ ನವಜನ್ಮ'ವೆಂಬ ವಿಸ್ತೃತ ಭಾಷ್ಯವನ್ನು ಬರೆದಿದ್ದಾರೆಂದು ಹೇಳಬಹುದು.

ಸಮಸ್ತ ಪೃಥ್ವಿಯ ಉನ್ನತಿಯು ಭರತ ಖಂಡದ ಉನ್ನತಿಯ ಮೇಲೆ ಅವಲಂಬಿಸಿದೆ. ಈ ಉನ್ನತಿಯು ಅಧ್ಯಾತ್ಮವನ್ನು ಆಶ್ರಯಿಸಿದೆ ಎಂಬುದನ್ನು ಜಗತ್ತಿಗೆ ಸಾರುವ ಪ್ರವಾದಿಯು ಇವರೊಬ್ಬರೇ. ಈ ವಿಷಯವನ್ನು ಶ್ರೀ ಅರವಿಂದೋ ಅವರು ಮುಂದೆ ತಮ್ಮ ಬಹು ಗ್ರಂಥಗಳಲ್ಲಿ ಉದ್ಘೋಷಿಸಿದ್ದಾರೆ. 'ಯೋಗ ಮತ್ತು ಅದರ ಉದ್ದೇಶ' ಎಂಬ ಪುಸ್ತಕದಲ್ಲಿ – "ಸದ್ಯದ ಮಾನವ ಕೋಟಿಯಲ್ಲಿ ಸತ್ಯ ಯುಗದ ಸಮೃದ್ಧಿ ಸಾಮರಸ್ಯಗಳು ಒಡಮೂಡಬೇಕಾದರೆ ಹೊರಮಗ್ಗುಲಿನ ಯಾವ ಮಾರ್ಪಾಟುಗಳಿಂದಲೂ ಅದು ಸಾಧ್ಯವಿಲ್ಲ. ಒಳಗಿನ ಆಧ್ಯಾತ್ಮಿಕ ಸ್ಥಿತ್ಯಂತರಗಳಿಂದಲೇ ಅದು ಸಾಧ್ಯ. ಇದು ಹಿಂದುಸ್ಥಾನದವರಿಂದಲೇ ಆಗುವದು. ಬಹು ಯುಗಗಳಿಂದಲೂ ಈಶ್ವರನು ಈ ಭರತ ಖಂಡವನ್ನು ಯೋಗ ಭೂಮಿಯನ್ನಾಗಿ ಕಾದಿಟ್ಟಿದ್ದಾನೆ. ಜಗತ್ಕಲ್ಯಾಣದ ಕಾಲದಲ್ಲಿ ಹಿಂದುಸ್ಥಾನದ ಯೋಗಿಗಳು ಬಹಿರಂಗದಲ್ಲಿ ಲೋಕಾಂತರಕ್ಕೆ ಬರುತ್ತಾರೆ. ಆದರೆ ಜಗತ್ತಿನ ದುರವಸ್ಥೆಯ ಕಾಲದಲ್ಲಿ ಅವರು ಗಿರಿದರಿಗಳಲ್ಲಿ ಸೇರಿಕೊಂಡು ಏಕಾಂತಮಗ್ನರಾಗಿರುತ್ತಾರೆ.

'ಶ್ರೀ ಅರವಿಂದೋ ಮಂದಿರದಲ್ಲಿ' ಎಂಬ ಸಂಭಾಷಣದಲ್ಲಿ ಶ್ರೀ ಅರವಿಂದೋ ಅವರು 1920 ರಲ್ಲಿ ತಮ್ಮವರೊಬ್ಬರಿಗೆ ವಿವರಿಸಿರುವದು ಹೇಗೆಂದರೆ, "ನಾಳೆ ಭರತ ಖಂಡವು ಎಂಥ ವಿಪುಲ ಕಾರ್ಯಭಾರವನ್ನು ವಹಿಸಬೇಕಾಗಿರುವದು ಎಂಬುದರದೇ ಸೂಚನಾ ಸ್ವರೂಪವಾಗಿ ಸಮಗ್ರ ಜಗತ್ತಿನಲ್ಲಿ ಒಂದು ಮಿಸುಕು ಆರಂಭವಾಗಿದೆ. ಮುಂದಿನ 30–40 ವರ್ಷಗಳ ಒಳಗಾಗಿ ಜಗತ್ತಿನಲ್ಲಿ ವಿಪುಲವಾಗಿ ಮಾರ್ಪಾಟು ಆಗುವದು. ಎಲ್ಲವೂ ತಿರುವು–ಮುರುವು

ಆಗಿಬಿಡುವದು. ಆ ಬಳಿಕ ಕಟ್ಟಲ್ಪಟ್ಟು ಎದ್ದು ನಿಲ್ಲುವ ಜಗತ್ತಿನಲ್ಲಿ ಭಾರತ ಸಂಸ್ಕೃತಿಯೇ ಜಗತ್ತಿನ ಸಂಸ್ಕೃತಿಯಾಗುವದು. ಈ ಭವಿಷತ್ ಭಾರತದ ಕಾರ್ಯವು ಕೇವಲ ಭಾರತದ ಸಲುವಾಗಿ ಇರದೇ ಸಮಸ್ತ ಜಗತ್ತಿನ ಸಲುವಾಗಿ ಇದೆ. ಅದಕ್ಕೆಂತಲೇ ಭರತ ಖಂಡವು ಪೂರ್ಣ ಮಾನವರನ್ನು ಸಿದ್ಧಪಡಿಸಬೇಕಾಗಿದೆ. ಯೋಗಿಗೆ ಎಲ್ಲವೂ ಶಕ್ಯ. ಶಿಕ್ಷಣ, ಸಮಾಜ, ರಾಜನೀತಿ, ಶಿಲ್ಪ ಮತ್ತು ವಾಣಿಜ್ಯ ಮುಂತಾದ ಸರ್ವ ಕ್ಷೇತ್ರಗಳಲ್ಲಿ ಅವನ ಪ್ರತಿಭೆಯು ಅಪೂರ್ವವಾದದ್ದು. ಅವನು ಈ ಎಲ್ಲ ಕ್ಷೇತ್ರಗಳಲ್ಲಿ ವಿಚಿತ್ರವಾದ ಉತ್ಪಾದನೆಯನ್ನು ಮಾಡಬಲ್ಲನು. ಆದರೆ ಆತನು ಯೋಗದ ಮುಖಾಂತರವಾಗಿಯೇ ಜಗತ್ತಿನಲ್ಲಿ ಒಂದು ಹೊಸ ರಚನೆಯನ್ನು ಮಾಡಲು ಹಾರೈಸುವನು. ಯೋಗದ ಪ್ರಕಾಶಸ್ವರೂಪವಾಗಿ ಇರುವ ಪರಿಪೂರ್ಣ ಕಾರ್ಯದ ಮೇಲೆಯೇ ನಾಳಿನ ನವಸೃಷ್ಟಿಯು ಅವಲಂಬಿಸಿದೆ. ಅದು ಬಹು ವಿಶಾಲವಾದ ಕಾರ್ಯವು. ಪೂರ್ಣ ಮಾನವರಿಂದಲೇ ಆ ಪೂರ್ಣ ಕಾರ್ಯವು ಜಗತ್ತಿನಲ್ಲಿ ಆಗಬೇಕಾಗಿದೆ. ಎಲ್ಲಿಯವರೆಗೆ ಪೂರ್ಣ ಮಾನವರು ಉದಯಿಸುವದಿಲ್ಲವೋ ಅಲ್ಲಿಯವರೆಗೆ ಎಂದೂ ಕಾರ್ಯವು ಪೂರ್ಣವಾಗುವದಿಲ್ಲ.

ಇನ್ನೊಂದೆಡೆಯಲ್ಲಿ ಯೋಗೀಶ್ವರ ಶ್ರೀ ಅರವಿಂದೋ ಅವರು ಹೇಳಿದ್ದೇನೆಂದರೆ – "ನನಗೆ ಲಕ್ಷಗಟ್ಟಳೇ ಶಿಷ್ಯರು ಬೇಕಾಗಿಲ್ಲ, ಒಂದು ನೂರು ಜನರು ಕ್ಷುದ್ರ ಅಹಂಕಾರಶೂನ್ಯರಾದ ಪೂರ್ಣ ಮಾನವರು ಪರಮೇಶ್ವರನ ಯಂತ್ರ ಸ್ವರೂಪರಾಗಿ ಲಭಿಸಿದರೆ ಅಷ್ಟೇ ಸಾಕಾಗುವದು. ನಾನು ಗುರುವಾಗಲು ಅಪೇಕ್ಷಿಸುವದಿಲ್ಲ. ಸದ್ಯಃ ಕಾಲದ ಗುರು ಪರಂಪರೆಯನ್ನು ನಾನು ನಂಬುವದಿಲ್ಲ. ನನ್ನ ಸ್ಪರ್ಶದಿಂದಲೇ ಜಾಗೃತರಾಗರೊಲ್ಲರೇಕೆ, ಅಥವಾ ಇನ್ನಾರ ಸ್ಪರ್ಶದಿಂದಲಾದರೂ ಜಾಗೃತರಾಗರೊಲ್ಲರೇಕೆ, ಆದರೆ ಒಳಮಗ್ಗುಲಿನಿಂದ ತಮ್ಮ ದೇವತ್ವವನ್ನು ಬೆಳಗಿಸಿಕೊಂಡು ಭಗವತ್ ಜೀವನವನ್ನು ಪಡೆದುಕೊಳ್ಳಲಿ. ಇದೇ ನನ್ನ ಹಾರೈಕೆ. ಇಂಥ ಮನುಷ್ಯರೇ ಈ ದೇಶವನ್ನು ಉದ್ಧರಿಸುವರು."

(ಶ್ರೀ ಅರವಿಂದೋ ಕಪಾಲಿಶಾಸ್ತ್ರಿ ವೇದ ಸಂಸ್ಕೃತಿ ಸಂಸ್ಥೆ ಬೆಂಗಳೂರು ಇವರಿಂದ 2005ರಲ್ಲಿ ಮರುಮುದ್ರಣವಾಗಿ, ಪ್ರಕಾಶನಗೊಂಡ ಡಾ॥ ದ.ರಾ. ಬೇಂದ್ರೆಯವರು ಅನುವಾದಿಸಿದ ಶ್ರೀ ಅರವಿಂದರ "ಭಾರತದ ನವಜನ್ಮ" ಗ್ರಂಥದಿಂದ ಆಯ್ದ ಪುಟಗಳು)

ಭಾರತವು ಜಾಗ್ರತಗೊಳ್ಳುತ್ತಿದೆ ಎಂದರೆ 'ಸನಾತನ ಧರ್ಮ'ವು ಜಾಗ್ರತಗೊಳ್ಳುತ್ತದೆ ಎಂದೇ ಅರ್ಥವಿದೆ. ಭಾರತವು ಶ್ರೇಷ್ಠತೆಯಲ್ಲಿದೆ ಎಂದು ಹೇಳಿದಾಗ 'ಸನಾತನ ಧರ್ಮ'ವೂ ಶ್ರೇಷ್ಠವಾಗಿದೆ ಎಂತಲೇ ಅರ್ಥ. ಭಾರತವು ಮಹಾನ್ ಆಗಿ ವ್ಯಾಪ್ತಗೊಳ್ಳುತ್ತದೆ ಎಂದರೆ 'ಸನಾತನ ಧರ್ಮ'ವೂ ಜಗತ್ತಿನಾದ್ಯಂತ ಪ್ರಸಾರಗೊಳ್ಳುತ್ತದೆ ಮತ್ತು ಪ್ರಫುಲ್ಲಗೊಳ್ಳುತ್ತದೆ ಎಂತಲೇ ಅರ್ಥವಿದೆ. ಈ ಆತ್ಮಾಭಿಲಾಶೆಯಲ್ಲಿಯೇ ಧರ್ಮವೂ ಇರುತ್ತದೆ; ಇಂತಹ ಧರ್ಮದ ಸಲುವಾಗಿಯೇ ಭಾರತವೂ ರೂಪಿತಗೊಂಡಿದೆ. ಇದೇ ಭಾರತದ ಅಸ್ತಿತ್ವವೂ ಹೌದು.

ಯಾವ ಧರ್ಮವನ್ನು 'ಸನಾತನ ಧರ್ಮ'ವೆಂದು ಕರೆಯಲಾಗುತ್ತದೆಯೋ, ಹಾಗಾದರೆ ಈ 'ಸನಾತನ' ಎಂದರೆ ಏನು? ಇದೇ ಹಿಂದೂ ಧರ್ಮವಾಗಿದೆ, ಅದರಲ್ಲೂ ಕೇವಲ ಹಿಂದೂ ರಾಷ್ಟ್ರವಾಗಿಯೇ ಉದಿತಗೊಂಡಿದೆ; ಹಾಗೆಯೇ ಕರೆಯಲ್ಪಡುತ್ತಿದೆ. ಇದಕ್ಕೆ ಮೂಲ ಕಾರಣವೆಂದರೆ ಮೂರು ದಿಕ್ಕಿನಲ್ಲಿಯೂ ಆವರಿಸಿರುವ ಸಮುದ್ರ ಮತ್ತು ಔನ್ನತ್ಯದ ಹಿಮಾಲಯದ ಏಕಾಂತದಲ್ಲಿಯೇ ಇದು ವಿಕಾಸಗೊಂಡಿದೆ; ಪ್ರಗತಿಗೊಂಡಿದೆ. ಇದಕ್ಕೆ ಮೂಲ ಕಾರಣವೆಂದರೆ, ಈ ಪರಮ ಪವಿತ್ರ ಹಾಗೂ ಪ್ರಾಚೀನ ಭೂಮಿಯು ಅಖಂಡವಾಗಿಯೇ ರೂಪಿತಗೊಂಡು ಲಭ್ಯಗೊಂಡಿದೆ, ಯುಗಯುಗಳಿಂದಲೂ ಸಂರಕ್ಷಣೆಯಲ್ಲಿಯೇ ತನ್ನ ಅಸ್ಮಿತೆಯನ್ನೂ ಕಾಯ್ದುಕೊಂಡಿದೆ. ಇದು ಕೇವಲ ಸುಸಂಸ್ಕೃತವಾದ ಜನ ಸಮುದಾಯದಿಂದ ರಕ್ಷಣೆಗೆ ಒಳಪಟ್ಟುಕೊಂಡೇ ಬಂದಿದೆ. ಇದು ಕೇವಲ ಯಾವುದೇ ಒಂದು ಸೀಮಿತ ವರ್ಗಕ್ಕೆ ಮಾತ್ರ ಮೀಸಲಾಗಿಲ್ಲ. ಹಾಗೆಂದು ಇದು ಗಡಿ–ಗೋಡೆಗಳಿಂದ ಬಂಧಿತವಾಗಿ, ಸೀಮೆಗಳ ವ್ಯವಸ್ಥೆಗೆ ಬದ್ಧತೆಗೊಂಡು ರೂಪಿತಗೊಂಡದ್ದು ಎಂದರ್ಥವಲ್ಲ. ಹೀಗಾಗಿ ಇದು ಒಂದು ಜಗತ್ತಿನಲ್ಲಿ ಈ ಸೀಮಾಬಂಧಿತವಾಗಿರುವ ಸ್ವರೂಪದಲ್ಲಿ ಮಾತ್ರ ಇರುವದಲ್ಲ. ನಾವು ಹಿಂದೂ ಧರ್ಮವನ್ನು ಸನಾತನ ಧರ್ಮವೆಂದು ಕರೆಯುತ್ತಿರುವದಕ್ಕೆ ಕಾರಣವೆಂದರೆ, ಇದು ಸಾರ್ವಭೌಮಿಕ ಸ್ವರೂಪದ ಧರ್ಮವಾಗಿದ್ದು ವಿಶ್ವದ ಸರ್ವರನ್ನೂ ಸರ್ವಸ್ವವನ್ನೂ ಅಪ್ಪಿಕೊಳ್ಳುವ ವಿಶೇಷ ಗುಣವಾಗಿದೆ. ಯಾವುದೇ ಧರ್ಮವು ಸಾರ್ವಭೌಮವಾಗಿರದೇ ಶಾಶ್ವತ ಧರ್ಮವಾಗಲು ಸಾಧ್ಯವಾಗುವದಿಲ್ಲ. ಸಂಕೀರ್ಣಮಯ ತತ್ತ್ವಗಳಿಂದ ಕೂಡಿದ ಧರ್ಮ, ಅಪ್ಪಟ ಸಾಂಪ್ರದಾಯಿಕ ಸ್ವರೂಪದ ಧರ್ಮ ಮತ್ತು ತನ್ನದೇ ಅಸ್ತಿತ್ವದ ಬಗೆಗೇ ಅಸ್ಮಿತೆಯನ್ನು

ರೂಪಿಸಿಕೊಂಡ ಧರ್ಮಗಳು ಸೀಮಿತ ಅವಧಿಯಲ್ಲಿ ಮಾತ್ರ ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳುವ ಉದ್ದೇಶದಿಂದಲೇ ಅಸ್ತಿತ್ವ ಪಡೆದುಕೊಂಡಿರುತ್ತವೆ.

ಆದರೆ ಯಾವ ಧರ್ಮವು ಭೌತಿಕ ಬದುಕಿನ ಮೇಲೆ ಪೂರ್ತಿ ವಿಜಯವನ್ನು ಸಾಧಿಸಿಕೊಂಡು, ವಿಜ್ಞಾನದ ಆನ್ವೇಷಣೆಗೆ ತೊಡಗಿಕೊಳ್ಳುತ್ತ, ಹಾಗೂ ಈ ಆತ್ಮಶೋಧನೆಯ ಊಹೆಗಳನ್ನು ರೂಪಿಸಿಕೊಂಡು, ಆ ಮೂಲಕ 'ದರ್ಶನ'ವನ್ನು ಪ್ರಾಪ್ತಗೊಳಿಸಿಕೊಳ್ಳುತ್ತದೆಯೋ ಅದು 'ಸನಾತನ ಧರ್ಮ'ವಾಗಿರುತ್ತದೆ. ಈ ಧರ್ಮವೇ ಮಾನವ ಕುಲದ ವಿಕಾಸವನ್ನು ರೂಪಿಸಿ, ಭಗವಂತನ ಸಾಮೀಪ್ಯವನ್ನು ಒದಗಿಸಿಕೊಡುತ್ತದೆ. ಕೇವಲ ಅವನ ಸಾಮೀಪ್ಯವನ್ನು ಒದಗಿಸುವದಷ್ಟೇ ಅಲ್ಲದೇ ಭಗವಂತನ ಅಪ್ಯಾಯಮಾನ ಅಪ್ಪುಗೆಯನ್ನೂ ಒದಗಿಸುತ್ತದೆ. ಮಾನವನು ಈ ಪರಮಾತ್ಮನನ್ನು ದೃಷ್ಟಿಸಲು–ಅನುಭಾವಿಸಲು ಸರ್ವ ರೀತಿಯಿಂದಲೂ ಮಾನವನಿಗೆ ಮಾರ್ಗದರ್ಶನ ಒದಗಿಸುತ್ತದೆ.

ಇದೇ ಧರ್ಮದ ಮೂಲ ತಿರುಳಾಗಿದೆ. ಇದು ಸತ್ಯದ ಪಥದಲ್ಲಿಯೇ ಸಾಗಲು ಹಾಗೂ ಉಳಿದೆಲ್ಲ ಧರ್ಮಗಳೂ ಇದನ್ನು ಅನುಸರಿಸಲು ಮಾರ್ಗ ನಿರ್ಮಿಸಿದೆ. ಏಕೆಂದರೆ ಈ "ಧರ್ಮವು" ಪ್ರತಿಯೋರ್ವ ಜೀವಿಯಲ್ಲಿಯೂ ಹಾಗೂ ಪ್ರತಿಯೊಂದು ವಸ್ತುವಿನಲ್ಲಿ ಅಂತರ್ಗತವಾಗಿದೆ. ಈ ಪಥದಲ್ಲಿ ಚಲಿಸಿ ವಿಕಾಸಗೊಳ್ಳುವದೇ ನಮ್ಮ ಅಸ್ತಿತ್ವವೂ ಆಗಿದೆ. ಈ ಧರ್ಮವೇ ನಮ್ಮನ್ನು ಸಶಕ್ತರನ್ನಾಗಿಸಿಯೇ ರೂಪಿಸುತ್ತಿದೆ. ಇದು ಕೇವಲ ಈ ರೀತಿಯ ವಿಶ್ವಾಸವನ್ನು ಮಾತ್ರ ಹೊಂದಿ, ಅದರೊಡನೆ ಸತ್ಯದ ಸ್ವರೂಪವನ್ನು ತಿಳಿದುಕೊಳ್ಳುವ ಕ್ರಿಯೆಯನ್ನಷ್ಟೇ ಅಲ್ಲದೇ ಅದನ್ನು ಅನುಭಾವಿಸಿಕೊಳ್ಳುವ ವರವನ್ನೂ ಒದಗಿಸುತ್ತದೆ. ಏಕೆಂದರೆ ಇದು ಅಸ್ತಿತ್ವದಲ್ಲಿರುವ ವಿಷಯವೇ ಆಗಿದ್ದು, ಅಸ್ತಿತ್ವದಲ್ಲಿರುವ ಸರ್ವ ಜೀವಿಗಳಿಗೂ ಲಭ್ಯವಿರುವ ಧರ್ಮವಾಗಿದೆ. ಈ ಧರ್ಮವು ಮಾತ್ರ ಈ ಜಗತ್ತು ಎಂದರೇನು ಎಂದು ತಿಳಿಸುತ್ತಾ, ಇದು 'ವಾಸುದೇವನ ಲೀಲೆ'ಯಾಗಿದೆ ಎಂದು ಸ್ಪಷ್ಟವಾಗಿ ಪ್ರಕಟಗೊಳಿಸುತ್ತದೆ. ಈ ಮೂಲಕ ನಾವು ಈ ಪರಮಾತ್ಮನ ಲೀಲೆಯಲ್ಲಿಯೇ ಬಾಳಿ, ನಮ್ಮ ನಮ್ಮ ಭೂಮಿಕೆಗಳನ್ನು ನಿಭಾಯಿಸುತ್ತಾ, ಜಗತ್ತಿನಲ್ಲಿ ಉಳಿದವರಿಗಿಂತ ಅತ್ಯುತ್ತಮವಾದ ಬದುಕನ್ನು ಹೊಂದುವ ಅವಕಾಶವನ್ನು ರೂಪಿಸಿದೆ. ಇದರ ಸೂಕ್ಷ್ಮಾತಿಸೂಕ್ಷ್ಮವಾಗಿರುವ ನಿಯಮಗಳು ಅಷ್ಟೇ ಮಹಾನ್ ನಿಯಮಗಳಾಗಿವೆ. ಜೀವನದ ಸ್ವರೂಪದಿಂದ ಯಾವುದೇ ರೀತಿಯಲ್ಲಿಯೂ ಭಿನ್ನಗೊಳಿಸದ ಹಾಗೆ ಸಂರಚನೆಗೊಂಡಿರುವ ಏಕೈಕ ಧರ್ಮ

ಇದಾಗಿದೆ. ಅಮರತ್ವ ಎಂದರೆ ಏನು ಎನ್ನುವದನ್ನೂ ಅತ್ಯಂತ ಸ್ಪಷ್ಟವಾಗಿಯೇ ವಿವರಿಸುವ ಮೂಲಕ, ಮೃತ್ಯುವಿನ ವಾಸ್ತವಿಕತೆಯನ್ನು ಸಂಪೂರ್ಣ ದೂರವಿಡುವ ವಿಧಾನವನ್ನು ಒದಗಿಸುತ್ತಿರುವ ಧರ್ಮವಿದಾಗಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 8/10–12 – ಶ್ರೀ ಅರವಿಂದರು**

---

## ಭಾರತದ ಆತ್ಮ

**– ಅನುವಾದ: ಪುಟ್ಟು ಕುಲಕರ್ಣಿ**

### "ಏಕಮೇವಾದ್ವಿತೀಯಮ್" ಅಂದರೆ ಯಾವುದಕ್ಕೂ ಎರಡನೇಯದಲ್ಲದ

ಈ ಸಮನ್ವಯಪೂರ್ಣವಾಗಿಯೇ ಸಂಯೋಜನೆಗೊಂಡಿರುವ ಈ ಸುವ್ಯವಸ್ಥೆಯ ಧರ್ಮವು ಇದನ್ನು ಅಳವಡಿಸಕೊಳ್ಳಲು ಒತ್ತುಕೊಟ್ಟು ತಿಳಿಸುತ್ತಿದೆ. ಇದನ್ನು ಅಳವಡಿಸಿಕೊಳ್ಳುವದು ಅತ್ಯಂತ ಅವಶ್ಯಕವೂ ಆಗಿದೆ. ಭಾರತೀಯ ಮನೋಭೂಮಿಕೆಯಲ್ಲಿ ಅಂತರ್ಗತವಾಗಿರುವ – ಸಹಜ ಸ್ವಭಾವವಾಗಿರುವ – ಭಾರತೀಯ ಧಾರ್ಮಿಕ ಮನೋಭೂಮಿಕೆಯ ಏಕತೆಗಾಗಿ ಇದನ್ನು ಅಳವಡಿಸಿಕೊಳ್ಳಲೇಬೇಕಾಗಿದೆ. ಒಂದು ವೇಳೆ ನಾವು ಇಲ್ಲಿ ವಿಫಲವಾದರೆ ನಮ್ಮ ಜೀವನದ ಸಂಪೂರ್ಣ ಅರ್ಥವನ್ನು ಕಳೆದುಕೊಳ್ಳುದಲ್ಲದೇ ಭಾರತೀಯತೆಯ ಅರ್ಥವನ್ನೂ ಕಳೆದುಕೊಳ್ಳುತ್ತೇವೆ. ಈ ರೀತಿಯ ವೈಶಾಲ್ಯತೆಯನ್ನು ಹಾಗೂ ಸುನಮ್ಯತೆಯ ಗುಣವನ್ನು ಹೊಂದಿರುವ ಅನುಭವವನ್ನು ನಾವು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವ ಮೂಲಕ ಅದನ್ನು ಅರ್ಥೈಸಿಕೊಳ್ಳಬಹುದಾಗಿದೆ. ಇಲ್ಲಿ ವ್ಯಷ್ಟಿ ಮತ್ತು ಸಮಷ್ಟಿ ಎರಡರ ಕುರಿತೂ ಸೂತ್ರಗಳಿವೆ. ವ್ಯಕ್ತಿ ಮತ್ತು ವಿಶ್ವದ ಕುರಿತು ನಮ್ಮ ನಮ್ಮ ಪಾತ್ರವನ್ನು ನಾವು ಇದರ ಮೂಲಕ ಅರ್ಥೈಸಿಕೊಳ್ಳಲು ಸಾಧ್ಯವಾಗುತ್ತದೆ.

ಇಷ್ಟೆಲ್ಲಾ ಆದ ಮೇಲೂ ಹಿಂದೂ ಧರ್ಮ ಎಂದರೆ ಏನು, ಅದು ಏನನ್ನು ಬೋಧಿಸುತ್ತಿದೆ, ಏನನ್ನು ಅಳವಡಿಸಿಕೊಳ್ಳಲು ಅಪೇಕ್ಷಿಸುತ್ತದೆ ಅದರ ಸರ್ವೇ ಸಾಮಾನ್ಯ ಅಂಶಗಳು ಏನು ಎಂದು ವಿಚಾರಿಸಿದರೆ, ಇಲ್ಲಿ ಅದಕ್ಕೆ ಮೂರು ಉತ್ತರಗಳು ಸಿಗುತ್ತವೆ. ಏಕೆಂದರೆ ಈ ಮೂಲಭೂತ ಚಿಂತನವು ಅತ್ಯಂತ ಪ್ರಮುಖವಾದ ಮೂರು ಅಂಶಗಳನ್ನು ಆಧರಿಸಿಕೊಂಡೇ ಸ್ವರೂಪ ಪಡೆದುಕೊಂಡಿದೆ. **'ಔನ್ನತ್ಯ ಮತ್ತು ವೈಶಾಲ್ಯತೆಯಿಂದ ಸಂಲಗ್ನಗೊಂಡಿರುವ**

**ಆಧ್ಯಾತ್ಮಿಕ ವಿಚಾರಗಳು'** ಮೊದಲ ಸ್ಥಾನದಲ್ಲಿ ಇರುತ್ತವೆ. ವೇದ ಕಾಲದ ದ್ರಷ್ಟಾರರು ಅಭಿವ್ಯಕ್ತಿಸಿರುವ "ಏಕಮೇವಾದ್ವಿತೀಯಮ್" ಆಯಾ ಅವಧಿಗೆ ಋಷಿಗಳು ವಿಧವಿಧದ ನೆಲೆಯಲ್ಲಿ ಈ ಅಸ್ತಿತ್ವದ ನೆಲೆಯನ್ನು ಬೋಧಿಸಿದ್ದಾರೆ. ಉಪನಿಷತ್ತುಗಳಲ್ಲಿ 'ಎರಡಿಲ್ಲದ' ಅಂದರೆ ಏಕಮೇವ ಎನ್ನುವದನ್ನು ತಿಳಿಸುತ್ತಾರೆ. ಇದೆಲ್ಲದಕ್ಕೂ ಮೀರಿರುವ ಪರಮಾತ್ಮನೆಂದೂ ತಿಳಿಸುತ್ತಾರೆ. ಅದೇ ರೀತಿಯಲ್ಲಿ ಬೌದ್ಧರ ಅಸ್ತಿತ್ವವಾದ, ಭ್ರಮಾವಾದಿಗಳ ನಿರಪೇಕ್ಷತೆ, ಆಸ್ತಿಕ ಮನೋಭಾವವನ್ನು ಹೊಂದಿರುವವರಲ್ಲಿ ಶಕ್ತಿಯಿಂದ ತುಂಬಿರುವ ಆತ್ಮ ಮತ್ತು ಪ್ರಕೃತಿ, ಶಾಶ್ವತತೆ ಅನಂತಾನಂತೆಗಳು ಇಲ್ಲಿವೆ. ಆದರೆ ಈ ಎಲ್ಲವೂ ಇಲ್ಲಿ ಭದ್ರ ಬುನಾದಿಯಾಗಿದೆ. ಹೀಗಾಗಿ ಇಲ್ಲಿ ಮಾನವನು ಆನ್ವೇಷಣೇಗೆ ತೊಡಗಿಕೊಳ್ಳಲು, ವಿವಿಧ ಸೂತ್ರಗಳನ್ನು ರೂಪಿಸಕೊಳ್ಳುತ್ತ, ಆ ಪರಮ ತತ್ತ್ವವನ್ನು–ಪರಮಾತ್ಮನನ್ನು ಸಮೀಪಿಸುತ್ತ ಹಾಗೂ ಅದರೊಡನೆ ನಿಕಟಗೊಳ್ಳಲು ಮತ್ತು ಏಕೋಭಾವ ಹೊಂದಿ ಅಲ್ಲಿ ಪ್ರವೇಶಿಸಲು ಅವಕಾಶ ಒದಗಿಸುತ್ತದೆ. ಯಾವ ಪಥದಿಂದಲಾದರೂ ಸರಿ ಈ ಏಕತೆಯೊಂದಿಗೆ ಸಂಯೋಗಗೊಳ್ಳುವದೆ ಸಾಯುಜ್ಯವಾಗಿದೆ. ಇದೇ ಭಾರತೀಯ ಚಿಂತನೆ, ಭಾರತೀಯ ಚಿತ್ತ ಮತ್ತು ಭಾರತೀಯ ಆಧ್ಯಾತ್ಮಿಕ ಅನುಭವವಾಗಿ ಭಾರತೀಯ ಮನಸ್ಸಿನಲ್ಲಿ ಸಾರ್ವತ್ರಿಕ ವಿಶ್ವಾಸವೂ ಆಗಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 20/193–94**

### ಸಾಂತ ಮತ್ತು ಅನಂತತೆಯ ಕುರಿತು ರೂಪಣೆಗೊಂಡ ಆಯಾಮಗಳು

ಭಾರತದಲ್ಲಿ ಅನುಷ್ಠಾನಗೊಂಡಿರುವ ಸಾವಿರಾರು ಮಾರ್ಗಗಳಲ್ಲಿ, ರೂಪಿತಗೊಂಡಿರುವ ಹಲವಾರು ಆಯಾಮಗಳಲ್ಲಿ ಯಾವುದಾದರೂ ಒಂದನ್ನು ಆಯ್ದುಕೊಂಡು ಅದನ್ನೇ ಸಂಪೂರ್ಣವಾಗಿ ಸ್ವೀಕರಿಸಿಕೊಂಡು, ಅದನ್ನೇ ಭದ್ರಬುನಾದಿಯನ್ನಾಗಿಸಿಕೊಂಡು, ಆಧ್ಯಾತ್ಮಿಕ ಪ್ರಗತಿಯ ಪಥದಲ್ಲಿ ಮುಂದುವರೆಯಬಹುದು. ಇಲ್ಲವಾದಲ್ಲಿ ಈ ಮಾರ್ಗಗಳ ಮೂಲಕ ಕವಲೊಡೆದುಕೊಂಡು ನಿರ್ಮಾಣಗೊಂಡಿರುವ ಯಾವುದೇ ಮಾರ್ಗವೂ ಸಹಿತ ಇದೇ ಧರ್ಮದ ಆಂತರ್ಯವನ್ನೇ ಹೊಂದಿದೆ. ಅದರ ತಿರುಳನ್ನೇ ಒಳಗೊಂಡಿದೆ. ಮತ್ತೂ ಮುಂದುವರೆದಂತೆ, ಇಲ್ಲಿ ರೂಪಿತಗೊಳ್ಳುವ ನವೀನ ಮಾರ್ಗಗಳೂ ಸಹಿತ ಇದೇ ಸ್ಪಂದನವನ್ನು ಹೊಂದಿವೆ. ಹೀಗಾಗಿ ಇದರ ಎರಡನೇ ತತ್ತ್ವವು – ಬಹು ಆಯಾಮದ ಸ್ವರೂಪದಲ್ಲಿದೆ.

ಇಲ್ಲಿ ಮಾನವನ ಅನುಭವಕ್ಕೆ ಬಂದಿರುವಂತೆ ಬಹುತ್ವದ ಆಯಾಮದಲ್ಲಿಯೇ ಅನಂತತೆಯನ್ನು ಮತ್ತು ಶಾಶ್ವತತೆಯನ್ನು ಪಡೆದುಕೊಳ್ಳುವ ಪಥವನ್ನು ರೂಪಿಸಿದೆ. ಇಲ್ಲಿರುವ ಅನಂತತೆಯೂ ಬಹುತ್ವದ ಸ್ವರೂಪದಲ್ಲಿಯೇ ಇದೆ. ಜೊತೆಗೆ ಅದು ಅಪೂರ್ಣತೆಯನ್ನೂ ಅಭಿವ್ಯಕ್ತಿಸುತ್ತದೆ. ಅಂದರೆ ಇವೆಲ್ಲವುಗಳ ಮೂಲಕ ಪೂರ್ಣತೆಯತ್ತ ಸಾಗಬೇಕೆನ್ನುವ ಗಮ್ಯವನ್ನು ತೋರಿಸುತ್ತಿವೆ. ಆಶ್ಚರ್ಯವೆಂದರೆ ಈ ಅಪೂರ್ಣತೆಗಳೂ ಸಹಿತ ಶಾಶ್ವತದ ಸ್ವರೂಪದಲ್ಲಿದ್ದಂತೆಯೇ ಗೋಚರವಾಗುತ್ತವೆ. ಇಂತಹ ಬ್ರಹ್ಮಾಂಡ ಸ್ವರೂಪದಲ್ಲಿ 'ದೇವರೂ' ಪ್ರತ್ಯಕ್ಷಗೊಳ್ಳುತ್ತಾನೆ; ಪ್ರಕಟಗೊಳ್ಳುತ್ತಾನೆ. ಸ್ವತಃ ತಾನೇ ತನ್ನ ಸ್ವರೂಪವನ್ನೂ ರೂಪಿಸಿಕೊಂಡು ತನ್ನ ಅಸ್ತಿತ್ವವನ್ನು ಪಡೆದುಕೊಳ್ಳುತ್ತಾನೆ. ಇದನ್ನು ಪ್ರತಿ ಸಾಂತದಲ್ಲಿ, ಸಂರಚನೆಯ ಬಂಧದಲ್ಲಿ ಕಾಣಬಹುದು. ಆ ಸಂದರ್ಭಗಳಲ್ಲಿ ರೂಪಗೊಳ್ಳುವ ಸಂಕೇತಗಳ ಮೂಲಕವೋ ಅಥವಾ ಪ್ರತಿಮೆಗಳ ಮೂಲಕವೋ ನಾವು ಆ ಪಥದಲ್ಲಿ ಸಾಗಿ ಪ್ರಗತಿಯನ್ನು ಕಾಣಬಹುದು, ಈ ಮೂಲಕವಾಗಿಯೇ ಅನಂತತೆಯ ಸ್ವರೂಪವನ್ನೂ ಸ್ಪಂದನಗೊಳ್ಳಬಹುದು. ಏಕೆಂದರೆ ಈ ಎಲ್ಲಾ ಶಕ್ತಿಗಳು ಆ ಅನಂತತೆಯ ಅಂಶಾಂಶವೇ ಆಗಿವೆ.

ಇಲ್ಲೆಲ್ಲ ಇರುವ ಈ ರೀತಿಯ ಪ್ರಾಕೃತಿಕ–ನೈಸರ್ಗಿಕ ಘಟನಾವಳಿಗಳ ಹಿಂದೆ ಇರುವ ಶಕ್ತಿಗಳನ್ನು(ದೈವಗಳನ್ನು) ನಾವು ಕಾಣಬೇಕಾಗಿದೆ. ಹಲವಾರು ಸ್ವರೂಪದಲ್ಲಿರುವ, ಹಲವಾರು ನಾಮಗಳಲ್ಲಿರುವ ಇವೆಲ್ಲವೂ ಆ ಏಕದ ಅಂದರೆ ಪರಮಾತ್ಮನ ಶಕ್ತಿಯೇ ಆಗಿವೆ. ಆದರೆ ಬೇರೆಬೇರೆ ನಾಮಗಳಿಂದ ಪೂಜಿಸಲ್ಪಡುತ್ತಿವೆ; ಆರಾಧಿಸಲ್ಪಡುತ್ತಿವೆ. ಇಲ್ಲಿ ವ್ಯಕ್ತಿ–ಸ್ವರೂಪದ ಆರಾಧನಾ ಪದ್ಧತಿಯೂ ಮಿಳಿತಗೊಂಡಿದೆ. ಅನಂತಾನಂತವಾಗಿರುವ ಚೈತನ್ಯ–ಶಕ್ತಿ, ಸೃಷ್ಟಿಪಾಲನಾ ಶಕ್ತಿ (ಕಾರ್ಯಕಾರಿ ಶಕ್ತಿ), ಇಚ್ಛೆ ಮತ್ತು ವಿಶ್ವ ನಿಯಮ ಏನೇ ಇದ್ದರೂ ಇವೆಲ್ಲವುಗಳ ಹಿಂದೆ ಇರುವದನ್ನು ಮಾಯೆ, ಶಕ್ತಿ, ಪ್ರಕೃತಿ ಅಥವಾ ಕರ್ಮ ಎಂದು ಅನುಸರಿಸಲ್ಪಡುತ್ತಿದೆ. ಇಲ್ಲಿ ರೂಪಿತಗೊಂಡಿರುವ ದೇವತೆಗಳಲ್ಲಿಯೂ ನಮಗೆ ಪೂಜಾರ್ಹರಾಗಿರುವವರು, ಅಥವಾ ಪೂಜಾ ವಿಧಾನದಿಂದ ದೂರವಾದವರು, ನಮಗೆ ಶುಭವನ್ನು ಕೊಡುವವರು, ನಮಗೆ ಆಶುಭವನ್ನು ತೋರುವವರು, ನಮಗೆ ಅದೃಷ್ಟವನ್ನು ತರುವವರು ಅಥವಾ ಪ್ರತಿಕೂಲವನ್ನು ರೂಪಿಸುವವರು ಎಂದೆಲ್ಲಾ ಸೃಷ್ಟಿಗಳಿವೆ. ಹೀಗಾಗಿ ಇದು ಅನಂತತೆಯನ್ನೇ ಸೃಷ್ಟಿಸುತ್ತದೆ. ಅದಕ್ಕಾಗಿಯೇ ಇದನ್ನು 'ಬ್ರಹ್ಮ'ವೆಂದು ಕರೆಯಲಾಗಿದೆ. ಸಂರಕ್ಷಣೆಯ ದೃಷ್ಟಿಯಿಂದ ಇದನ್ನೇ ವಿಷ್ಣು

ಎಂದೂ, ಲಯಗೊಳಿಸುವ ಮೂಲಕವಾಗಿ ತನ್ನನ್ನು ತಾನೇ ಮತ್ತೊಂದು ಉದಯಕ್ಕಾಗಿ ಇಲ್ಲಿ ಲಯಗೊಳ್ಳುವ ರುದ್ರ ಅಥವಾ ಶಿವನೆಂದು ಆರಾಧನೆ ರೂಪಿತಗೊಂಡಿದೆ.

ಈ ಅಖಂಡ ಸೃಷ್ಟಿಯನ್ನು ಸಂರಕ್ಷಿಸಿ ಪಾಲಿಸಿ ಪೋಷಿಸುವ ಮೂಲಕ ಆ ಔನ್ನತ್ಯದ ಶಕ್ತಿಯನ್ನು ವಿಶ್ವಮಾತೆ, ಪ್ರಪಂಚಗಳನ್ನು ಸೃಷ್ಟಿಸಿದವಳು, ಜಗನ್ಮಾತೆ ಎಂದೂ, ಲಕ್ಷ್ಮೀ ಅಥವಾ ದುರ್ಗಾ ಎಂದು ಸ್ವತಃ ತನ್ನನ್ನು ತಾನೇ ರೂಪಿಸಿಕೊಳ್ಳುತ್ತದೆ. ಲಯಗೊಳಿಸುವ ಅಥವಾ ವಿನಾಶದ ಹಂತದಲ್ಲಿಯೂ ಸಹಿತ ಅದು ಒಂದು ನಿಗದಿತ ಉದ್ದೇಶದಲ್ಲಿಯೇ – ಅಂದರೆ ಪ್ರಯೋಜನಕಾರಿಯಾಗಿಯೇ – ರೂಪಿತಗೊಳ್ಳುತ್ತದೆ. ಇದನ್ನೇ ಚಂಡೀ ಅಥವಾ ಕಾಳೀ, ಕಠೋರತೆಯ ಮಾತೆ ಎಂದು ಆರಾಧಿಸಲಾಗುತ್ತದೆ. ಹೀಗಾಗಿ ಇಲ್ಲಿ "ಏಕ ದೇವತಾ" ಸ್ವರೂಪವೇ ಪ್ರಕಟಗೊಳ್ಳುತ್ತಿದ್ದು, ವಿವಿಧ ರೂಪಗಳಲ್ಲಿ ಮತ್ತು ನಾಮಗಳಲ್ಲಿ ಆ ಪರಮ ತತ್ತ್ವದ ಗುಣಗಳನ್ನು ರೂಪಿಸಲಾಗಿದೆ. ದೈವಿಕ ಪ್ರೇಮದ ವೈಷ್ಣವರ ದೇವತೆ ಮತ್ತು ಶಾಕ್ತ ಪಂಥದ ದೈವಿಕ ಶಕ್ತಿಯ ದೇವತೆ ಎಂದು ಎರಡು ಸ್ವರೂಪದಲ್ಲಿ ಕಾಣಲಾಗುತ್ತದೆ. ಆದರೆ ವಾಸ್ತವದಲ್ಲಿ ಇವರಿಬ್ಬರೂ ಆ ಅನಂತತೆಯ ಸಾಕಾರವೇ ಆಗಿದ್ದು, ಈ ರೀತಿಯ ಅನಂತ ಸ್ವರೂಪದ ನಾಮಗಳಲ್ಲಿ ಮತ್ತು ಸ್ವರೂಪದಲ್ಲಿ ಆ ಅನಂತತೆಯನ್ನು ಪಡೆದುಕೊಳ್ಳುವ ಸಲುವಾಗಿಯೇ ಈ ಅಭಿವ್ಯಕ್ತಿಗಳು ಇವೆ. ಈ ರೀತಿಯ ಅನಂತತೆಯ ಗಮ್ಯವನ್ನು ಜ್ಞಾನದ ಸ್ವರೂಪದಲ್ಲಿಯೂ ಪಡೆದುಕೊಳ್ಳಬಹುದು; ಅಜ್ಞಾನದ ಪಥದಲ್ಲಿ ಸಾಗಿಯೂ ಸಹಿತ – ಮುಗ್ಧ ಭಕ್ತಿಯ ಸ್ವರೂಪದಲ್ಲಿಯೂ ಈ ಅನಂತತೆಯನ್ನು ಪಡೆದುಕೊಳ್ಳಬಹುದು; ಈ ಪಥಗಳ ಮೂಲಕವೇ ನಾವು ಆರೋಹಣಗೊಳ್ಳುತ್ತ, ಅಂತಿಮವಾಗಿ ಪರಿಪೂರ್ಣಗೊಳ್ಳುವದಕ್ಕೆ, ಹಾಗೂ ಆ ಪರಿಪಕ್ವ–ಪೂರ್ಣತೆಯನ್ನು ಪಡೆದುಕೊಳ್ಳಲಿಕ್ಕೆ ಪ್ರಗತಿ ಸಾಧಿಸಬಹುದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 20/194–95**

## ಪ್ರತಿಯೊಬ್ಬ ಮಾನವನ ಅಂತರಂಗದಲ್ಲಿ ಪರಮಾತ್ಮ ನೆಲೆಸಿದ್ದಾನೆ

ಭಾರತೀಯ ಪರಂಪರೆಯ ಆಧಾರದಲ್ಲಿ ರೂಪಿತಗೊಂಡಿರುವ ಮೂರನೇ ಕಲ್ಪನೆ ಇದು. ಇದು ಆಂತರಿಕ ಆಧ್ಯಾತ್ಮಿಕ ಜೀವನಕ್ಕೆ ಧರ್ಮವು ಹೇಗೆ ಕ್ರಿಯಾತ್ಮಕವಾಗಿದೆ ಮತ್ತು ಗತಿಶೀಲವಾಗಿದೆ ಎನ್ನುವದನ್ನು ಸ್ಪಷ್ಟಗೊಳಿಸುತ್ತದೆ.

ಇದು ಸರ್ವೋಚ್ಚತಮವಾಗಿದ್ದು, ದೈವಿಕವೂ ಆಗಿದೆ, ಇದನ್ನು ಸರ್ವರೂ – ತಮ್ಮ ಅಂತರಂಗದಲ್ಲಿ ತಲ್ಲೀನರಾಗುವ ಮೂಲಕ, ಬಾಹ್ಯ ಸಂಪರ್ಕವನ್ನು ನಿಯಂತ್ರಿಸಿಕೊಳ್ಳುವದರ ಮೂಲಕ, ಅಥವಾ ತ್ಯಾಗದ ಮೂಲಕ – ಸಂಪರ್ಕಿಸಬಹುದಾಗಿದೆ. ಇದಕ್ಕಾಗಿ ತನ್ನದೇ ಅಸ್ಮಿತೆಯ ಆಧ್ಯಾತ್ಮಿಕ ವ್ಯವಸ್ಥೆಯಲ್ಲಿ, ಅದರೊಂದಿಗೆ ಸ್ಪಂದನಗೊಳ್ಳುವ ಮೂಲಕ ಆ ಅಸ್ತಿತ್ವದೊಂದಿಗೆ ಸಂಯೋಗಗೊಳ್ಳುವ ವಿಷಯಕ್ಕೆ ಸಂಬಂಧಿಸಿದೆ.

ಭಾರತೀಯ ಧರ್ಮದ ಮೂಲತತ್ತ್ವವೆಂದರೆ, 'ಅಜ್ಞಾನದಿಂದ ಪಾರಾಗಿ, ಜ್ಞಾನಪೂರ್ಣರಾಗಿ ಪ್ರಗತಿಗೊಳ್ಳುವ ಮತ್ತು ಮಾನವ ಬದುಕನ್ನೂ ರೂಪಿಸಿಕೊಳ್ಳುವ ಗಮ್ಯವಾಗಿದೆ'. ಇದಕ್ಕಾಗಿ ನಮ್ಮ ಮನಸ್ಸು, ನಮ್ಮ ಚಿತ್ತ ಸ್ವಯಂ ಅನುಭವದ ಮೂಲಕವೇ ಜ್ಞಾನವನ್ನು ಪ್ರಾಪ್ತಗೊಳಿಸಿಕೊಳ್ಳಬೇಕು. ಈ ಸಂಗತಿಯನ್ನು ಅನುಸಂಧಾನ ಮಾಡಿಕೊಳ್ಳುತ್ತ, ನಮ್ಮಂತರಂಗದಲ್ಲಿಯೇ ಇರುವ ದೈವತ್ವವನ್ನು ದೃಷ್ಟಗೊಳ್ಳುವದು ಜೀವನದ ಗುರಿಯಾಗಬೇಕು. ಈ ಮೂರು ತತ್ತ್ವಗಳನ್ನು ಸುಸಂಗತವಾಗಿ ನೇಯ್ಗೆ ಮಾಡಿಕೊಂಡ ಧರ್ಮವೇ ಹಿಂದೂ ಧರ್ಮವಾಗಿದೆ. ಇದೇ ಹಿಂದೂ ಧರ್ಮದ ಶ್ರೇಯವೂ ಹೌದು; ಪ್ರಮಾಣವೂ ಹೌದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 20/195**

## ಭಾರತದ ಚಿತ್ತ

**– ಅನುವಾದ: ಪ್ರೊ. ವೀರಭದ್ರಪ್ಪ ಕೆ., ರಾಯಚೂರು**

**ದೇವತೆಗಳ ಭಾಷೆ**

ಪುರಾತನ ಮತ್ತು ಶಾಸ್ತ್ರೀಯ ಸಂಸ್ಕೃತ ಭಾಷೆಯ ಸೃಷ್ಟಿ ಉತ್ಕೃಷ್ಠತೆಯಲ್ಲಿ ರಚನೆಯಲ್ಲಿ ಮತ್ತು ಶ್ರೇಷ್ಠತೆಯಲ್ಲಿ ಹೇರಳವಾಗಿದೆ. ಅದು ತನ್ನ ಸಾರದಲ್ಲಿ, ಕಲೆಯಲ್ಲಿ ಮತ್ತು ತನ್ನ ಅಸ್ಮಿತೆಯಯಲ್ಲಿ ವೈಭವಯುತವಾಗಿದೆ. ಜಗತ್ತಿನ ಉನ್ನತ ಸಾಹಿತ್ಯಗಳಲ್ಲಿ, ವೈಭವದಲ್ಲಿ, ನ್ಯಾಯ ಸಲ್ಲಿಕೆಯಲ್ಲಿ, ಸೊಬಗಿನಲ್ಲಿ ಸ್ಪಷ್ಠವಾಗಿದೆ. ಭಾಷೆ ಕೂಡ ವಿಶ್ವಾತ್ಮಕವಾಗಿ ಎಲ್ಲರೂ ನಿರ್ಧರಿಸುವಂತೆ, ಒಂದು ಅದ್ಭುತವಾದ, ಬಹಳ ಪರಿಪೂರ್ಣವಾದ ಮತ್ತು ಮಾನವ ಮನಸ್ಸು ನಿರ್ಮಿಸಿದ ಅದ್ಭುತವಾದ ಸಾಹಿತ್ಯದ ಭಾಷೆ, ಅದು ಒಂದು ಸಲ ಗಾಂಭಿರ್ಯ ಮತ್ತು ಮಧುರ ಮತ್ತು

ಸೌಷಮ್ಯಪೂರ್ಣ ಸಾಮರ್ಥ್ಯದ ಮತ್ತು ಸ್ಪಷ್ಟವಾಗಿ ರೂಪುಗೊಂಡ, ಪೂರ್ಣ ಮತ್ತು ಜೀವದುಂಬಿದ ಮತ್ತು ಸೂಕ್ಷ್ಮತೆಯಿಂದ ಸಮೃದ್ಧವಾಗಿದೆ. ಅದರ ಉತ್ಕೃಷ್ಟತೆ ಮತ್ತು ಗುಣಗಳು ಅದು ಯಾವ ಜನಾಂಗದ ಮನಸ್ಸನ್ನು ಬಿಂಬಿಸುತ್ತಿದೆಯೆಂದು ಸ್ಪಷ್ಟವಾಗಿ ಗೋಚರಿಸುತ್ತದೆ. ಮತ್ತು ಅದು ಬಿಂಬಿಸುವ ಸಂಸ್ಕೃತಿಯನ್ನು ವ್ಯಕ್ತಮಾಡುತ್ತದೆ. ಅದರ ಉನ್ನತತೆ ಮತ್ತು ಉದಾತ್ತತೆಯನ್ನು ಕವಿಗಳು ಮತ್ತು ಚಿಂತಕರು ಉಪಯೋಗಿಸಿಕೊಂಡರೂ ಅದರ ವೈಭವದ ಸಾಮರ್ಥ್ಯತೆಯಲ್ಲಿ ಔನ್ನತ್ಯದಿಂದ ಕೆಳಗಿಳಿಯಲಿಲ್ಲ. ಬರೀ ಸಂಸ್ಕೃತ ಭಾಷೆಯಲ್ಲಿ ಮಾತ್ರ ಭಾರತೀಯ ಮನಸ್ಸು ಉನ್ನತವಾದ, ಸುಂದರವಾದ ಮತ್ತು ಪರಿಪೂರ್ಣತೆಯನ್ನು ಮಾಡಿಲ್ಲ. ಬದಲಾಗಿ ಆ ಭಾಷೆಯಲ್ಲಿ ಹೆಚ್ಚಾಗಿ ಹೆಚ್ಚು ಪ್ರಮುಖವಾಗಿ ರೂಪಿಸಲು ಮತ್ತು ವೈಭವಯುತವಾದ ರಚನೆಗಳಾದವು. ಪಾಳಿ ಭಾಷೆಯಲ್ಲಿಯ ಬೌದ್ಧರ ಸಾಹಿತ್ಯವನ್ನು ಸಹ ಒಟ್ಟಾರೆಯಾಗಿ ಪರಿಗಣಿಸಬೇಕಾಗುತ್ತದೆ ಮತ್ತು ಇಲ್ಲಿ ಕವನ ಸಾಹಿತ್ಯ ಸಮೃದ್ಧಿಯಾಗಿದೆ. ಅವು ಬಹಳ ವಿರಳವಾಗಿ ರಚಿಸಲ್ಪಟ್ಟಿವೆ. ಸುಮಾರು ಹತ್ತನ್ನೆರಡು ಸಂಸ್ಕೃತದ ಮತ್ತು ದ್ರಾವಿಡ ಭಾಷೆಗಳಿವೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 20/314–15**

### ಇತಿಹಾಸ ಅಥವಾ ಇತಿಹಾಸದ ಸಂಪ್ರದಾಯ

ಪುರಾತನ ವೇದದ ಅಧ್ಯಯನದ ಒಂದು ಅಂಶವೇನೆಂದರೆ ಒಂದು ಪ್ರಮುಖವಾದ ಜ್ಞಾನದ ಸಂಪ್ರದಾಯ, ಇತಿಹಾಸ ಮತ್ತು ಇದೇ ಶಬ್ದವನ್ನು ಪುರಾತನ ವಿಮರ್ಶಕರು ರಾಮಾಯಣ ಮತ್ತು ಮಹಾಭಾರತ ಮಹಾ ಕಾವ್ಯಗಳನ್ನು ಇತ್ತೀಚಿನ ಕಾವ್ಯಗಳಿಂದ ಗುರುತಿಸುತ್ತಿದ್ದರು. ಇತಿಹಾಸ ಎಂದರೆ ಪುರಾತನ ಅಥವಾ ಪುರಾಣ ಪುರುಷರ ಸಂಪ್ರದಾಯ ರಚನೆ ಶಕ್ತಿಯನ್ನು ಉಪಯೋಗಿಸುವುದು, ಮಹತ್ವದ ಅಥವಾ ಕಥೆಗಳ ಮೂಲಕ ಜನರ ಮನಸ್ಸನ್ನು ರೂಪಿಸುವ, ಆಧ್ಯಾತ್ಮಿಕ ಅಥವಾ ಧಾರ್ಮಿಕ – ಅದರಲ್ಲಿ – ನೈತಿಕ ಅಥವಾ ಆದರ್ಶಗಳನ್ನು ವ್ಯಕ್ತಮಾಡುವುದೇ ಆಗಿದೆ. ಮಹಾಭಾರತ ಮತ್ತು ರಾಮಾಯಣಗಳೆರಡೂ ಒಂದು ಘನ ಉದ್ದೇಶಕ್ಕಾಗಿ ಮತ್ತು ಬೃಹತ್ ಪ್ರಮಾಣದ ರೀತಿಯ ಇತಿಹಾಸವಾಗಿ ಸ್ವರೂಪ ತಾಳಿವೆ. ಯಾವ ಕವಿಗಳು ಈ ಕಾವ್ಯಾತ್ಮಕ ಬರವಣಿಗೆಗಳನ್ನು ಬರೆದರೂ ಮತ್ತು ಉನ್ನತವಾದವುಗಳಿಗೆ ತಮ್ಮ ಕೊಡುಗೆಗಳನ್ನು ಸೇರಿಸಿದರೋ, ಅವರ ಉದ್ದೇಶ ಬರೀ ಕಥೆಗಳನ್ನು ಬಹಳ ಸುಂದರವಾಗಿ ಉದಾತ್ತವಾಗಿ ಹೇಳದೇ, ಆ

ರೀತಿಯಿಂದ ಅಥವಾ ತಮಗೆ ಆಸಕ್ತಿಯಿಂದ ವಿಷಯಗಳಿಗೆ ಅವುಗಳನ್ನು ತುಂಬಿಸಿದ್ದರೂ, ಅಲ್ಲಿ ಇವೆರಡನ್ನು ಬಹಳ ಯಶಸ್ವಿಯಾಗಿ ಮಾಡಿದರು. ಅವರು ಇವುಗಳನ್ನು ಜೀವನವನ್ನು ರೂಪಿಸುವ ಬರಹಗಳನ್ನಾಗಿ ಅರ್ಥೈಸಿದರು. ಸೃಜನಾತ್ಮಕ ಪ್ರತಿಪಾದನೆಗಳೆಂದು, ರಾಷ್ಟ್ರೀಯ ಆಲೋಚನೆಗಳನ್ನು ರೂಪಿಸುವ ಮತ್ತು ಧಾರ್ಮಿಕ ನೈತಿಕ ಸಾಂಸ್ಕೃತಿಗಳನ್ನು ಬಿಂಬಿಸುವಲ್ಲಿ ಯಶಸ್ವಿಯಾದವು. ಒಂದು ಸಮಗ್ರವಾದ ಆಲೋಚನೆಯ ಒತ್ತು ಜೀವನದ ಮೇಲೆ, ಧರ್ಮ ಮತ್ತು ಸಮಾಜದ ಮೇಲೆ ಆಗುವಂತೆ, ವಿಶಾಲವಾದ ಮತ್ತು ಮುಖ್ಯವಾದ ನೋಟದಿಂದ, ತತ್ತ್ವಭಾವದ ಪರಿಕಲ್ಪನೆಯ ಛಾಯೆಗಳನ್ನು ಈ ಕಾವ್ಯಗಳ ಮೂಲಕ ಸೃಷ್ಟಿಸಲಾಗಿದೆ. ಆಮೂಲಾಗ್ರವಾದ ವಿವೇಕ, ಪರಿಕಲ್ಪನೆಯ ಶಕ್ತಿ ಮತ್ತು ಒಂದು ಜೀವಂತ ಸಾನಿಧ್ಯ ಮತ್ತು ಭಾರತದ ಪುರಾತನ ಸಂಸ್ಕೃತಿ ಇವುಗಳಲ್ಲಿ ಎರಕಗೊಂಡಿವೆ. ಮಹಾಭಾರತವನ್ನು ಐದನೆಯ ವೇದವೆಂದು ಹೇಳುವ ಇವೆರಡೂ ಕಾವ್ಯಗಳು ಬರೀ ಉನ್ನತ ಮಹಾಕಾವ್ಯಗಳಲ್ಲದೆ ಧರ್ಮಶಾಸ್ತ್ರಗಳೇ ಆಗಿವೆ. ಅವು ಧರ್ಮವನ್ನು, ನೈತಿಕತೆಯನ್ನು ಸಾಮಾಜಿಕ ಮತ್ತು ರಾಜಕೀಯವನ್ನು ಬೋಧಿಸುತ್ತವೆ. ಅವುಗಳ ಪರಿಣಾಮ ಮತ್ತು ಹಿಡಿತ ಜನರ ಮನಸ್ಸು ಮತ್ತು ಜೀವನದ ಮೇಲೆ ಎಷ್ಟು ಪ್ರಭಾವ ಬೀರಿದೆ ಎಂದರೆ ಅವುಗಳನ್ನು ಭಾರತೀಯ ಬೈಬಲ್ ಎನ್ನಬಹುದು. ಅದು ಸರಿಯಾದ ಹೋಲಿಕೆಯಾಗಲಿಕ್ಕಿಲ್ಲಾ. ಏಕೆಂದರೆ ಭಾರತೀಯ ಬೈಬಲ್ ಎಂದು ವೇದ, ಉಪನಿಷತ್, ಪುರಾಣ, ತಂತ್ರ ಮತ್ತು ಧರ್ಮಶಾಸ್ತ್ರ ಮತ್ತು ಪ್ರಾಂತೀಯ ಭಾಷೆಗಳಲ್ಲಿ ಹೇರಳವಾಗಿ ದೊರೆಯುವ ಧಾರ್ಮಿಕ ಕಾವ್ಯಗಳು. ಈ ಮಹಾಕಾವ್ಯಗಳ ಉದ್ದೇಶವು ಉನ್ನತ ತತ್ವ ಮತ್ತು ನೈತಿಕ ಕಲ್ಪನೆ ಮತ್ತು ಸಾಂಸ್ಕೃತಿಕ ಪರಿಪಾಲನೆಗಳನ್ನು ಜನಪ್ರಿಯಗೊಳಿಸುವುದಾಗಿತ್ತು. ಉನ್ನತವಾದ ಕಾವ್ಯದ ಹೆಣಿಕೆಯ ಮೇಲೆ ಮತ್ತು ಮಹತ್ವದ ಪಾತ್ರಗಳ ಮೂಲಕ ಅವುಗಳ ಜನರಿಗೆ ಮರೆಯಲಾರದ ವ್ಯಕ್ತಿಗಳಾದವು. ಅವುಗಳು ಹೃದಯಕ್ಕೆ, ವಿವೇಚನೆಗೆ ಹತ್ತಿರ ಆದವುಗಳಾಗಿವೆ. ಸೃಜನಾತ್ಮಕ ಕಲ್ಪನೆಗೆ ಜೀವನಕ್ಕೆ ಹತ್ತಿರವಿರುವ ಆದರ್ಶ ಮನಸ್ಸು ಅಥವಾ ಗುಣಗಳು ಸಾಮಾಜಿಕ ನೈತಿಕ, ರಾಜಕೀಯ ಮತ್ತು ಧಾರ್ಮಿಕ ಸಂಪ್ರದಾಯಗಳನ್ನೂ ವ್ಯಕ್ತಮಾಡುವವು. ಇವೆಲ್ಲವುಗಳನ್ನು ಒಟ್ಟಾಗಿ ತಂದು ಕಲಾತ್ಮಕವಾದ ಶಕ್ತಿಗಳಿಂದ ಈ ಕಾವ್ಯಗಳು ಪರಿಪೂರ್ಣಕಾರಿಯಾಗಿ ಅರ್ಧ ಪೌರಾಣಿಕ ಕಥೆಗಳನ್ನು ಮತ್ತು ಅರ್ಧ ಇತಿಹಾಸಗಳನ್ನು ರೂಪಿಸಿದ್ದರೂ, ಆದರೆ ಆಳದಲ್ಲಿ ಒಂದು ಜೀವಂತ ಸತ್ಯವನ್ನು ಹೊಂದಿವೆ ಮತ್ತು ಜನರ ಧಾರ್ಮಿಕ ಸಂಪ್ರದಾಯಗಳ ಭಾಗಗಳೇ ಆಗಿವೆ. ಹೀಗೆ

ಮಹಾಭಾರತ ಮತ್ತು ರಾಮಾಯಣ ಕಾವ್ಯಗಳು ರಚಿಸಲ್ಪಟ್ಟವು, ಮೂಲ, ಸಂಸ್ಕೃತದಲ್ಲಿ ಅದು ಪ್ರಾದೇಶಿಕ ಭಾಷೆಗಳಲ್ಲಿ ಮರಳಿ ಬರೆಯಲ್ಪಟ್ಟವು. ಜನಗಳಿಗೆ ಕಥಾನಕಗಳ ಮೂಲಕ, ಆಕರ್ಷಣೀಯ ವಾಚನದ ಮೂಲಕ, ಭಾಷಣಗಳ ಮೂಲಕ ಮತ್ತು ಸೃಷ್ಟಿ ವಿವರಣೆಗಳ ಮುಖಾಂತರ ಜನಪ್ರಿಯ ಶಿಕ್ಷಣ ಮತ್ತು ಸಂಸ್ಕೃತಿ, ವಿಚಾರಗಳನ್ನು ರೂಪಿಸಿದವು. ವ್ಯಕ್ತಿತ್ವಗಳು, ಸೌಂದರ್ಯತೆ, ಧಾರ್ಮಿಕ ಮನಸ್ಸುಗಳನ್ನು ಜನರಲ್ಲಿ ತಂದವು. ಅಶಿಕ್ಷಿತರಿಗೆ ಸಾಕಷ್ಟು ತತ್ವಜ್ಞಾನದ ಔಷಧಿ, ನೈತಿಕತೆ, ಸಾಮಾಜಿಕ ಮತ್ತು ರಾಜಕೀಯ ಕಲ್ಪನೆಗಳನ್ನು ಸೌಂದರ್ಯದ ಭಾವನೆಗಳನ್ನು ಕಾವ್ಯ ಕಲ್ಪನೆ ಮತ್ತು ಪ್ರೇಮ ಕಥೆಗಳನ್ನು ತಂದದ್ದಲ್ಲದೆ ಜನ ಮಾನಸದಲ್ಲಿ ಶಾಶ್ವತವಾಗಿ ಉಳಿದವು. ಸುಸಂಸ್ಕೃತ ವರ್ಗಕ್ಕೆ ವೇದ ಉಪನಿಷತ್‌ಗಳು ಇಲ್ಲಿ ಅಡಕವಾಗಿದ್ದವು. ಧರ್ಮಶಾಸ್ತ್ರದಲ್ಲಿ ಮತ್ತು ಅರ್ಥಶಾಸ್ತ್ರಗಳಲ್ಲಿ ಆಳವಾದ ತಾತ್ವಿಕ, ಪೌರುಷ ಮತ್ತು ಗ್ರಂಥಗಳಲ್ಲಿ ಒತ್ತಿ ಹೇಳಿದ್ದು ಮುಚ್ಚಿ ಹೋಗಿವೆ. ಆದರೆ ಈ ಮಹಾಕಾವ್ಯಗಳಲ್ಲಿ ಅವು ಸೃಜನಾತ್ಮಕ ಮತ್ತು ಜೀವಂತ ಪಾತ್ರಗಳು ಗೊತ್ತಿರುವ ಮತ್ತು ಪುರಾಣ ಕಥೆಗಳ ಮೂಲಕ ಸಹಯೋಗವನ್ನು ಹೊಂದಿರುತ್ತವೆ. ವಿವಿಧ ಜೀವನ ಶೈಲಿಗಳನ್ನು ಅಭಿವ್ಯಕ್ತಗೊಳಿಸುತ್ತವೆ. ಅದು ನಮಗೆ ಅತಿ ಸಾಮೀಪ್ಯ ಮತ್ತು ಜೀವನ ಶಕ್ತಿ ಕಾವ್ಯದ ಶಬ್ದಗಳ ಮೂಲಕ ಅರಗಿಸಿಕೊಳ್ಳುವುದರಲ್ಲಿದೆ. ನಮ್ಮ ಆತ್ಮಕ್ಕೆ ಕಲ್ಪನೆಗೆ ಮತ್ತು ಬುದ್ಧಿವಂತಿಕೆಗೆ ಮನವಿ ಮಾಡುತ್ತವೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 20/345–47**

**ಮಹಾಭಾರತ**

ಮಹಾಭಾರತ ವಿಶೇಷವಾಗಿ ಭರತ ಅವರ ಕಥೆ ಮಾತ್ರ ಅಲ್ಲ. ಮಹಾಕಾವ್ಯವು ಪ್ರಾರಂಭದ ಘಟನೆಗಳು ರಾಷ್ಟ್ರೀಯ ಸಂಪ್ರದಾಯ ಆಗಿವೆ. ಆದರೆ ವಿಶಾಲವಾದ ಶ್ರೇಣಿಯಲ್ಲಿ ಮಹಾಕಾವ್ಯದ ಆತ್ಮ, ಧಾರ್ಮಿಕತೆ ನೈತಿಕ ಮನಸ್ಸು, ಸಾಮಾಜಿಕ ಮತ್ತು ರಾಜಕೀಯ ಆದರ್ಶ, ಸಂಸ್ಕೃತಿ ಮತ್ತು ಭಾರತದ ಜೀವನವನ್ನು ಪ್ರತಿಬಿಂಬಿಸುತ್ತದೆ. ಇದರ ಕುರಿತು ಜನಪ್ರಿಯವಾಗಿ ಹೇಳುವುದೇನೆಂದರೆ ಭಾರತದಲ್ಲಿ ಏನಿದೆಯೋ ಅದು ಮಹಾಭಾರತದಲ್ಲಿ ಇದೆ. ಇದು ಸತ್ಯವೂ ಹೌದು. ಮಹಾಭಾರತವು ಯಾವುದೇ ಒಂದು ಮನಸ್ಸಿನಿಂದ ಸೃಷ್ಠಿಯಾಗಿದ್ದು ಮತ್ತು ವ್ಯಕ್ತವಾಗಿದ್ದಲ್ಲಾ; ಆದರೆ ಇಡೀ ದೇಶದ ಮನಸ್ಸಿನಿಂದ ಸೃಷ್ಟಿಯಾಗಿದ್ದು; ಎಲ್ಲಾ ಜನರು ಸೇರಿ ಬರೆದಂತಹ ಮಹಾಕಾವ್ಯ ಇದನ್ನು ಬರೀ ಸಣ್ಣ ಉದ್ದೇಶಕ್ಕಾಗಿ

ಬರೆದದ್ದು ಎಂದು ಹೇಳುವದು ವ್ಯರ್ಥ ಕಸರತ್ತು. ಆದರೆ ಒಂದು ಉನ್ನತವಾದ ಮತ್ತು ಪ್ರಜ್ಞೆಯ ಕಲೆ ಅದರ ವಿವರಣೆಯಲ್ಲಿ ಮತ್ತು ರಚನೆಯಲ್ಲಿ ಸಂಯೋಜಿತಗೊಂಡಿದೆ. ಸಂಪೂರ್ಣ ಕಾವ್ಯ ಒಂದು ಬೃಹತ್ ರಾಷ್ಟ್ರೀಯ ದೇವಾಲಯದ ತರಹ ಕಟ್ಟಲ್ಪಟ್ಟಿದೆ. ನಿಧಾನವಾಗಿ ತನ್ನ ಅದ್ಭುತ ಮತ್ತು ಸಂಕೀರ್ಣವಾದ ಕಲ್ಪನೆಯನ್ನು ಕೋಣೆಯಿಂದ ಕೋಣೆಗೆ, ಮಹತ್ವದ ಗುಂಪುಗಳು, ಬರವಣಿಗೆಗಳು, ಚಿತ್ರಗಳು, ಗುಂಪಾದ ದೈವೀಚಿತ್ರಗಳು ಅಥವಾ ಅರೇ ದೈವೀ ಅಂಶಗಳು ಮಾನವನನ್ನು ಅತಿಶಯಗೊಳಿಸಿ ಮತ್ತು ಉನ್ನತಿಗೊಳಿಸಿ ಅತಿ ಮಾನವನನ್ನಾಗಿಸಿದ್ದು ಮತ್ತು ಆದಾಗ್ಯೂ ನನ್ನವರ ತರಹ ಉದ್ದೇಶ, ಕಲ್ಪನೆ ಮತ್ತು ಸಂವೇದನೆ, ಸಾಮಾನ್ಯವಾದವುಗಳನ್ನು ಆದರ್ಶಗಳಿಗೆ ಎತ್ತರಿಸಿ. ಈ ಜಗತ್ತಿನ ಜೀವನವನ್ನು ಚಿತ್ರೀಕರಿಸಿದರು, ಅದರ ಹಿಂದೆ ಸತತವಾಗಿ ಜಗತ್ತಿನ ಪ್ರಜ್ಞಾ ಪ್ರಭಾವ ಮತ್ತು ಶಕ್ತಿಯ ಸಾನಿಧ್ಯವು ಅದರ ಹಿಂದಿದೆ ಮತ್ತು ಎಲ್ಲವನ್ನು ಒಗ್ಗೂಡಿಸಿ ಸ್ಥಿರವಾದ ಕಲ್ಪನೆಗಳನ್ನು ಕಾವ್ಯಾತ್ಮಕದ ಮೂಲಕ ಹಂತ–ಹಂತವಾಗಿ ವಿವರಿಸಲಾಗಿದೆ. ಮಹಾಕಾವ್ಯಗಳಿಂದ ಬಯಸುವ ಹಾಗೆ, ಕಥೆಯ ನಿರ್ವಹಣೆ ಬಹಳ ಆಸಕ್ತಿದಾಯಕವಾಗಿದೆ. ಕಾವ್ಯದಲ್ಲಿ ಅದು ದೊಡ್ಡ ಚಿಕ್ಕ ವಿಷಯಗಳಿಗೂ ಮಹತ್ವ ಕೊಡುತ್ತದೆ. ಜನರಲ್ಲಿ ವಿಶಾಲ ಮತ್ತು ಗಟ್ಟಿಯಾಗಿ, ವಿವರಣೆಯಲ್ಲಿ ಗಮನಾರ್ಹ ಮತ್ತು ಪರಿಣಾಮಕಾರಿಯಾಗಿದೆ. ಯಾವಾಗಲೂ ಸರಳ, ಗಟ್ಟಿ ಮತ್ತು ಕಾವ್ಯಾತ್ಮಕ ಗುಣದಿಂದ ತನ್ನ ಶಕ್ತಿ ಮತ್ತು ಗತಿಯಲ್ಲಿ ಇದೆ. ಅದೇ ಕಾಲಕ್ಕೆ ಪರಮೋಚ್ಛ ಆಸಕ್ತಿದಾಯಕ ವಿಷಯವಾಗಿದೆ. ಮತ್ತು ಸ್ಪಷ್ಟವಾಗಿ ಕಾವ್ಯದ ಮೂಲಕ ಕಥೆ ಹೇಳುವ ರೀತಿ, ಅದಕ್ಕಿಂತ ಹೆಚ್ಚು, ಮಹತ್ವದ ಕಥೆ, ಇತಿಹಾಸ, ಭಾರತೀಯ ಜೀವನ ಮತ್ತು ಸಂಸ್ಕೃತಿಯನ್ನು ಕೇಂದ್ರೀಯ ಕಲ್ಪನೆಯಲ್ಲಿ ಮತ್ತು ಆದರ್ಶದಲ್ಲಿ ತುಂಬಿವೆ. ಭಾರತೀಯ ಧರ್ಮದ ಪರಿಕಲ್ಪನೆ ಅದರ ಮೂಲ ಧ್ಯೇಯ. ಇಲ್ಲಿ ವೇದಗಳ ಅಭಿಮತದಂತೆ ಸತ್ಯ ಮತ್ತು ಪ್ರಕಾಶ ಮತ್ತು ಏಕತೆಯನ್ನು ಸಾರುವ ದೇವತೆಗಳು ಮತ್ತು ಅಸತ್ಯ, ಕತ್ತಲೆ, ಭಿನ್ನತೆಯನ್ನು ಸಾರುವ ರಾಕ್ಷಸರ ಮಧ್ಯೆ ಜರುಗುವ ಆಧ್ಯಾತ್ಮಿಕ ಮತ್ತು ಧಾರ್ಮಿಕ ಮತ್ತು ಅಂತರಂಗದಲ್ಲಿ ನಡೆಯುವುದನ್ನು ಬಾಹ್ಯದ ವಿವೇಕಕ್ಕೆ ನೈತಿಕಕ್ಕೆ ಮತ್ತು ಪ್ರಾಣದ ಸ್ಥರಕ್ಕೂ ಎಳೆದು ತರುತ್ತದೆ. ಕಥೆಯಲ್ಲಿ ಬರುವ ಪಾತ್ರಗಳಲ್ಲಿ ಎರಡು ರೀತಿಯ ವ್ಯಕ್ತಿತ್ವ ಮತ್ತು ರಾಜಕೀಯ ಹೋರಾಟ ಕಂಡುಬರುತ್ತದೆ. ವೈಯಕ್ತಿಕವಾಗಿ ಉನ್ನತ ಆದರ್ಶಗಳನ್ನು ಹೊಂದಿದ ಭಾರತದ ಧರ್ಮವನ್ನು ಪಾಲಿಸುವವರ ಮತ್ತು ಯಾರು ರಾಕ್ಷಸಿಯ ಅಹಂಕಾರ ಮತ್ತು ಆತ್ಮ–ಸಂಕಲ್ಪ ಮತ್ತು ಧರ್ಮವನ್ನು

ದುರುಪಯೋಗ ಮಾಡುವವರ ನಡುವೆ ಹೋರಾಟ ನಡೆಯುತ್ತದೆ. ವೈಯಕ್ತಿಕ ಹೋರಾಟ ಕೊನೆಗೊಳ್ಳುತ್ತದೆ. ಅಂತರಾಷ್ಟ್ರೀಯ ಯುದ್ಧ ಕೊನೆಗೊಂಡು ಸದಾಚಾರ ಮತ್ತು ನ್ಯಾಯಾವಾದ ಆಡಳಿತ ಆರಂಭವಾಗುತ್ತದೆ. ಎಂತಹ ಸಾಮ್ರಾಜ್ಯವೆಂದರೆ ಧರ್ಮದಿಂದ ಕೂಡಿದ ಸ್ಥಾಪನೆಯಾಗುವುದು. ಯಾವುದರ ಬದಲೆಂದರೆ ಹೊಡೆದಾಡುವ ಮಹಾತ್ವಾಕಾಂಕ್ಷಿ ಉಳ್ಳ ಸೊಕ್ಕಿನ ಮತ್ತು ಶ್ರೀಮಂತ ಕುಲದ ಉಚ್ಛ ಆಡಳಿತದ ಬದಲಾಗಿ ಶಾಂತ ಮತ್ತು ವಿರಾಮ ಸ್ಥಿತಿಯುಳ್ಳ ಜನರ ಸಾಮ್ರಾಜ್ಯ ಸ್ಥಾಪನೆಯಾಗುತ್ತದೆ. ಇದು ದೇವತೆಗಳ ಮತ್ತು ಅಸುರರ ಮಧ್ಯೆ ನಡೆಯುವ ಪುರಾತನ ಯುದ್ಧ. ಆದರೆ ಮಾನವ ಜೀವನವನ್ನು ಪ್ರತಿನಿಧಿಸುವಂತಹದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 20/347–48**

**ರಾಮಾಯಣ**

ರಾಮಾಯಣವು ಮಹಾಭಾರತದಂತೆ ಅದೇ ರೀತಿಯ ಪ್ರಮುಖ ರಚನೆ; ವ್ಯತ್ಯಾಸವೆಂದರೆ ಅತ್ಯಂತ ಸರಳ ಯೋಜನೆ, ಹೆಚ್ಚು ಸೂಕ್ಷ್ಮ ಆದರ್ಶ ಮನೋಧರ್ಮ ಮತ್ತು ನವಿರಾದ ಕಾವ್ಯದ ಬೆಚ್ಚಗಿನ ಹೊಳಪು ಮತ್ತು ವರ್ಣ. ಕಾವ್ಯದ ಹೆಚ್ಚು ಭಾಗ ಒಂದೇ ರೀತಿಯ ಬೆಳವಣಿಗೆಗೆ ಇದ್ದರೂ ಕೂಡ ಕಡಿಮೆ ಸಂಕೀರ್ಣ ಮತ್ತು ರಚನೆಯಲ್ಲಿ ಹೆಚ್ಚು ಸ್ಫುಟವಾಗಿ ಏಕತೆ ಸಾರುತ್ತದೆ. ಕಾವ್ಯದಲ್ಲಿ ತತ್ವಜ್ಞಾನ ಕಡಿಮೆ ಹೆಚ್ಚು ಶುದ್ಧವಾಗಿ ಕಾವ್ಯಾತ್ಮಕ ಮನಸು, ಹೆಚ್ಚು ಕಲಾತ್ಮಕ, ಕಡಿಮೆ ವಾಸ್ತುಶಿಲ್ಪ. ಸಂಪೂರ್ಣ ಕಥೆ ಪ್ರಾರಂಭದಿಂದ ಕೊನೆಯವರೆಗೂ ಒಂದೇ ಓಘ ಮತ್ತು ನಿರೂಪಣೆಯ ಪ್ರವಾಹದಿಂದ ಹೊಯ್ಯಾಟವಿಲ್ಲ. ಅದೇ ಕಾಲಕ್ಕೆ ಒಂದು ವಿಶಾಲ ದರ್ಶನದ ರೀತಿ ಇದೆ. ಇನ್ನೂ ವಿಶಾಲವಾದ ಹಕ್ಕಿಯ ರೆಕ್ಕೆಯ ಹಾಗೆ ವಿಚಾರದಲ್ಲಿ ಚಿಕ್ಕ ಚಿಕ್ಕ ವಿಷಯಗಳಲ್ಲಿ ಸಮೃದ್ಧಿ ಇದೆ. ರಚನಾತ್ಮಕ ಶಕ್ತಿ ಬಲಯುತವಾದ ಕೆಲಸಗಾರಿಕೆ ಹೇಳುವ ರೀತಿಯಲ್ಲಿ ಮಹಾಭಾರತವು ಭಾರತೀಯ ವಾಸ್ತು ಶಿಲ್ಪದ ಕಲೆ ನೆನಪಿಸುತ್ತದೆ. ವೈಭವಯುತ ಮತ್ತು ಗಾಂಭೀರ್ಯಯುತವಾದ ವರ್ಷ ಸಮೃದ್ಧಿ ಚಿಕ್ಕ ಕಲಾತ್ಮಕತೆಯ ರಾಮಾಯಣದ ವಿವರಣೆಯಿಂದ ನಮಗೆ ದೊರೆಯುತ್ತಿವೆ. ಭಾರತೀಯ ಚಿತ್ರವೊಂದು ಕಲಾತ್ಮಕ ಸಾಹಿತ್ಯವಾಗಿ ಹೊರಹೊಮ್ಮಿದೆ ಎಂದೆನಿಸುವುದು ಮಹಾಕಾವ್ಯದ ಕವಿ ಇಲ್ಲಿ ಇತಿಹಾಸವನ್ನು ವಿಷಯವನ್ನಾಗಿ ತೆಗೆದುಕೊಂಡಿದ್ದಾನೆ. ಒಂದು ಪುರಾಣ ಕಥೆ ಅಥವಾ ಹಳೆಯ ಭಾರತೀಯ ರಾಜವಂಶದ ದಂತಕತೆಯೊಂದಿಗಿನ ಕಥೆ ಮತ್ತು

ಅದನ್ನು ಪ್ರೇಮ ಮತ್ತು ಜಾನಪದ ವಿವರಣೆಗಳಿಂದ ತುಂಬುವುದು, ವೈಭವದ ಕಾವ್ಯಾತ್ಮಕ ರಚನೆಯಲ್ಲಿ ಉತ್ತುಂಗಕ್ಕೆ ಕೊಂಡೊಯ್ಯುವುದು. ಹೀಗಾಗಿ ಅದು ಪರಮೋಚ್ಛ ಉದ್ದೇಶ ಮತ್ತು ಮಹತ್ವತೆ ಪಡೆದಿದೆ. ವಿಷಯವು ಮಹಾಭಾರತದಂತೆಯೆ ಇದೆ. ದೈವ ಮತ್ತು ಅಸುರಿಕ ಶಕ್ತಿಗಳು ಭೂಮಿಯ ಮೇಲೆ ನಡೆಯುವ ಕಾದಾಟವಾಗಿದೆ. ಆದರೆ ಹೆಚ್ಚು ಶುದ್ಧವಾದ ಆದರ್ಶ ವ್ಯಕ್ತಿಗಳು, ಮುಗ್ಧ ಅಸ್ವಾಭಾವಿಕ ಆಯಾಮಗಳು ಮತ್ತು ಮಾನವ ಪಾತ್ರಗಳನ್ನು ಕಾಲ್ಪನಿಕವಾಗಿ, ಅತಿ ಒಳ್ಳೆಯ ಪಾತ್ರಗಳು ಮತ್ತು ಅತಿ ಕೆಟ್ಟದಾಗಿ ಚಿತ್ರಿಸಲಾಗಿದೆ. ಒಂದು ಕಡೆ ಆದರ್ಶ ಮಾನವನನ್ನು ಒಂದು ದೈವೀಧರ್ಮದ ಸೌಂದರ್ಯವನ್ನು ಮತ್ತು ಉನ್ನತ ನೀತಿವಂತವಾಗಿ ಚಿತ್ರೀಕರಿಸಲಾಗಿದೆ. ಧರ್ಮದ ಆಧಾರದ ಮೇಲೆ ನಾಗರೀಕತೆಯನ್ನು ಕಟ್ಟಲಾಗಿದೆ. ನೈತಿಕ ಆದರ್ಶಗಳನ್ನು ಹೆಚ್ಚುಗೊಳಿಸಲಾಗಿ ಸೌಂದರ್ಯ, ಅನುಗ್ರಹ, ಸಾಮರಸ್ಯ ಮತ್ತು ಮಧುರತೆ ತುಂಬಿವೆ. ಇನ್ನೊಂದು ಕಡೆ, ಕ್ರೌರ್ಯ, ಅರಾಜಕೀಯ, ಅತಿ ಮಾನವ ಅಹಂಕಾರದ, ಹೊಂದಾಣಿಕೆ ಇಲ್ಲದ ಶಕ್ತಿಗಳು, ಸ್ವಯಂ ಸಂಕಲ್ಪ ಮತ್ತು ಸಂಭ್ರಮದ ಕ್ರೌರ್ಯ ಮತ್ತು ಈ ಎರಡು ಪರಿಕಲ್ಪನೆಗಳ ಮನಸ್ಸಿನ ಪ್ರಕೃತಿಯಲ್ಲಿ ಇದ್ದು, ಇವೆರಡು ಒಂದಕ್ಕೊಂದು ಕಾದಾಡಿ, ದೈವೀ ಮನುಷ್ಯನ ಗೆಲುವು ರಾಕ್ಷಸರ ಮೇಲೆ ಆಗುವುದನ್ನು ಚಿತ್ರೀಕರಿಸಲಾಗಿದೆ. ಎಲ್ಲಾ ಛಾಯಾ ಮತ್ತು ಕಠಿಣತೆಗಳನ್ನು ತೆಗೆದು ಹಾಕಲಾಗಿದೆ. ಪರಿಕಲ್ಪನೆಯ ಶುದ್ಧತೆ ಕ್ಷೀಣಿಸಿದೆ. ಪ್ರತಿನಿಧಿತ್ವದ ಶಕ್ತಿಗಳು ಕಡಿಮೆಯಾಗಿವೆ. ವರ್ಣಮಯ ಮನೋಧರ್ಮದ ಮಹತ್ವತೆ ಕ್ಷೀಣಿಸಿದೆ. ಪಾತ್ರಗಳನ್ನು ಮಾನವೀಕರಿಸುವುದು ಮಾತ್ರ ಛಾಯ ಮತ್ತು ಸಂಕೀರ್ತನೆಗಳನ್ನು ಸೇರಿಸಲಾಗಿದೆ. ಇದರಿಂದ ಪಾತ್ರಗಳ ಪ್ರಾಮುಖ್ಯ ಉಳಿಯುತ್ತದೆ. ನಮ್ಮ ಜೀವನ ಹಿಂದೆ ಯಾವೆಲ್ಲ ಶಕ್ತಿಗಳು ಕೆಲಸ ಮಾಡುತ್ತಿವೆಯೆಂದು ನಮ್ಮ ಗಮನಕ್ಕೆ ತರುತ್ತಾರೆ. ಇದನ್ನು ಅದ್ಭುತವಾದ ಕಾವ್ಯಾತ್ಮಿಕವಾಗಿ ಚಿತ್ರೀಕರಿಸುತ್ತಾರೆ. ಬೃಹತ್ ಸಾಮ್ರಾಜ್ಯಶಾಹಿ ನಗರ, ಪರ್ವತಗಳು ಮತ್ತು ಸಾಗರ ಮತ್ತು ಕ್ರೂರತನ ಇವೆಲ್ಲವನ್ನೂ ಬಹಳ ವಿಶಾಲವಾಗಿ ಕವಿ ಚಿತ್ರಣ ಕಟ್ಟಿಕೊಡುತ್ತಿರುವದೇನೆಂದರೆ ಈ ಜಗತ್ತೆ ಅವನ ಕಾವ್ಯದ ಚಿತ್ರಣ ಅನ್ನುವ ಹಾಗೆ ಮತ್ತು ಅದರ ವಸ್ತುವಿಷಯ ದೈವ ಮತ್ತು ಮನುಷ್ಯ ಎಷ್ಟು ಭಯಾಂಕರವಾಗಿ ರಾಕ್ಷಸನಾಗುತ್ತಾನೆ ಎಂದು ಪಾತ್ರಗಳ ಮೂಲಕ ಕಟ್ಟಿ ಕೊಡುತ್ತಾನೆ. ನೈತಿಕ ಮತ್ತು ಸೌಂದರ್ಯದ ಭಾರತೀಯ ಮನಸುಗಳನ್ನು ಸಾಮರಸ್ಯವಾಗಿ ಒಂದುಗೂಡಿಸುತ್ತಾನೆ. ಶುದ್ಧವಾದ ವಿಶಾಲತೆ ಸ್ವಯಂ ಅಭಿವ್ಯಕ್ತಗೊಳಿಸುವಲ್ಲಿನ ಸೌಂದರ್ಯಕ್ಕೆ ಯಾವುದೇ ಉದಾಹರಣೆಗಳಿಲ್ಲವೆನ್ನುವಂತೆ ಚಿತ್ರಿಸಲ್ಪಟ್ಟಿದೆ. ರಾಮಾಯಣದಲ್ಲಿ ಉನ್ನತವಾದ

ಮತ್ತು ಮೃದುತ್ವ ಹೊಂದಿದ ಆದರ್ಶ ಪಾತ್ರಗಳಿವೆ. ಅವುಗಳಲ್ಲಿ ಶಕ್ತಿ, ಧೈರ್ಯ, ಕೋಮಲತೆ, ಶುದ್ಧತೆ, ನಿಷ್ಠೆ ಮತ್ತು ಸ್ವಯಂ ತ್ಯಾಗದಂತಹವುಗಳ ಮೂಲಕ ತುಂಬಿ ಮೃದುತ್ವ ಮತ್ತು ಅತಿ ಸಾಮರಸ್ಯದ ಕ್ಷಣಗಳನ್ನು ತುಂಬಿ ಭಾವನೆ ಮತ್ತು ಸೌಂದರ್ಯಗಳನ್ನು ತುಂಬಿ ಆಕರ್ಷಿಸುವಂತೆ ಮಾಡಿದೆ. ಒಂದು ಕಡೆ ಎಲ್ಲಾ ಸಂಯಮಗಳನ್ನು ಕಳೆದುಕೊಂಡ ಪಾತ್ರಗಳ ಮತ್ತು ಇನ್ನೊಂದೆಡೆ ಒಂದು ರೀತಿಯ ಉನ್ನತ ದೈವತ್ವ ಸಾಮಾನ್ಯ ಜೀವನಕ್ಕೆ ದಾಂಪತ್ಯ ಸಂತಾನ, ಮಾತೃತ್ವ ಮತ್ತು ಭ್ರಾತೃತ್ವದ ಸಂವೇದನೆ, ರಾಜಕುಮಾರನ ಕರ್ತವ್ಯ, ನಾಯಕ ಮತ್ತು ಸೇವಕನ ಸ್ವಾಮಿ ನಿಷ್ಠೆ ಮತ್ತು ವಿಷಯ, ಉನ್ನತ ಮತ್ತು ಸತ್ಯ ಮತ್ತು ಸರಳತೆಯಲ್ಲಿ ಆದರ್ಶದ ಬಣ್ಣಗಳಿಂದ ವಿಷಯಗಳನ್ನು ಸಮೃದ್ಧಗೊಳಿಸಿ ನೈತಿಕತೆ ಸೌಂದರ್ಯತೆಯನ್ನು ತುಂಬಿ ಹೃದಯಕ್ಕೆ ಹತ್ತಿರವಾಗುತ್ತವೆ.

ಭಾರತೀಯ ಸಾಂಸ್ಕೃತಿಕ ಮನಸ್ಸನ್ನು ಕಟ್ಟಿಕೊಡುವಲ್ಲಿ ವಾಲ್ಮಿಕಿ ಅತ್ಯಪರೂಪದ ಶಕ್ತಿಯನ್ನು ಪ್ರತಿನಿಧಿಸುತ್ತಾನೆ. ರಾಮ ಮತ್ತು ಸೀತೆಯ ಪಾತ್ರಗಳನ್ನು ಜನರೆಲ್ಲರೂ ಮೆಚ್ಚುತ್ತಾರೆ ಮತ್ತು ಅನುಕರಿಸುತ್ತಾರೆ ಕೂಡ. ಅವರಲ್ಲಿರುವ "ಅವರನ್ನು" ಹೆಚ್ಚು ನೈಜವಾಗಿ ಚಿತ್ರಿಸಲಾಗಿದೆ. ಆದುದರಿಂದ ಅವರಿಗೆ ನಿರಂತರ ಭಕ್ತರಿದ್ದು ಸದಾ ಪೂಜಿಸಲ್ಪಡುತ್ತಾರೆ. ಮಾನವರಲ್ಲಿನ ಆದರ್ಶಗಳಿಗಾಗಿ ಹನುಮಾನ, ಲಕ್ಷಣ ಮತ್ತು ಭರತರನ್ನು ಜೀವಂತ ಪಾತ್ರಗಳೆಂದು ಜನ ಮೆಚ್ಚುತ್ತಾರೆ. ಕಾವ್ಯವು ಇಂತಹ ದೃಢ ಆತ್ಮಗಳನ್ನು ನಿರ್ಮಿಸಿ ರಾಷ್ಟ್ರಕ್ಕಾಗಿ ಯಾವುದು ಒಳ್ಳೆಯದು ಯಾವುದು ಮಧುರ ಯಾವುದು ಸಚ್ಚಾರಿತ್ರ್ಯ ಎಂದು ಕಟ್ಟಿಕೊಡುತ್ತದೆ. ಸಾಧಾರಣವಾಗಿರುವ ಬಹಿರಂಗವಾದ ಸದ್ಗುಣ ಮತ್ತು ನಡತೆಗಳಿಗಿಂತ ಸೂಕ್ಷ್ಮ ಮನೋಧರ್ಮದ ಮನುಷ್ಯತ್ವವು ಹೆಚ್ಚು ಮೌಲ್ಯಯುತವಾದದ್ದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 20/349–51**

**ರಾಜ ವಿಚಾರ**

**– ಅನುವಾದ: ಡಾ॥ ಬಿ.ಆರ್. ಭೀಡ್ ರಾಯಚೂರು**

ಭಾರತೀಯರ ಜೀವನವನ್ನು, ಸಂಸ್ಕೃತಿ, ಸಾಮಾಜಿಕ ಆದರ್ಶಗಳು ಎಲ್ಲವನ್ನೂ ಆಳಿದ ಅತ್ಯಂತ ಪ್ರಮುಖ ವಿಚಾರವೆಂದರೆ ಮಾನವನು ತನ್ನ ನಿಜವಾದ ಆಧ್ಯಾತ್ಮಿಕ ಸತ್ತೆಯನ್ನು ಹಾಗೂ ಪಾರಮಾರ್ಥಿಕ ಜೀವನದ ಪ್ರಯೋಜನವನ್ನು ಕುರಿತು ನಡೆಸಿದ ಸಂಶೋಧನೆಯೇ ಆಗಿದೆ. ಮಾನವನ ಜೀವನವು ವಿಕಾಸದ

ಉಪಕ್ರಮಕ್ಕೆ ಅವಶ್ಯವಾಗಿ ಒಳಪಟ್ಟಿದೆ. ಮೊದಲು ಕೆಳ ಸ್ತರದ ಭೌತಿಕ, ಪ್ರಾಣಿಕ, ಮಾನಸಿಕ ಅಧೀನವಾಗಿರುವ ಅವನ ಪ್ರಕೃತಿಯನ್ನು ವಿಕಾಸದ ಪ್ರಕ್ರಿಯೆಗೆ ಒಳಪಡಿಸಿ, ಸಾಮಾನ್ಯ ಅಜ್ಞಾನದ ಸ್ತರದಿಂದ ಎತ್ತರಿಸಿ, ಉನ್ನತ ಆಧ್ಯಾತ್ಮಿಕ ಅಸ್ತಿತ್ವದೆತ್ತರಕ್ಕೆ ಏರುವ ಸಾಧನೋಪಾಯಗಳನ್ನು ಕಂಡುಹಿಡಿಯುವ ಉಪಾಯವಾಗಿದೆ. ಈ ಪ್ರಬಲವಾದ ವಿಚಾರವನ್ನು ಭಾರತವು ಯಾವ ಕಾಲಕ್ಕೂ ಸ್ವಲ್ಪವೂ ಕೂಡ ಮರೆತಿಲ್ಲ. ಎಷ್ಟೇ ಒತ್ತಡ, ಭೌತಿಕ ತುರ್ತು ಪರಿಸ್ಥಿತಿ, ಸಾಮಾಜಿಕ ಮತ್ತು ರಾಜಕೀಯ ಕಠಿಣಾತಿಕಠಿಣ ಪರಿಸ್ಥಿತಿಗಳಲ್ಲಿಯೂ ಸಹ ಭಾರತವು ಪಾರಮಾರ್ಥಿಕ ವಿಚಾರವನ್ನು ಮರೆತಿಲ್ಲ, ಬಿಟ್ಟಿಲ್ಲ. ಆದರೆ ಸಾಮಾಜಿಕ ಜೀವನವವನ್ನು ತನ್ನೊಳಗಿರುವ ನಿಜ ಸತ್ತೆಯ ಮಾಧ್ಯಮವನ್ನಾಗಿ, ಆತ್ಮಚೈತನ್ಯದ ಸಾಕ್ಷಾತ್ಕಾರದ ಸಾಧನವನ್ನಾಗಿ ಮಾಡುವಲ್ಲಿ ಪೂರ್ಣ ಯಶಸ್ಸು ಸಾಧಿಸಲಿಲ್ಲ. ಇದು ಅತ್ಯಂತ ಕಠಿಣವಾದ ಕೆಲಸ, ವೈಯಕ್ತಿಕ ಮನಸ್ಸು, ಧರ್ಮ, ವಿಚಾರ, ಸಾಹಿತ್ಯ, ಕಲೆ ಇವುಗಳಲ್ಲಿ ಅಭಿವ್ಯಕ್ತಗೊಳಿಸುವುದಕ್ಕಿಂತ ಸಾಮಾಜಿಕ ಸ್ತರದಲ್ಲಿ ಇದನ್ನು ಬಿಂಬಿಸುವುದು ತುಂಬ ಕಠಿಣವಾದ ಕೆಲಸ – ವ್ಯಕ್ತಿಗತ ಸ್ತರದಲ್ಲಿ ಅತ್ಯುನ್ನತ ಅಸಾಮಾನ್ಯ ಮಟ್ಟವನ್ನು ತಲುಪಿದರೂ ಸಹಿತ ಸಾಮಾಜಿಕ ಬಾಹ್ಯ ಜೀವನದಲ್ಲಿ ಸೀಮಿತ ಸಾಕ್ಷಾತ್ಕಾರವನ್ನು ನಿರ್ದಿಷ್ಟ ಹಂತದವರೆಗೆ ಮಾತ್ರ ಮೂಡಿಸಿತೇ ಹೊರತು ಅನಿಶ್ಚಿತತೆಯನ್ನು ಮೀರಿ ಆಚೆಗೆ ಹೋಗಲಿಲ್ಲ. ಸಾಮಾನ್ಯ ಆಧ್ಯಾತ್ಮಿಕ ಸಾಂಕೇತಿಕತೆಯನ್ನು, ಹಿರಿದಾದ ಅಭೀಪ್ಸೆಯನ್ನು ಜನ ಮಾನಸದಲ್ಲಿ ಮೂಡಿಸುವ, ಸಾಮಾನ್ಯ ಧಾರ್ಮಿಕ ಜೀವನಕ್ಕೊಂದು ಸಾಮಾನ್ಯ ಮಾದರಿಯನ್ನು, ಪಾರಮಾರ್ಥಿಕ ಚಿಂತನೆಗೊಂದು ಸಮರ್ಪಕವಾದ ಪ್ರಾಮಾಣಿಕ ವ್ಯವಸ್ಥೆಯನ್ನು ಕಾರ್ಯವನ್ನದು ಮಾಡಲಿಲ್ಲ. ರಾಜಕೀಯ, ಸಮಾಜ, ಆರ್ಥಿಕತೆ ಇವುಗಳಲ್ಲಿ ಮೊದಲಿನವೆರಡೂ ಮಾನವನ ಜೀವಿತೋದ್ದೇಶದ ಅತಿ ಸಹಜ ಕ್ಷೇತ್ರಗಳು. ಆದರೆ, ಇವುಗಳನ್ನು ಭಾರತದ ವ್ಯವಸ್ಥಾ ಪದ್ಧತಿಯಲ್ಲಿ ಭೋಗಾಪೇಕ್ಷೆ ಎನ್ನುವಂತೆ ಭಾವಿಸಲಾಯಿತು. ಅತ್ಯುನ್ನತ ನಿಯಮಗಳನ್ನು ಧರ್ಮದ ರೂಪದಲ್ಲಿ ಸಾಮೂಹಿಕ ಬದುಕಿನಲ್ಲಿ ಅರೆಬರೆಯಾಗಿ ತರಲು ಸಾಧ್ಯವಾಯಿತೇ ಹೊರತು ಪೂರ್ಣವಾಗಿ ತರುವುದು ಸಾಧ್ಯವಾಗಲಿಲ್ಲ. ರಾಜಕೀಯದಲ್ಲಂತೂ ಅದನ್ನು ತರಲು ಸಾಧ್ಯವಾದದ್ದು ಅತಿ ಅಲ್ಪ ಪ್ರಮಾಣದಲ್ಲಿಯೇ. ಏಕೆಂದರೆ ರಾಜಕೀಯ ಚಟುವಟಿಕೆಗಳಲ್ಲಿ ನೈತಿಕತೆಯನ್ನು ಅಳವಡಿಸುವುದು ಕೃತ್ರಿಮತೆಗಿಂತ ಬಹಳ ಹೆಚ್ಚಿಗೆ ಸಾಧ್ಯವಾಗುವುದಿಲ್ಲ. ಸಾಮೂಹಿಕ ಬಾಹ್ಯ ಜೀವನವನ್ನು ಮೋಕ್ಷದ ಕಲ್ಪನೆಯ ಜೊತೆಗೆ ಸಮೀಕರಿಸುವ ಹಾಗೂ ಮುಕ್ತ ಪಾರಮಾರ್ಥಿಕ ಅಸ್ತಿತ್ವದ ಪರಿಕಲ್ಪನೆಯನ್ನು ಬಿಂಬಿಸುವ

ಪ್ರಯತ್ನವನ್ನು ಭಾರತವು ಮಾಡಲಿಲ್ಲ, ಮಾಡಿದ್ದರೂ ತೀರ ಕಡಿಮೆ. ಹಿಂದಿನ ಕಾಲದಲ್ಲೂ ಮಾಡಲಿಲ್ಲ, ಈ ಕಾಲದಲ್ಲಂತೂ ಇನ್ನೂ ಕಡಿಮೆ. ಅದೇ ರೀತಿ, ಭಾರತೀಯ ಸಾಮಾಜಿಕತೆ, ಆರ್ಥಿಕತೆಯ ಮೇಲೆ (ಉಳಿದೆಲ್ಲ ಕ್ಷೇತ್ರಗಳಿಗಿಂತ ಈ ಕ್ಷೇತ್ರದಲ್ಲಿನ ಪ್ರಯತ್ನ ಬಹಳ ಪೂರ್ವದಲ್ಲೇ ಬಹು ಬೇಗನೇ ಕೆಟ್ಟು ಹೋಯಿತು) ರಾಜಕೀಯ ಜೀವನ, ವ್ಯವಸ್ಥೆ, ಆಧ್ಯಾತ್ಮಿಕ ವಿಚಾರದ ಜೊತೆಗೆ ಸಾಮಾನ್ಯ ಜೀವನವನ್ನು ಸಮೀಕರಿಸುವ ಪ್ರಯತ್ನವನ್ನು ಅಷ್ಟಾಗಿ ಮಾಡಲಿಲ್ಲ – ಸಾಧ್ಯವಾದ ಮಟ್ಟಿಗೆ ಮಾಡಿ ಕೈಬಿಡಲಾಯಿತು. ಆಧ್ಯಾತ್ಮಿಕತೆಯ ಆತ್ಯಂತಿಕ ಸಿದ್ಧಿಯನ್ನು ವೈಯಕ್ತಿಕ ಮಟ್ಟಕ್ಕೆ ಮಾತ್ರ ಸೀಮಿತವೆಂದು ಭಾವಿಸಲಾಯಿತು. ಎಷ್ಟೇ ಆಗಲಿ ಅದು ತನ್ನ ಪ್ರಯತ್ನವನ್ನಂತೂ ತುಂಬ ಸಹನೆಯಿಂದ ತಾಳ್ಮೆಯಿಂದ ಮಾಡಿದ್ದರಿಂದಲೇ ಅದರ ಸಾಮಾಜಿಕ ರಾಜಕೀಯ ವ್ಯವಸ್ಥೆಗೊಂದು ನಿರ್ದಿಷ್ಟ ಸ್ವರೂಪವನ್ನು ನೀಡಲು ಸಮರ್ಥವಾಯಿತು. ಬಹುಶಃ ಮುಂದಿನ ಬೆಳವಣಿಗೆಯನ್ನು ಭವಿಷ್ಯದ ಭಾರತಕ್ಕೆ ಬಿಡಲಾಗಿದೆ; ತನ್ನ ಗುರಿಯನ್ನು ವಿಶಾಲೀಕರಿಸುವ, ಪೂರ್ಣಗೊಳಿಸುವ, ಎಲ್ಲವನ್ನೂ ತನ್ನಲ್ಲಿ ಸಮಾಹಿತಗೊಳಿಸಬಲ್ಲ, ಸಾಮಾನ್ಯ ಬದುಕು ಮತ್ತು ಆತ್ಮಸತ್ತೆ ಎರಡನ್ನೂ ಸಮೀಕರಿಸಬಲ್ಲ ನಿಶ್ಚಿತ ಜ್ಞಾನವನ್ನು ಸಂಪಾದಿಸುವ, ತನ್ನ ಸನಾತನ ಜೀವನ ಧರ್ಮ ಮತ್ತು ಸಂದೇಶ ಎರಡನ್ನೂ ಏಕೀಕರಿಸುವ, ಮಾನವನ ಸಾಮೂಹಿಕ ಜೀವನವನ್ನು ಆಳವಾದ ಆಧ್ಯಾತ್ಮಿಕ ಸಾಕ್ಷಾತ್ಕಾರದ ಮೇಲೆ ಸ್ಥಾಪಿಸಬಲ್ಲ, ಇದುವರೆಗೆ ಅಪ್ರಕಟವಾಗಿಯೇ ಉಳಿದಿರುವ ನಮ್ಮ ಅಸ್ಮಿತೆಯ ಆಧ್ಯಾತ್ಮಿಕ ಸಾಮರ್ಥ್ಯಗಳನ್ನು ಜೀವನದಲ್ಲಿ ಪ್ರಕಟಪಡಿಸುವ ಹೊಣೆ ಭಾರತದ ಮೇಲಿದೆ. ಇಡೀ ವಿಶ್ವವು ವಿರಾಟ್ ಪುರುಷನ ಪ್ರಜ್ಞಾಪೂರ್ಣ ಸಾಮೂಹಿಕ ಆತ್ಮವೆಂಬುದನ್ನು ಹಾಗೂ ಜಗವೆಲ್ಲವೂ ಜಗನ್ನಾಟಕ ಸೂತ್ರಧಾರಿಯ ಲೀಲೆ ಎಂಬುದನ್ನು ಜನ ಮಾನಸದ ಜೀವನದಲ್ಲಿ ಬಿತ್ತುವ ಹಾಗೂ ಅಭಿವೃದ್ಧಿಗೊಳಿಸುವ ಜವಾಬ್ದಾರಿ ಜನರ ಮೇಲಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 20/397–98**

### ಭಾರತೀಯ ಮನದ ರಾಜ ಬೀಗದ ಕೈ

ಆಧ್ಯಾತ್ಮಿಕತೆಯೇ ನಿಜವಾಗಿ ಭಾರತದ ಮನಸ್ಸಿನ ರಾಜ ಬೀಗದ ಕೈ. ಅನಂತತೆಯು ಪರಿಕಲ್ಪನೆಯು ಅದಕ್ಕೆ ತೀರ ಸಹಜ. ಭಾರತವು ಪ್ರಮುಖ ತಾರ್ಕಿಕ ಯುಗದಲ್ಲಾದರೂ ಅಷ್ಟೇ, ಬೆಳೆಯುತ್ತಿರುವ ಅಜ್ಞಾನದ ಯುಗದಲ್ಲಾದರೂ ಅಷ್ಟೇ

ತನ್ನ ಅಂತರ್ದೃಷ್ಟಿಯನ್ನು ತುಸು ಮಾತ್ರವೂ ಮಸುಕಾಗಲು ಬಿಟ್ಟಿಲ್ಲ; ಜೀವನವನ್ನು ಕೇವಲ ಒಂದೇ ಬೆಳಕಿನಲ್ಲಿ ಸರಿಯಾಗಿ ನೋಡಲು ಸಾಧ್ಯವಿಲ್ಲ, ಹಾಗೂ ಕೇವಲ ಬಾಹ್ಯ ಶಕ್ತಿಗಳ ಮೇಲೆ ಅವಲಂಬಿಸಿ ಬದುಕುವುದು ಸಾಧ್ಯವಿಲ್ಲವೆಂಬ ಸತ್ಯವನ್ನು ಭಾರತವು ಪ್ರಾರಂಭದಲ್ಲಿಯೇ ಕಂಡುಕೊಂಡಿದೆ. ಭೌತಿಕ ನಿಯಮಗಳ ಗರಿಮೆಯ ಬಗ್ಗೆ ಶಕ್ತಿಗಳ ಬಗ್ಗೆ ಕೂಡ ಭಾರತಕ್ಕೆ ಚೆನ್ನಾಗಿ ಅರಿವಿದೆ, ಭೌತ ವಿಜ್ಞಾನದ ಮಹತ್ವದ ಬಗ್ಗೆ ಕೂಡ ಅದಕ್ಕೆ ಚೆನ್ನಾಗಿ ಗೊತ್ತಿದೆ. ಅಷ್ಟೇ ಅಲ್ಲ ಸಾಮಾನ್ಯ ಜೀವನವನ್ನು ಕೂಡ ಹೇಗೆ ಕಟ್ಟಬೇಕೆಂಬುದನ್ನು ಭಾರತ ಚೆನ್ನಾಗಿ ಬಲ್ಲದು. ಆದರೆ ಭೌತಿಕತೆಯು ಅತಿಭೌತಿಕತೆಯ ಜೊತೆಗೆ ಸರಿಯಾದ ಸಂಬಂಧವನ್ನು ಇರಿಸಿಕೊಳ್ಳದೇ ಹೋದರೆ ತನ್ನ ಸಾರ್ಥಕತೆಯನ್ನು ಸಾಧಿಸಲಾರದು ಎಂಬುದನ್ನೂ ಭಾರತ ಅರಿತಿದೆ. ವಿಶ್ವದ ಸಂಕೀರ್ಣತೆಯನ್ನು ಕೇವಲ ಸದ್ಯದ ಮಾನವನ ಜ್ಞಾನದ ಮಿತಿಯಲ್ಲಿ ವಿವರಿಸಲಾಗದು, ಕೇವಲ ಮೇಲ್ ಸ್ತರದ ತಿಳುವಳಿಕೆಯಿಂದ ವಿವರಿಸಲು ಸಾಧ್ಯವಿಲ್ಲವೆಂಬುದನ್ನೂ ಭಾರತ ಚೆನ್ನಾಗಿ ಅರಿತಿದೆ. ವಿಶ್ವ ಚಲನೆಯ ಹಿಂದೆ ಅನೇಕ ಅದೃಶ್ಯ ಶಕ್ತಿಗಳಿವೆ, ತನಗೇ ತಿಳಿಯದಂತೆ ತನ್ನಲ್ಲಿಯೂ ಅನೇಕ ಗುಹ್ಯ ಶಕ್ತಿಗಳಿವೆ ಎಂಬುದನ್ನು ಮಾನವ ಅರಿತಿದ್ದಾನೆ. ತನ್ನಲ್ಲಿರುವ ಕೆಲವೇ ಕೆಲವು ಶಕ್ತಿಗಳ ಬಗ್ಗೆ ತನಗೆ ಗೊತ್ತಿದೆ, ತನ್ನ ಬಗ್ಗೆ ಕೂಡ ತನಗೆ ಅರ್ಧಮರ್ಧ ಜ್ಞಾನವಿದೆ, ಸಾಂತದ ಸುತ್ತಲೆಲ್ಲ ಅನಂತವು ಆವರಿಸಿಕೊಂಡಿರುವಂತೆ ತಾನು ನೋಡುವ ವ್ಯಕ್ತ ಜಗದ ಸುತ್ತ ಅವ್ಯಕ್ತವಾದ ವಿಶ್ವ ಬಹು ಪ್ರಮಾಣದಲ್ಲಿದೆ, ಅದೆಲ್ಲವೂ ಇಂದ್ರಿಯಾತೀತವಾದುದು, ಅತೀಂದ್ರಿಯ ಗಮ್ಯವಾದುದು ಎಂಬುದು ಭಾರತದ ಮನಕ್ಕೆ ಸುವಿದಿತವಿದೆ. ಮಾನವನು ತನ್ನತನವನ್ನು ಕೂಡ ಮೀರಿ ಬೆಳೆಯಬಲ್ಲ, ಆ ಸಾಮರ್ಥ್ಯ ಅವನಲ್ಲಿದೆ, ಸದ್ಯಕ್ಕೆ ತಾನಿರುವುದಕ್ಕಿಂತ ಬಹು ಪೂರ್ಣ ಪ್ರಮಾಣದಲ್ಲಿ ಹಾಗೂ ಆಳವಾಗಿ ಅವನು ಬೆಳೆಯಬಲ್ಲ ಎಂಬುದನ್ನು ಭಾರತದ ಮನಸ್ಸು ಎಂದೋ ಕಂಡುಕೊಂಡಿದೆ. ಯುರೋಪಿನ ರಾಷ್ಟ್ರಗಳಲ್ಲಿ ಈ ಸತ್ಯವನ್ನು ತೀರ ಇತ್ತೀಚಿಗೆ ಹೇಳಲಾಗುತ್ತಿದೆ. ಯುರೋಪಿನವರಿಗೆ ಅದೇ ಬಹುದೊಡ್ಡ ಜ್ಞಾನವೆನಿಸಿದೆ. ಮಾನವನಾಚೆಗೆ ದೇವತೆಗಳಿದ್ದಾರೆ, ದೇವತೆಗಳಾಚೆಗೆ ಭಗವಂತನಿದ್ದಾನೆ, ಆ ಭಗವಂತನಾಚೆಗೆ ಅನಿರ್ವಚನೀಯವಾದ ತನ್ನ ಶಾಶ್ವತತೆಯನ್ನೇ ಮಾನವನು ಕಂಡಿದ್ದಾನೆ. ನಮ್ಮ ಪ್ರಾಣಿಕದಾಚೆಗೆ ಬೇರೆ ಬೇರೆ ಸ್ತರದ ಅನೇಕ ಪ್ರಾಣಿಕ ಜೀವನವಿದೆ. ನಮ್ಮ ಮನಸ್ಸಿನ ಆಚೆಗೆ ಬೇರೆ ಬೇರೆ ಮಾನಸ ಸ್ತರಗಳಿವೆ. ಇವೆಲ್ಲವುಗಳಿಗೂ ಮೇಲೆ ಆತ್ಮ ಪ್ರಕಾಶದ ಸ್ತರಗಳಿವೆ ಎಂಬುದನ್ನು ಭಾರತೀಯರು ಬಹು ಪುರಾತನ ಕಾಲದಲ್ಲೇ ಕಂಡುಕೊಂಡಿದ್ದಾರೆ. ತನ್ನ ಪ್ರಬಲ ಹಾಗೂ ಶಾಂತ

ಅಂತಃಸ್ಫೂರ್ತಿಯ ಮೂಲಕ, – ಯಾವುದೇ ರೀತಿಯ ಹೆದರಿಕೆ, ಹಿಂಜರಿಕೆ ಇಲ್ಲದೇ ಆಧ್ಯಾತ್ಮಿಕ, ಬೌದ್ಧಿಕ, ನೈತಿಕ ಅಥವಾ ಪ್ರಾಣಿಕ ಧೈರ್ಯವಂತಿಕೆಯಿಂದ ತನಗೆ ಬೇಕೆನಿಸಿದ ಎಲ್ಲವನ್ನೂ – ಜ್ಞಾನ ಮತ್ತು ಸಂಕಲ್ಪಗಳ ಬಲದಿಂದ ಗೆಲ್ಲಬಹುದು ಎಂಬುದನ್ನು ಭಾರತದ ಮನವು ಕಂಡುಕೊಂಡಿತ್ತು. ಎಲ್ಲ ಮನೋಮಯ ಸ್ತರಗಳನ್ನು ಗೆದ್ದು ಅದರಾಚೆಗಿನ ಆತ್ಮ ತತ್ವವನ್ನು ಕೂಡ ಸಾಕ್ಷಾತ್ಕರಿಸಿಕೊಳ್ಳಬಹುದು, ಅದರಾಚೆ ದೇವತೆಯಾಗಬಹುದು, ಈಶ್ವರನ ಜೊತೆ ಒಂದಾಗಬಹುದು, ಅನಿರ್ವಚನೀಯನಾದ ಬ್ರಹ್ಮನೇ ಆಗಿ ಬದಲಾಗಬಹುದು ಎಂಬುದನ್ನೂ ಭಾರತ ಕಂಡುಕೊಂಡಿತ್ತು. ತರ್ಕಬದ್ಧ ವ್ಯಾವಹಾರಿಕತೆ ಹಾಗೂ ವೈಜ್ಞಾನಿಕ ಸಂವೇದನೆ ಮತ್ತು ವ್ಯವಸ್ಥಿತ ಅನುಷ್ಠಾನದ ಮೂಲಕ ಋಜು ಪಥವನ್ನು ನಿರೂಪಣೆ ಮಾಡಲು ಉಪಕ್ರಮಿಸಿತು. ಆಧ್ಯಾತ್ಮಿಕತೆಯಲ್ಲಿ ಸಹಜವಾಗಿ ಅಂತರ್ನಿಹಿತವಾಗಿದ್ದ ಈ ಅಂತರ್ನಿರೀಕ್ಷಣೆ ಹಾಗೂ ಅಭ್ಯಾಸದ ದೀರ್ಘಾವಧಿಯ ಅನುಷ್ಠಾನದ ಮೂಲಕ ಅದರ ಪ್ರಬಲ ಅಂತರಾತ್ಮಿಕ ಪ್ರವೃತ್ತಿ, ಅನಂತತೆಯನ್ನು ಅವಿರತವಾಗಿ ಬೆಂಬತ್ತಿ ಪಡೆದೇ ತೀರಬೇಕೆಂಬ ಅದರ ತೀವ್ರ ಅಭೀಪ್ಸೆ ಹಾಗೂ ಪ್ರಯತ್ನ, ಅಸಾಧಾರಣ ಧಾರ್ಮಿಕ ಪ್ರಜ್ಞೆ, ಅದರ ಆದರ್ಶ, ಅದರ ಯೋಗಾನುಸಂಧಾನ ಇವುಗಳ ಮೂಲಕ ಅದರ ಕಲೆ ಮತ್ತು ತತ್ವಶಾಸ್ತ್ರಗಳಿಗೆ ನಿರಂತರ ತಿರುವು ಸಿಗುತ್ತಲೇ ಇರುವುದು ಕಂಡುಬರುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 20/6–7**

## ಪ್ರಬಲ ಬೌದ್ಧಿಕತೆ

ಅತ್ಯುನ್ನತವಾದ ಆಧ್ಯಾತ್ಮಿಕತೆ ಹಾಗೂ ಜೀವನದ ಸಂತೋಷ ಮತ್ತು ಶಕ್ತಿಗಳ ಯಥೇಚ್ಛ ಸೃಜನಶೀಲ ಶ್ರೀಮಂತಿಕೆ ಇವಿಷ್ಟೇ ಅಲ್ಲ ಸನಾತನ ಭಾರತ ಆತ್ಮದ ಗತೇತಿಹಾಸ. ನಿರಭ್ರ ಅನಂತ ನೀಲ ಆಗಸದ ಕೆಳಗೆ ಹರಡಿರುವ ಉಷ್ಣ ಪ್ರಾದೇಶಿಕ ಸಸ್ಯ ಸಂಪತ್ತಿನ ಅಜಾಗರ ವೈಭವವೂ ಅದಲ್ಲ. ಯಾರು ಇಂಥ ಪ್ರಾಕೃತಿಕ ಸಂಪತ್ತನ್ನು ಕಂಡರಿಯರೋ ಅವರ ಕಣ್ಣುಗಳಿಗೆ ಇಲ್ಲಿ ದಟ್ಟಣೆ, ಅಪಾರ ಜೀವ ಸಂಪತ್ತು, ಅಧಿಕತೆಯ ವೈಭೋಗದ ಅವ್ಯವಸ್ಥೆ ಅಥವಾ ಅಳತೆ–ಗಿಳತೆ ಇಲ್ಲದ ಪ್ರಚಂಡತೆ ಹಾಗೂ ಇವೆಲ್ಲವುಗಳ ನಡುವೆ ಇರುವ ಸಮತೋಲನ ಹಾಗೂ ನಿರ್ದಿಷ್ಟ ಆಕಾರ ಇವೆಲ್ಲ ತುಸು ಗೊಂದಲವನ್ನುಂಟು ಮಾಡುತ್ತವೆ. ಪ್ರಾಚೀನ ಭಾರತದ ಮೂರನೆಯ ಅತಿ ದೊಡ್ಡ ಶಕ್ತಿಯೆಂದರೆ ಪ್ರಚಂಡ ಬುದ್ಧಿಮತ್ತೆ. ಅದು

ಅಷ್ಟೇ ಪವಿತ್ರವೂ ಮತ್ತು ಅಷ್ಟೇ ಶ್ರೀಮಂತವೂ ಆಗಿದೆ, ಅಷ್ಟೇ ದಾರ್ಢ್ಯವುಳ್ಳದ್ದೂ ಅಷ್ಟೇ ಸೂಕ್ಷ್ಮವೂ ಆಗಿದೆ, ಅಷ್ಟೇ ಶಕ್ತಿಯುಳ್ಳದ್ದೂ ಅಷ್ಟೇ ನವಿರು ನಾಜೂಕಿನದೂ ಆಗಿದೆ, ತಾತ್ವಿಕವಾಗಿ ಎಷ್ಟು ಬೃಹತ್ತಾಗಿದೆಯೋ ವಿವರಗಳ ಚಿತ್ರಣದಲ್ಲೂ ಅಷ್ಟೇ ಕುತೂಹಲವುಳ್ಳದ್ದೂ ಆಗಿದೆ. ಅದರ ಅತಿ ಪ್ರಮುಖ ತುಡಿತವು ಸುಂದರವಾದ ವ್ಯವಸ್ಥಾಪೂರ್ಣ ಹಂಚಿಕೆಯಾಗಿದೆ; ಆದರೆ ಆ ವ್ಯವಸ್ಥೆಯು ಆಂತರಿಕ ನಿಯಮವನ್ನು, ಪದಾರ್ಥಗಳ ಸತ್ಯವನ್ನು ಕಂಡುಕೊಳ್ಳುವ ಸಲುವಾಗಿಯೇ ಇರುತ್ತದೆ; ಮತ್ತು ಇದೆಲ್ಲವನ್ನು ಪ್ರಜ್ಞಾಪೂರ್ವಕವಾದ ಅಭ್ಯಾಸದ ಮೂಲಕ ಸಾಧಿಸಬೇಕು ಎನ್ನುವ ತತ್ವದ ಮೇಲೆಯೇ ಆಧಾರಿತವಾಗಿದೆ. ಭಾರತವು ಎಂದಿನಿಂದಲೂ ಧರ್ಮ ಮತ್ತು ಶಾಸ್ತ್ರಗಳ ಭೂಮಿಯೇ ಆಗಿದೆ. ಅದು ಯಾವಾಗಲೂ ಮಾನವನ ವ್ಯಕ್ತಿಗತ ಹಾಗೂ ವಿಶ್ವಾತ್ಮಕ ಚಟುವಟಿಕೆಗಳ ಆಂತರಿಕ ನಿಯಮ ಮತ್ತು ಸತ್ಯವನ್ನು, ಅದರ ಧರ್ಮವನ್ನು ಕಂಡುಹಿಡಿಯುವಲ್ಲಿಯೇ ಪ್ರವೃತ್ತವಾಗಿದೆ. ಅದು ಸಿಕ್ಕಿತೆಂದರೆ, ಅದಕ್ಕೊಂದು ವಿಶಾಲವಾದ ಆಕಾರ ನೀಡಿ, ಸುಂದರವಾದ ವ್ಯವಸ್ಥೆ ರೂಪಿಸಿ ದೈನಂದಿನ ನಿಜ ಜೀವನದಲ್ಲಿ ವ್ಯಾವಹಾರಿಕ ರೂಪದಲ್ಲಿ ಅಳವಡಿಸುವ ಪ್ರಯತ್ನ ಮಾಡಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 20/8–9**

**ಎರಡು ಆದರ್ಶಗಳು**

ಭಾರತೀಯ ಮನಸ್ಸಿನ ಆದರ್ಶಗಳಲ್ಲಿ ಎರಡು ಪ್ರಮುಖ ಅಂಶಗಳಿವೆ. ಅದರಲ್ಲಿ ಮಾನವನ ಆತ್ಮೋನ್ನತಿಯ ಧೃಡತೆಯೂ ಇದೆ, ಮುಕ್ತತೆ ಅಥವಾ ಅದರ ಸ್ವಾತಂತ್ರ್ಯದ ಹಂಬಲವೂ ಇದೆ, ಜೊತೆಗೆ ಆತ್ಮ ನಿರಾಕರಣೆಯ, ನಿವೇದನೆಯ, ಶರಣಾಗತಿಯ ಅತ್ಯುಚ್ಚ ಸ್ಥಿತಿಯ ಪ್ರಾಪ್ತಿಯೂ ಇದೆ. ಜೀವನದಲ್ಲಿ ಶ್ರೀಮಂತಿಕೆಯಿಂದ ಜೀವಿಸುವ ಆದರ್ಶವೂ ಇರುವಂತೆ ಬಡತನದಿಂದ ಜೀವಿಸುವ ಆದರ್ಶವನ್ನೂ ಎತ್ತಿ ಹಿಡಿಯಲಾಗಿದೆ. ಇವೆರಡನ್ನೂ ಅವುಗಳದೇ ಆದ ಅತ್ಯುನ್ನತ ವೈಭವದೊಂದಿಗೆ ಹಾಗೂ ಅತ್ಯಂತ ಸಂತೃಪ್ತ ಭಾವದಿಂದ ಜೀವಿಸುವ ಆದರ್ಶವನ್ನು ಪುರಸ್ಕರಿಸಲಾಗಿದೆ. ಈ ರೀತಿಯ ವ್ಯವಸ್ಥೆಯಲ್ಲಿ ಸ್ವಚ್ಛ ಪಾರದರ್ಶಕ ಹಾಗೂ ಧೈರ್ಯವಂತಿಕೆ ಇತ್ತು. ಜೀವನದ ರೂಢಿಗತ ಹವ್ಯಾಸಗಳಿಂದಾಗಿ ಹಾಗೂ ವೈಭೋಗದ ಬಯಕೆಗಳಿಂದಾಗಿ ಕುರುಡು ನಡೆ ನಡೆಯುವುದನ್ನು ತಡೆಗಟ್ಟಲಾಗಿತ್ತು. ಆ ಕಾಲದ ವ್ಯವಸ್ಥೆಯಲ್ಲಿ ಜಾತಿ ಪದ್ಧತಿಯೇ ಸಾಮಾಜಿಕ

ವ್ಯವಸ್ಥೆಯ ಸಾಂಕೇತಿಕ ಬಂಧನವಿತ್ತೆಂದರೂ ಸಹಿತ, ಜಾತಿ–ಪದ್ಧತಿಯ ವ್ಯವಸ್ಥೆಯು ಸಾಮಾನ್ಯವಾಗಿ ಕಡೆಗಣಿಸುವಂತೆ, ಮಾನವನ ಮನಸ್ಸು ಮತ್ತು ಅವನ ಆತ್ಮಗಳು ಜಾತ್ಯಾತೀತವಾಗಿವೆ ಎಂಬುದನ್ನು ಎಂದಿಗೂ ಮರೆಯಲಿಲ್ಲ, ಕಡೆಗಣಿಸಲಿಲ್ಲ. ಏಕೆಂದರೆ ಅತಿ ಕೀಳು ಜಾತಿಯ ಮನುಷ್ಯನಲ್ಲಿ ಕೂಡ ಅದು ಭಗವಂತನನ್ನು, ನಾರಾಯಣನನ್ನು ಕಾಣುತ್ತಿತ್ತು. ವ್ಯತ್ಯಾಸವನ್ನು–ಭೇದವನ್ನು ಹೇಳಿದ್ದರೂ ಸಹ ಅದು ಎಲ್ಲ ಭೇದಗಳನ್ನು ಖಂಡಿಸಿ ಕೂಡ ಇತ್ತು. ಆ ಕಾಲದ ರಾಜಕೀಯ ಹಾಗೂ ಸನ್ನಿವೇಶದ ಅವಶ್ಯಕತೆಗಳು ರಾಜ ಪ್ರಭುತ್ವದ ವ್ಯವಸ್ಥೆಯನ್ನೇ ಬೇಡುತ್ತಿದ್ದುದರಿಂದ, ರಾಜನೇ ನಾರಾಯಣನ ಅಂಶವೆಂದು ಉತ್ಪ್ರೇಕ್ಷೆಯಾಗಿ ಹೇಳಿ, ಪ್ರಜಾ ಪ್ರಭುತ್ವದ ರಾಜ್ಯಗಳನ್ನು ಹಾಗೂ ಸ್ವತಂತ್ರ ಸಂಯುಕ್ತ ರಾಜ್ಯಗಳನ್ನು ನಾಶಮಾಡಿದರೂ ಸಹಿತ, ಪ್ರಜಾ ಪ್ರಭುತ್ವವನ್ನು ಪ್ರತ್ಯಕ್ಷವಾಗಿ ನಿರಾಕರಿಸಿದರೂ ಸಹಿತ ಹಳ್ಳಿಗಳಲ್ಲಿ, ಸಂಯುಕ್ತ ಸಭೆಗಳಲ್ಲಿ, ನಗರ ಪಾಲಿಕೆಗಳಲ್ಲಿ ಪ್ರಜಾ ಪ್ರಭುತ್ವದ ಆಡಳಿತ ವ್ಯವಸ್ಥೆಯನ್ನು ಜಾರಿಗೆ ತಂದಿತ್ತು. ಎಲ್ಲ ಜಾತಿಗಳಲ್ಲಿ, ಪ್ರಜೆಗಳಲ್ಲಿ ದೈವತ್ವವನ್ನು ಸಾರಿ ಹೇಳಿತ್ತು. ರಾಜನು ಆ ವ್ಯವಸ್ಥೆಯ ಅತಿ ಕೊನೆಯ ಉಚ್ಚ ವ್ಯಕ್ತಿ ಎಂದು ಹೇಳಿದರೂ ಸಹಿತ 'ಅವನು ಜನರ ಸೇವಕರಲ್ಲಿ ಮುಖ್ಯಸ್ಥನಿದ್ದ ಹಾಗೆ' ಎಂದೇ ಸಾರಿತ್ತು. ಅದರ ದೃಷ್ಟಿಯಲ್ಲಿ ಸಾಮಾಜಿಕ ಸ್ವರ್ಣ ಯುಗವೆಂದರೆ ಮುಕ್ತ ಆಧ್ಯಾತ್ಮಿಕ ಅರಾಜಕತೆಯೇ ಆಗಿತ್ತು. ಅದರ ಆಧ್ಯಾತ್ಮಿಕ ಅತಿರೇಕತೆಯು ಬಹು ಕಾಲದವರೆಗೆ ವೈಭೋಗದ ಜೀವನವನ್ನು ಪೂರ್ತಿಯಾಗಿ ನಿರಾಕರಿಸಲಿಲ್ಲ, ಬದಲಿಗೆ ಅಲ್ಲಿರುವ ಎಲ್ಲ ತರಹದ ಭೋಗಗಳನ್ನು ಸುಖ ಸಂತೋಷಗಳನ್ನು ಸೂಕ್ಷ್ಮತೆಯಿಂದ ಅನುಭವಿಸಲು ಹೇಳಿತು. ಗಮನಿಸಬೇಕಾದ ಸಂಗತಿ ಏನೆಂದರೆ ಈ ರೀತಿಯ ಅತಿರೇಕತೆಯ ವೈರುಧ್ಯಗಳು ಸಮಾಜದಲ್ಲಿ ಎಂದಿಗೂ ಅವ್ಯವಸ್ಥೆಯನ್ನು ಬಿತ್ತಲಿಲ್ಲ. ಭಾರತದ ವೈಭೋಗದ ಜೀವನವು ಯಾವ ಕಾಲಕ್ಕೂ ಯುರೋಪನಲ್ಲಿ ಸೃಷ್ಟಿಯಾದಂಥ ಅನಿಯಂತ್ರಿತ ಲಂಚಬಾಕತನದ, ನೀಚ ಪ್ರವೃತ್ತಿಯ ಜೀವನವನ್ನು ಸೃಷ್ಟಿಸಲಿಲ್ಲ. ಏಕೆಂದರೆ ಭಾರತದ ಮನಸ್ಸು ಕೇವಲ ಆಧ್ಯಾತ್ಮಿಕ ಮತ್ತು ನೈತಿಕವಲ್ಲ, ಅದು ಬೌದ್ಧಿಕವೂ ಕಲಾತ್ಮಕವೂ ಆಗಿದೆ; ಈ ಬೌದ್ಧಿಕದ ನಿಯಮನ ಮತ್ತು ಕಲೆಯ ಲಯ ಇವು ಆತ್ಮಚೈತನ್ಯಕ್ಕೆ ತೀರ ವಿರುದ್ಧ. ಎಂಥ ಅತಿರೇಕತೆ ಇದ್ದರೂ ಸಹ ಅದರಲ್ಲಿ ಭಾರತದ ಆತ್ಮವು ಒಂದು ನಿಯಮ, ವ್ಯವಸ್ಥೆ, ಆಡಳಿತ, ಅಳತೆ, ಸಂರಚನೆಯನ್ನು ಹುಡುಕಾಡುತ್ತದೆ. ಈ ಅತಿರೇಕತೆ ಎನಿಸುವಲ್ಲಿ ಅದಕ್ಕಿಂತ ಹೆಚ್ಚಾಗಿ ಗುಣವತ್ತತೆಯ ಸಮತೋಲನವಿರುತ್ತದೆ, ಸಂಯೋಜಕ ಪ್ರವೃತ್ತಿ ಇರುತ್ತದೆ. ಈ ರೀತಿ ಯಾವುದೇ ಉದ್ದೇಶ ಅಥವಾ

ಪ್ರೇರಣೆ ಇರಲಿ ಅದರ ಅತಿರೇಕತೆಯ ತುತ್ತತುದಿಗೆ ಒಯ್ದು ಭಾರತೀಯ ಮನವು ಅಲ್ಲಿ ಕಲಿತ ಜ್ಞಾನವನ್ನು ಉಪಯೋಗಿಸಿಕೊಂಡು ಪುನಃ ಅದರಿಂದ ಸಾಧ್ಯವಾಗಬಹುದಾದ ಸಮ್ಮಿಶ್ರ ಅಥವಾ ಸಂಯುಕ್ತ ಪರಿಣಾಮದ ಮೂಲಕ ಸಾಮರಸ್ಯವನ್ನು ಸಮತೋಲನವನ್ನು ತರುವ ಪ್ರಯತ್ನ ಮಾಡುತ್ತದೆ. ಆತ್ಮವನ್ನು ಮಿತಿಗೊಳಿಸುವ ಮೂಲಕ ಪರಿಣಾಮತಃ ಯಾವ ಸಮತೋಲನವನ್ನು ಸಾಮರಸ್ಯವನ್ನು ಗ್ರೀಕರು ಪಡೆದರೋ ಅದನ್ನು ಭಾರತೀಯರು ಬೌದ್ಧಿಕ, ನೈತಿಕ, ಸೌಂದರ್ಯ ಪ್ರಜ್ಞೆಯ ವ್ಯವಸ್ಥೆಯ ಮೂಲಕ ಮನಸ್ಸು ಹಾಗೂ ಜೀವನಗಳ ಸಂಯುಕ್ತ ತುಡಿತದ ಮೂಲಕ ಪಡೆದರು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 20/11–12**

## ಭಾರತದ ಜೀವ–ಜೀವನ

**– ಅನುವಾದ: ಡಾ॥ ಮಹಾದೇವ ಸಕ್ರಿ, ವಿಜಯಪುರ**

### ಧರ್ಮ ಮತ್ತು ನೀತಿ

ಧರ್ಮದ ಕಲ್ಪನೆಯು ಅನಂತದ ಕಲ್ಪನೆಗೆ ನಿಕಟವಾಗಿದೆ ಮತ್ತು ಅದರ ಮುಖ್ಯ ಎಳೆಯಾಗಿದೆ; ಧರ್ಮವು ಚೇತನಕ್ಕೆ ಹತ್ತಿರವಾಗಿದೆ ಮತ್ತು ಅದರ ಜೀವನದ ಬುನಾದಿಯಾಗಿದೆ. ಬೋಧನೆ, ಆದರ್ಶ, ದೃಷ್ಟಾಂತ, ಕಲಾತ್ಮಕ ಸೃಷ್ಟಿ, ರಚನಾತ್ಮಕ ಉದಾಹರಣೆಗಳಿಂದ ಜಾರಿಗೊಳಿಸಲಾದ ಅದರ ಆದರ್ಶದ ಹಾಗೂ ಆಜ್ಞಾರ್ಥ ರೂಪದಲ್ಲಿ ಪ್ರಾಧಾನ್ಯತೆ ಕೊಡದಂಥ ಯಾವುದೇ ನೈತಿಕ ಕಲ್ಪನೆಯು ಇಲ್ಲವಾಗಿದೆ. ಸತ್ಯ, ಗೌರವ, ನಿಷ್ಠೆ, ಧೈರ್ಯ, ಪರಿಶುದ್ಧತೆ, ಪ್ರೀತಿ, ಪರಿಶ್ರಮ, ಸ್ವಯಂ–ತ್ಯಾಗ ನಿರುಪದ್ರವತೆ, ಕ್ಷಮೆ, ಸಹಾನುಭೂತಿ, ಉದಾತ್ತತೆ, ಉಪಕಾರ ಇದರ ಸಮಾನ್ಯ ವಿಷಯಗಳು. ಇವುಗಳು ನೈತಿಕತೆಯ ದೃಷ್ಟಿಯಲ್ಲಿ ಮಾನವ ಜೀವನದ ಜೀವಾಳಗಳಾಗಿವೆ, ಮನುಷ್ಯನ ಧರ್ಮದ ಸಾರಗಳಾಗಿವೆ. ಬೌದ್ಧ ಧರ್ಮವು ತನ್ನ ಉನ್ನತ ಮತ್ತು ಉದಾತ್ತ ನೀತಿಗಳೊಂದಿಗೆ, ಜೈನ ಧರ್ಮವು ತನ್ನ ಸ್ವ–ಗೆಲುವಿನ (ಇಂದ್ರಿಯಗಳ ಮೇಲಿನ ಗೆಲುವಿನ) ಕಠಿಣ ಆದರ್ಶದೊಂದಿಗೆ, ಹಿಂದೂ ಧರ್ಮವು ನೈತಿಕ ಬೊಧನೆಯಲ್ಲಿ ಮತ್ತು ಆಚರಣೆಯಲ್ಲಿ ತನ್ನ ಬಹುಮುಖಿಯ ಭವ್ಯವಾದ ಉದಾಹರಣೆಗಳೊಂದಿಗೆ ಬೇರಾವುದೇ ಧರ್ಮ ಅಥವಾ ವ್ಯವಸ್ಥೆಗಿಂತ ಕಳಪೆಯಾಗಿಲ್ಲ. ಆದರೆ ಅದು ಒಂದು ಉನ್ನತ ಸ್ಥಾನವನ್ನು

ಪಡೆದುಕೊಂಡಿದೆ ಮತ್ತು ಪ್ರಬಲವಾದ ಪರಿಣಾಮಕಾರಿ ಶಕ್ತಿಯನ್ನು ಹೊಂದಿದೆ. ಹಳೆಯ ಕಾಲದಲ್ಲಿ ಈ ಸದ್ಗುಣಗಳನ್ನು ಆಚರಿಸುತ್ತಿದ್ದರು ಎನ್ನುವುದಕ್ಕೆ ಹೇರಳವಾದ ಆಂತರಿಕ (ಸ್ವದೇಶಿ) ಹಾಗೂ ವಿದೇಶಿ ಪುರಾವೆಗಳಿವೆ. ಸ್ವಾಯತ್ತ ಮಣ್ಣಿನಲ್ಲಿ ತಮ್ಮ ಸಂಪೂರ್ಣ ಸಾಮರ್ಥ್ಯದಲ್ಲಿ ಮಾತ್ರ ವಿಜೃಂಭಿಸುವ ಪುರುಷಸೂಕ್ತ ಗುಣಗಳ ಕೆಲವು ಖಿನ್ನತೆ ಇದ್ದರೂ ಸಹ, ಅವುಗಳ ಬಹುತೇಕ ಛಾಪು ಅವನತಿಯ ನಡುವೆಯೂ ಉಳಿದುಕೊಂಡಿದೆ. ಇದಕ್ಕೆ ವಿರುದ್ಧವಾದ ದಂತಕಥೆಯು ಕ್ರಿಶ್ಚಿಯನ್ ಪಕ್ಷಪಾತದೊಂದಿಗೆ ಇಂಗ್ಲೀಷ ವಿದ್ವಾಂಸರ ಮನಸ್ಸಿನಲ್ಲಿ ಪ್ರಾರಂಭವಾಯಿತು. ಅವರು ಭಾರತೀಯ ತತ್ವ ಶಾಸ್ತ್ರವು ಮೋಕ್ಷದ ಒಂದು ಸಾಧನವಾಗಿ, ಕಾಯಕಗಿಂತ ಹೆಚ್ಚು ಪ್ರಧಾನ್ಯತೆಯನ್ನು ಜ್ಞಾನಕ್ಕೆ ಕೊಡುತ್ತದೆ ಎನ್ನುವ ಸಂಗತಿಯಿಂದ ದಾರಿ ತಪ್ಪಿಸಿದರು. ಯಾಕೆಂದರೆ, ಶುದ್ಧ ಸಾತ್ವಿಕ ಮನಸ್ಸು ಮತ್ತು ಜೀವನವು ದಿವ್ಯ ಜ್ಞಾನದೆಡೆಗಿನ ಮೊದಲ ಹೆಜ್ಜೆ ಎನ್ನುವ ಭಾವನೆಯು ಎಲ್ಲ ಭಾರತೀಯ ಆಧ್ಯಾತ್ಮಿಕ ಅನ್ವೇಷಕರಿಗೆ ತಿಳಿದಿರುವ ನಿಯಮದ ಅರ್ಥವನ್ನು ಅವರು ಗಮನಿಸಲಿಲ್ಲ ಅಥವಾ ಗ್ರಹಿಸಲಿಲ್ಲ – ದುಷ್ಟ ಕಾರ್ಯಗಳನ್ನು ಮಾಡುವವರು ನನ್ನನ್ನು ಕಾಣಲಾರರು ಎಂದು ಗೀತೆಯು ಹೇಳುತ್ತದೆ. ಭಾರತೀಯ ಚಿಂತನೆಗೆ ಸತ್ಯದ ಜ್ಞಾನವೆಂದರೆ ಬೌದ್ಧಿಕ ಅರೋಹಣ ಅಥವಾ ಗುರುತಿಸುವಿಕೆ ಅಲ್ಲ, ಆದರೆ ಚೈತನ್ಯದ ಸತ್ಯದ ಪ್ರಕಾರ ಅದೊಂದು ಹೊಸ ಪ್ರಜ್ಞೆ ಮತ್ತು ಜೀವನ ಎನ್ನುವುದನ್ನು ಅವರು ಅರಿತುಕೊಳ್ಳಲು ಸಾಧ್ಯವಾಗಲಿಲ್ಲ. ನೈತಿಕತೆಯು ಪಾಶ್ಚಿಮಾತ್ಯ ಮನಸ್ಸಿಗೆ ಒಂದು ಬಾಹ್ಯ ನಡತೆಯ ವಿಷಯವಾಗಿದೆ; ಆದರೆ ಭಾರತೀಯ ಮನಸ್ಸಿಗೆ ವರ್ತನೆಯ ಅಭಿವ್ಯಕ್ತಿಯ ಒಂದು ಸಾಧನವಾಗಿದೆ ಮತ್ತು ಆತ್ಮ–ಸ್ಥಿತಿಯ ಸಂಕೇತವಾಗಿದೆ. ಹಿಂದೂ ಧರ್ಮವು ಆಚರಣೆಗಾಗಿ ಹಲವಾರು ಆಜ್ಞೆಗಳನ್ನು, ನೈತಿಕ ಕಾನೂನುಗಳ ಒಂದು ಪಟ್ಟಿಯನ್ನು ಪ್ರಾಸಂಗಿಕವಾಗಿ ಮಾತ್ರ ಒಟ್ಟುಗೂಡಿಸುತ್ತದೆ; ಇನ್ನೂ ಆಳದಲ್ಲಿ, ಅದು ಕ್ರಿಯಾತ್ಮಕ ಮನಸ್ಸಿನ ಆಧ್ಯಾತ್ಮಿಕ ಅಥವಾ ನೈತಿಕ ಪರಿಶುದ್ಧತೆಯ ಒಂದು ಬಾಹ್ಯ ಸೂಚ್ಯಂಕವೆಂದು ಆದೇಶಿಸುತ್ತದೆ. "ನೀನು ಕೊಲ್ಲಬಾರದು" ಎಂದು ಅದು ಬಲವಾಗಿ, ಹೆಚ್ಚು ದೃಢವಾಗಿ ಹೇಳುತ್ತದೆ, "ನೀನು ದ್ವೇಷಿಸಬೇಡ, ದುರಾಶೆ, ಕೋಪ ಅಥವಾ ದುರುದ್ದೇಶಗಳಿಗೆ ನೀನು ಮಣಿಯಬೇಡ" ಯಾಕೆಂದರೆ ಇವುಗಳೆಲ್ಲವೂ ಕೊಲ್ಲುವ ಮೂಲಗಳಾಗಿವೆ. ಹಿಂದೂ ಧರ್ಮವು ಯುರೋಪಿಯನ್ ಬುದ್ಧಿಮತ್ತೆಗೆ ಕಷ್ಟಕರವಾದಂಥ ಒಂದು ಜ್ಞಾನದ ಸಾಪೇಕ್ಷ ಮಾನದಂಡಗಳನ್ನು ಒಪ್ಪಿಕೊಳ್ಳುತ್ತದೆ. ಅಹಿಂಸಾ ಪರಮೋ ಧರ್ಮಃ; ಹಾನಿಯನ್ನು

ಮಾಡದಿರುವುದು ಅದರ ನಿಯಮಗಳಲ್ಲಿ ಅತ್ಯುನ್ನತವಾದದ್ದು; ಆದರೂ ಅದು ಯೋಧನಿಗೆ ಅದನ್ನು ಒಂದು ದೈಹಿಕ ನಿಯಮವನ್ನಾಗಿ ನೀಡುವುದಿಲ್ಲ, ಆದರೆ ಆತನಿಂದ ಕರುಣೆಯನ್ನು, ಶೌರ್ಯವನ್ನು ನಿರಂತರವಾಗಿ ಕೋರುತ್ತದೆ, ಯುದ್ಧ ಮಾಡದವರಿಗಾಗಿ, ದುರ್ಬಲರಿಗಾಗಿ, ನಿರಾಯುಧರಿಗಾಗಿ, ಸೋಲಿಸಲ್ಪಟ್ಟವರಿಗಾಗಿ, ಕೈದಿಗಳಿಗಾಗಿ, ಗಾಯಗೊಂಡವರಿಗಾಗಿ, ದೇಶಭ್ರಷ್ಟರಿಗಾಗಿ ಗೌರವವನ್ನು ಬಯಸುತ್ತದೆ, ಆದ್ದರಿಂದ ಎಲ್ಲ ಜೀವನಕ್ಕೆ ಅತ್ಯಂತ ಸ್ಪಷ್ಟವಾದ ನಿಯಮದ ಅಪ್ರಾಯೋಗಿಕತೆಯನ್ನು ತಪ್ಪಿಸಿಕೊಳ್ಳುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 20/148–49**

## ಜೀವನದ ಬಗ್ಗೆ ಭಾರತೀಯ ಕಲ್ಪನೆ

ಜೀವನದ ಭಾರತೀಯ ಕಲ್ಪನೆಯು ಆಳವಾದ ಒಂದು ಕೇಂದ್ರದಿಂದ ಪ್ರಾರಂಭವಾಗುತ್ತದೆ ಮತ್ತು ಆಳವಿಲ್ಲದ (ಹುರುಳಿಲ್ಲದ) ಒಂದು ಬೇರೆಯದೇಯಾದ ಲಕ್ಷ್ಯದೆಡೆಗೆ ಸಾಗುತ್ತದೆ. ಭಾರತೀಯ ಚಿಂತನೆಯ ನೋಟದ ವೈಶಿಷ್ಟ್ಯವೇನೆಂದರೆ, ಅದು ಆಕಾರದ(ಮೂರ್ತ) ಮುಖಾಂತರ ನೋಡುತ್ತದೆ, ಶಕ್ತಿಯ ಮೂಲಕವೂ ಸಹ ನೋಡುತ್ತದೆ ಮತ್ತು ಎಲ್ಲಡೆಯೂ ವಸ್ತುಗಳಲ್ಲಿ ಚೇತನಕ್ಕಾಗಿ ಅನ್ವೇಷಿಸುತ್ತದೆ. ಜೀವನದಲ್ಲಿ ಭಾರತೀಯ ನಿಲುವಿನ ವಿಶೇಷತೆ ಏನೆಂದರೆ, ಅದು ತನ್ನನ್ನು ತಾನು ಅತೃಪ್ತನೆಂದು, ಪರಿಪೂರ್ಣತೆಯ ಸ್ಪರ್ಶದಲ್ಲಿ ಇಲ್ಲವೆಂದು, ಚೇತನದ ಸತ್ಯವನ್ನು ಅದು ಕಂಡುಕೊಳ್ಳದಿದ್ದಲ್ಲಿ ಮತ್ತು ಅದರಲ್ಲಿ ಇರದಿದ್ದಲ್ಲಿ ಯಾವುದೇ ಮಧ್ಯದ ತೃಪ್ತಿಯಲ್ಲಿ ಶಾಶ್ವತವಾಗಿ ಸಮರ್ಥಿಸಲಿಲ್ಲವೆಂದು ಭಾವಿಸುತ್ತದೆ. ಜಗತ್ತಿನ, ಪ್ರಕೃತಿಯ ಮತ್ತು ಇರುವಿಕೆಯ ಭಾರತೀಯ ಕಲ್ಪನೆಯು ಭೌತಿಕವಾದುದಲ್ಲ, ಆದರೆ ಅದು ಮನೋವೈಜ್ಞಾನಿಕವಾಗಿದೆ ಮತ್ತು ಆಧ್ಯಾತ್ಮಿಕವಾಗಿದೆ. ಚೇತನ, ಆತ್ಮ, ಪ್ರಜ್ಞೆಗಳು ಜಡ ವಸ್ತುಗಳಿಗಿಂತ ಮತ್ತು ಅಜಾಗೃತ ಶಕ್ತಿಗಿಂತ ಶ್ರೇಷ್ಠ ಮಾತ್ರವಲ್ಲದೆ, ಅವುಗಳು ಈ ಅಲ್ಪ ಸಂಗತಿಗಳಿಗಿಂತ ಮೊದಲು ಮತ್ತು ಅವುಗಳಿಗೆ ಜನ್ಮ ಕೊಡುತ್ತದೆ. ಎಲ್ಲ ಬಲವು ಶಕ್ತಿಯಾಗಿದೆ, ಪ್ರಭಾವವಾಗಿದೆ ಅಥವಾ ನಿಗೂಢ ಚೇತನದ ಸಾಧನವಾಗಿದೆ; ಜಗತ್ತನ್ನು ಎತ್ತಿ ಹಿಡಿಯುವಂಥ ಶಕ್ತಿಯು ಒಂದು ಜಾಗೃತ ಬಯಕೆಯಾಗಿದೆ ಮತ್ತು ಪ್ರಕೃತಿಯು ಅದರ ಕಾರ್ಯನಿರ್ವಾಹಕ ಪ್ರಭಾವದ ಆಡಳಿತ ವ್ಯವಸ್ಥೆಯಾಗಿದೆ (ಯಂತ್ರ ಸಾಧನವಾಗಿದೆ). ಜಡವು ದೇಹವಾಗಿದೆ ಅಥವಾ ಅದರೊಳಗಡೆ ಹುದುಗಿರುವ

ಪ್ರಜ್ಞಾ ಕ್ಷೇತ್ರವಾಗಿದೆ, ಈ ಭೌತಿಕ ಪ್ರಪಂಚವು ಚೇತನದ ಒಂದು ಸ್ವರೂಪವಾಗಿದೆ ಮತ್ತು ಚಲನೆಯಾಗಿದೆ. ಮನುಷ್ಯನು ಜಡ ವಸ್ತುವಿನಿಂದ ಜನಿಸಿದ ಜೀವವಲ್ಲ, ಮನಸ್ಸಲ್ಲ ಮತ್ತು ಅವನು ಶಾಶ್ವತವಾಗಿ ಭೌತಿಕ ಪ್ರಕೃತಿಗೆ ಒಳಗಾಗಿಲ್ಲ, ಆದರೆ ಜೀವ ಹಾಗೂ ದೇಹವನ್ನು ಉಪಯೋಗಿಸುವ ಒಂದು ಚೇತನವಾಗಿದ್ದಾನೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 20/154–55**

**ವಿಕಾಸಾತ್ಮಕ ವರ್ಗಶ್ರೇಣಿ**

ಧರ್ಮವು ತನ್ನ ಅಸ್ತಿತ್ವದಲ್ಲಿ ಅಚಲವಾಗಿದೆ, ಆದರೂ ಅದು ನಮ್ಮ ಪ್ರಜ್ಞೆಯಲ್ಲಿ ಅದರ ಹಂತಗಳಲ್ಲಿ ವೃದ್ಧಿಯಾಗುತ್ತದೆ ಮತ್ತು ವಿಕಸಿಸುತ್ತದೆ; ನಮ್ಮ ಪ್ರಕೃತಿಯ ಉನ್ನತವಾದ ನಿಯಮದ ಅನ್ವೇಷಣೆಯಲ್ಲಿ ಆಧ್ಯಾತ್ಮಿಕ ಹಾಗೂ ನೈತಿಕ ಆರೋಹಣದ ಶ್ರೇಣಿಗಳು ಅಲ್ಲಿವೆ. ಎಲ್ಲ ಮನುಷ್ಯರು, ಎಲ್ಲ ಸಂಗತಿಗಳಲ್ಲಿ ಒಂದು ಸಮಾನವಾದ ಮತ್ತು ಮಾರ್ಪಡದ ನಿಯಮವನ್ನು ಅನುಸರಿಸಲಾರರು. ನೈತಿಕತೆಯ ಸಿದ್ಧಾಂತಿಯು ಪ್ರೀತಿಸುವಂಥ ಕಟ್ಟಳೆಯಿಲ್ಲದ ಸರಳವಾದ ಆದರ್ಶವನ್ನು ಒಪ್ಪಿಕೊಳ್ಳಲು ಜೀವನವು ಅತಿ ಜಟಿಲವಾಗಿದೆ. ಸ್ವಭಾವಗಳು ಭಿನ್ನವಾಗಿವೆ; ಸ್ಥಾನ ಮತ್ತು ನಾವು ಮಾಡಬೇಕಾದ ಕಾರ್ಯ, ತಮ್ಮದೇ ಆದ ಸಮರ್ಥನೆಗಳನ್ನು ಮತ್ತು ಮಾನದಂಡಗಳನ್ನು ಹೊಂದಿವೆ; ಗುರಿ ಹಾಗೂ ಆಸಕ್ತಿ, ಜೀವನದ ಕರೆ, ಆಂತರಿಕ ಚೇತನದ ಕೂಗು ಪ್ರತಿಯೊಬ್ಬರಿಗೂ ಒಂದೇ ಆಗಿರುವುದಿಲ್ಲ; ಬೆಳವಣಿಗೆಯ ಸ್ವರೂಪ ಮತ್ತು ಮಟ್ಟ ಹಾಗೂ ಸಾಮರ್ಥ್ಯ, ಅಧಿಕಾರ ಸಮಾನವಾಗಿರುವುದಿಲ್ಲ. ಮನುಷ್ಯನು ಸಮಾಜದಲ್ಲಿ ಮತ್ತು ಸಮಾಜದಿಂದ ಬದುಕುತ್ತಾನೆ, ಪ್ರತಿಯೊಂದು ಸಮಾಜವು ತನ್ನದೇ ಆದ ಸಾಮಾನ್ಯ ಧರ್ಮವನ್ನು ಹೊಂದಿದೆ ಮತ್ತು ವೈಯಕ್ತಿಕ ಜೀವನವು ಈ ವಿಶಾಲವಾದ ಚಲನೆಯ ನಿಯಮಕ್ಕೆ ಅಳವಡಿಸಲ್ಪಡಬೇಕು. ಆದರೆ ಸಮಾಜದಲ್ಲಿಯೂ ವ್ಯಕ್ತಿಯ ಪಾತ್ರ ಮತ್ತು ಅವನ ಸ್ವಭಾವ ಮತ್ತು ಅವನ ಸಾಮರ್ಥ್ಯ ಹಾಗೂ ಮನೋಧರ್ಮದ ಬೇಕುಗಳು ಬದಲಾಗುತ್ತವೆ ಮತ್ತು ಅವುಗಳು ಹಲವು ಪ್ರಕಾರಗಳನ್ನು ಹಾಗೂ ಪ್ರಮಾಣಗಳನ್ನು ಹೊಂದಿವೆ; ಸಾಮಾಜಿಕ ನಿಯಮವು ಈ ವೈವಿಧ್ಯಕ್ಕೆ ಕೊಂಚ ಸ್ಥಾನವನ್ನು ನೀಡಬೇಕು ಮತ್ತು ಎಲ್ಲರಿಗೂ ಕಟ್ಟುನಿಟ್ಟಾಗುವ ಮೂಲಕ ಅದನ್ನು ಕಳೆದುಕೊಳ್ಳಬಹುದು. ಜ್ಞಾನದ, ಪ್ರಭಾವದ, ಫಲದಾಯಕ ಹಾಗೂ ಸಂಗ್ರಹಶೀಲ ವ್ಯಕ್ತಿ, ಪುರೋಹಿತ, ವಿದ್ವಾಂಸ,

ಕವಿ, ಕಲಾವಿದ, ಆಡಳಿತಗಾರ, ಹೋರಾಟಗಾರ, ವ್ಯಾಪಾರಿ, ರೈತ, ಶ್ರಮಿಕ, ಸೇವಕರು ಒಂದೇ ರೀತಿಯ ಉಪಯುಕ್ತ ತರಬೇತಿಯನ್ನು ಹೊಂದಲು ಸಾಧ್ಯವಿಲ್ಲ ಮತ್ತು ಒಂದೇ ಮಾದರಿಯಲ್ಲಿ ರಚಿಸಲಾಗದು, ಎಲ್ಲರೂ ಒಂದೇ ತೆರನಾದ ಜೀವನ ವಿಧಾನವನ್ನು ಅನುಸರಿಸಲಾರರು. ಎಲ್ಲರನ್ನೂ ಕಾನೂನಿನ ಪಟ್ಟಿಗಳ ಅಡಿಯಲ್ಲಿ ಇರಿಸಲಾಗದು; ಏಕೆಂದರೆ, ಅದೊಂದು ಜೀವನದ ಮೃದು ಸತ್ಯವನ್ನು ಹಾಳುಮಾಡುವಂಥ, ಅರ್ಥವಿಲ್ಲದ ಮಿತಿಗಳ ಮೇರೆಯಾಗುತ್ತದೆ. ಪ್ರತಿಯೊಬ್ಬನೂ ತನ್ನದೇ ಆದ ಲಕ್ಷಣವನ್ನು ಹೊಂದಿದ್ದಾನೆ ಮತ್ತು ಆ ಪ್ರಕಾರದ ಪರಿಪೂರ್ಣತೆಗೆ ಒಂದು ನಿಯಮವಿರಲೇಬೇಕು; ಪ್ರತಿಯೋರ್ವನೂ ತನ್ನದೇ ಆದ ಒಂದು ಅನುರೂಪವಾದ ಕಾರ್ಯವನ್ನು ಹೊಂದಿದ್ದಾನೆ ಮತ್ತು ಆ ಕಾರ್ಯಕ್ಕಾಗಿ ಒಂದು ನಿಯಮ ಹಾಗೂ ಆದರ್ಶ ಇರಲೇಬೇಕು. ಎಲ್ಲ ಸಂಗತಿಗಳಲ್ಲೂ, ವಿಷಯಗಳಲ್ಲೂ ಸ್ವಲ್ಪ ಚಾಣಾಕ್ಷ ಮತ್ತು ಅಭ್ಯಾಸದ ಮಾನದಂಡ ಇರಲೇಬೇಕು ಮತ್ತು ಪರಿಪೂರ್ಣತೆಯ ಕಲ್ಪನೆ ಹಾಗೂ ಜೀವನದ ನಿಯಮದ ಕಲ್ಪನೆ ಇರಲೇಬೇಕು – ಧರ್ಮಕ್ಕೆ ಬೇಕಾಗಿರುವುದು ಅದೊಂದು ಸಂಗತಿ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 20/162–63**

## ಆರ್ಯ, ಮಾನವನ ಆದರ್ಶ

ಭಾರತೀಯ ಕಲ್ಪನೆಯಲ್ಲಿ, ಸಾರ್ವತ್ರಿಕವಾಗಿ ಅಪ್ಪಿಕೊಳ್ಳುವ ಧರ್ಮವು ಮನುಷ್ಯನ ವಿಕಸನಗೊಳ್ಳುತ್ತಿರುವ ಮನಸ್ಸಿಗೆ ಹಾಗೂ ಆತ್ಮಕ್ಕೆ ಪರಿಪೂರ್ಣತೆಯ ಒಂದು ಅತ್ಯುತ್ತಮ ನಿಯಮವಾಗಿದೆ; ನಿಶ್ಚಿತವಾದ ಅಥವಾ ಶ್ರೇಷ್ಠವಾದ ವಿಶ್ವಾತ್ಮಕ ಗುಣಗಳ ಶಕ್ತಿ ಮತ್ತು ಬಲದಿಂದ ಬೆಳೆಯಲು ಅದು ಅವನನ್ನು ಒತ್ತಾಯ ಮಾಡುತ್ತದೆ, ಅದು ಅವನ ಸಾಮರಸ್ಯದಲ್ಲಿ ಒಂದು ಅತ್ಯುನ್ನತ ರೀತಿಯ ಮಾನವತೆಯನ್ನು ನಿರ್ಮಿಸುತ್ತದೆ. ಭಾರತೀಯ ಚಿಂತನೆಯಲ್ಲಿ ಮತ್ತು ಜೀವನದಲ್ಲಿ ಇದೊಂದು ಅತ್ಯುತ್ತಮತೆಯ ಆದರ್ಶ, ಒಳ್ಳೆಯ ಅಥವಾ ಉದಾತ್ತ ಮನುಷ್ಯನ ನಿಯಮ, ಆರ್ಯ (ಎಂದರೆ ಶ್ರೇಷ್ಠ, ಸಜ್ಜನ, ಸಾಧು) ಸ್ವಯಂ–ಪರಿಪೂರ್ಣ ವ್ಯಕ್ತಿಗಾಗಿ ಮಂಡಿಸಲ್ಪಟ್ಟ ಕಟ್ಟುಪಾಡು. ಈ ಆದರ್ಶವು ಕೇವಲ ನೈತಿಕ ಪರಿಕಲ್ಪನೆಯಾಗಿರಲಿಲ್ಲ, ಆದರೂ ಆ ಅಂಶವು ಪೂರ್ವನಿರ್ಧಾರಿತವಾಗಿರಬಹುದು; ಇದು ಭೌತಿಕವೂ, ಧಾರ್ಮಿಕವೂ, ಸಾಮಾಜಿಕವೂ, ಸೌಂದರ್ಯಪೂರ್ಣವೂ ಸಹ ಆಗಿತ್ತು, ಒಬ್ಬ ಪೂರ್ಣ ಆದರ್ಶ ವ್ಯಕ್ತಿಯ ವಿಕಸನವಾಗಿತ್ತು, ಮಾನವ ಸ್ವಭಾವದ ಪೂರ್ಣ

ಪರಿಪೂರ್ಣತೆಯಾಗಿತ್ತು. ಅತ್ಯಂತ ವೈವಿಧ್ಯಮಯ ಗುಣಗಳನ್ನು ಭಾರತದ ಶ್ರೇಷ್ಠ ಹಾಗೂ ಉದಾತ್ತ ಮನುಷ್ಯನ ಪರಿಕಲ್ಪನೆಯಾದ 'ಆರ್ಯ'ನಲ್ಲಿ ಕಾಣಬಹುದು. ಹೃದಯದಲ್ಲಿ ದಯಾಪರತೆ, ಲೋಕೋಪಕಾರ, ಪ್ರೀತಿ, ಅನುಕಂಪ, ಪರಹಿತ ಚಿಂತನೆ, ಧಾರಾಳತನ, ತಾಳ್ಮೆ; ಚ್ಯಾರಿತ್ರ್ಯದಲ್ಲಿ ಧೈರ್ಯ, ವೀರತ್ವ, ಶಕ್ತಿ, ನಿಷ್ಠೆ, ಸಂಯಮ, ಸತ್ಯ, ಗೌರವ, ನ್ಯಾಯ, ನಂಬಿಕೆ, ವಿಧೇಯತೆ, ಮತ್ತು ಪೂಜ್ಯಭಾವನೆ ಇವೆಲ್ಲವೂ ಯುಕ್ತವಾದವುಗಳಿದ್ದಲ್ಲಿ, ಆದರೆ ಅವುಗಳನ್ನು ನಿಯಂತ್ರಿಸಲು ಮತ್ತು ನಿರ್ದೇಶಿಸಲು ನಮ್ರತೆ, ಗಟ್ಟಿಯಾದ ಸ್ವಾತಂತ್ರ್ಯ , ಹೆಮ್ಮೆ ಮತ್ತು ಸತ್ವವೂ ಸಹ; ಮನಸ್ಸಿನಲ್ಲಿ ಜ್ಞಾನ ಹಾಗೂ ಬುದ್ಧಿವಂತಿಕೆ, ಕಲಿಕೆಯ ಪ್ರೀತಿ, ಅತ್ಯುತ್ತಮ ಚಿಂತನೆಯ ಜ್ಞಾನ, ಕವಿತೆ, ಕಲೆ, ಸೌಂದರ್ಯಕ್ಕೆ ಮುಕ್ತತೆ, ವಿದ್ಯಾರ್ಜನೆಯ ಸಾಮರ್ಥ್ಯ ಮತ್ತು ಕೃತಿಗಳಲ್ಲಿ ಕೌಶಲ; ಅಂತರಂಗದಲ್ಲಿ ಬಲವಾದ ಧಾರ್ಮಿಕ ಪ್ರಜ್ಞೆ, ಧರ್ಮಶ್ರದ್ಧೆ, ದೈವಪ್ರೀತಿ, ಉನ್ನತಕ್ಕಾಗಿ ಅನ್ವೇಷಣೆ, ಆಧ್ಯಾತ್ಮಿಕ ಪರಿವರ್ತನೆ; ಸಾಮಾಜಿಕ ಸಂಬಂಧಗಳಲ್ಲಿ ಮತ್ತು ಆಚರಣೆಗಳಲ್ಲಿ ತಂದೆಯಾಗಿ, ಮಗನಾಗಿ, ಗಂಡನಾಗಿ, ಸೋದರನಾಗಿ, ಬಂಧುವಾಗಿ, ಮಿತ್ರನಾಗಿ, ಪ್ರಭುವಾಗಿ ಅಥವಾ ಪ್ರಜೆಯಾಗಿ, ಯಜಮಾನ ಅಥವಾ ಸೇವಕನಾಗಿ, ಅರ್ಚಕನಾಗಿ ಅಥವಾ ಯೋಧನಾಗಿ ಅಥವಾ ಶ್ರಮಿಕನಾಗಿ, ರಾಜನಾಗಿ ಅಥವಾ ಋಷಿಯಾಗಿ, ಕುಲದ ಸದಸ್ಯನಾಗಿ; ಇದು ಒಬ್ಬ ಉನ್ನತ ಪೋಷಣೆಯ ಮತ್ತು ಉದಾತ್ತ ಗುಣದ ಮನುಷ್ಯ 'ಆರ್ಯ'ನ ಸಮಗ್ರ ಆದರ್ಶವಾಗಿತ್ತು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 20/163–64**

## ಸಮಾಜದ ಚತುಷ್ಟಯ ವ್ಯವಸ್ಥೆ

ಪ್ರಾಚೀನ ಚಾತುರ್ವರ್ಣ ವ್ಯವಸ್ಥೆಯನ್ನು ಅದರ ನಂತರದ ಅವನತಿಯ ಮತ್ತು ವ್ಯಾಪಕವಾದ ಅರ್ಥಹೀನ ವಿಡಂಬನಾ ಬರಹದ ಜ್ಯಾತಿ ವ್ಯವಸ್ಥೆಯಿಂದ ನಿರ್ಣಯಿಸಬಾರದು. ಆದರೆ, ಇತರ ನಾಗರೀಕತೆಗಳಲ್ಲಿ, ಮತ ಪ್ರಚಾರಕರಲ್ಲಿ, ಘನವಂತಿಕೆಯಲ್ಲಿ, ವ್ಯಾಪಾರಿ ವರ್ಗದಲ್ಲಿ ಮತ್ತು ಜೀತದಾಳುಗಳಲ್ಲಿ ಅಥವಾ ಕಾರ್ಮಿಕರಲ್ಲಿ ನಾವು ಕಂಡುಕೊಂಡ ವರ್ಗಗಳ ವ್ಯವಸ್ಥೆಯೂ ಇರಲಿಲ್ಲ. ಬಾಹ್ಯವಾಗಿ ಇದು ಒಂದೇ ಆರಂಭಿಕ ಬಿಂದುವನ್ನು ಹೊಂದಿರಬಹುದು, ಆದರೆ ಅದಕ್ಕೆ ಬಹಳ ವಿಭಿನ್ನವಾಗಿ ಕಾಣುವಂಥ ಮಹತ್ವವನ್ನು ನೀಡಲಾಯಿತು. ಪ್ರಾಚೀನ ಕಾಲದ ಕಲ್ಪನೆ ಏನೆಂದರೆ, ಮನುಷ್ಯನನ್ನು ಅವನ ಸ್ವಭಾವದಿಂದ (ವರ್ಣದಿಂದ) ನಾಲ್ಕು ಪ್ರಕಾರಗಳಲ್ಲಿ ವರ್ಗೀಕರಿಸಬಹುದು. ಅದರಲ್ಲಿ ಮೊದಲನೆಯದು ಮತ್ತು

ಶ್ರೇಷ್ಠವಾದ ಕಲಿಕೆಯ, ಚಿಂತನೆಯ ಮತ್ತು ಜ್ಞಾನದ ಮನುಷ್ಯ(ವರ್ಣ); ಮುಂದಿನದು, ಆಳುವವ, ಯೋಧ, ನಾಯಕ, ಪ್ರಭುತ್ವದ ಹಾಗೂ ಕ್ರಿಯಾಶಕ್ತಿಯ ಆಡಳಿತಗಾರನಂಥ ಮನುಷ್ಯ; ಮೂರನೆಯ ವರ್ಗದಲ್ಲಿ ಬರುವವರು ಆರ್ಥಿಕ/ಹಣಕಾಸಿನ ಮನುಷ್ಯ, ಸಂಪತ್ತನ್ನು ಗಳಿಸುವವ, ಉತ್ಪಾದಕ, ವರ್ತಕ, ಕುಶಲಕರ್ಮಿ, ಬೇಸಾಯಗಾರ; ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಇವರೆಲ್ಲರೂ ದ್ವಿಜರು, ದೀಕ್ಷೆಯನ್ನು/ತರಬೇತಿಯನ್ನು ಪಡೆದುಕೊಂಡವರು. ಕೊನೆಯದಾಗಿ, ಹೆಚ್ಚು ಅಭಿವೃದ್ಧಿಯಾಗದ ಮಾನವನ ವಿಧವು ಬಂದಿತು. ಈ ಮಾನದಂಡದ ಹಂತಗಳಿಗೆ ಇನ್ನೂ ಯೋಗ್ಯವಾಗದ, ಮೇಧಾವಿಯಲ್ಲದ, ಬಲವಿಲ್ಲದ, ನಿರ್ಮಿಸುವ ಅಥವಾ ಜಾಣ ಉತ್ಪಾದನೆಯ ಸಾಮರ್ಥ್ಯವಿಲ್ಲದ, ನೈಪುಣ್ಯವಿಲ್ಲದ ಕೆಲಸಗಳಿಗೆ ಮಾತ್ರ ಯೋಗ್ಯವಾದ ಸೇವಾ ವರ್ಗದ ಮನುಷ್ಯ – ಶೂದ್ರ. ಸಮಾಜದ ಆರ್ಥಿಕ ವ್ಯವಸ್ಥೆಯನ್ನು ಈ ನಾಲ್ಕು ವಿಧಗಳಲ್ಲಿ ಮತ್ತು ಶ್ರೇಣಿಗಳಲ್ಲಿ ಹಾಕಲಾಯಿತು. ಸಮುದಾಯಕ್ಕೆ, ಅದರ ಪುರೋಹಿತರನ್ನು, ಚಿಂತಕರನ್ನು, ಅಕ್ಷರಸ್ಥರನ್ನು ಕಾಲಜ್ಞಾನಿಗಳನ್ನು, ವಿದ್ವಾಂಸರನ್ನು, ಧಾರ್ಮಿಕ ಮುಖಂಡರನ್ನು ಮತ್ತು ಮಾರ್ಗದರ್ಶಿಗಳನ್ನು ನೀಡಲು ಬ್ರಾಹ್ಮಣ ವರ್ಗವನ್ನು ಕೋರಲಾಯಿತು. ಕ್ಷತ್ರಿಯ ವರ್ಗವು ಅದಕ್ಕೆ ತನ್ನ ರಾಜಗುರುಗಳನ್ನು, ಯೋಧರನ್ನು, ಮಂಡಲಾಧಿಪತಿಗಳನ್ನು, ಆಡಳಿತಗಾರರನ್ನು ನೀಡಿತು. ವೈಶ್ಯ ವ್ಯವಸ್ಥೆಯು ಅದಕ್ಕೆ ತನ್ನ ಉತ್ಪನ್ನಗಳನ್ನು, ಕೃಷಿಕರನ್ನು, ಕುಶಲಕರ್ಮಿಗಳನ್ನು, ಕರಕುಶಲಿಗಳನ್ನು, ವರ್ತಕರನ್ನು ಮತ್ತು ವ್ಯಾಪಾರಿಗಳನ್ನು ಪೂರೈಸಿತು. ಶೂದ್ರ ವರ್ಗವು, ಸೇವಕ ವರ್ಗದವರನ್ನು ಹಾಗೂ ಆಳುಗಳನ್ನು ಅದಕ್ಕೆ ಪೂರೈಸಿತು. ಈ ವ್ಯವಸ್ಥೆ ಇರುವವರೆಗೆ, ಅದರ ಅಸಾಮಾನ್ಯ ಸಹನಶಕ್ತಿ ಮತ್ತು ಬಹುಶಃ ಧರ್ಮಕ್ಕೆ, ಚಿಂತನೆಗೆ ಮತ್ತು ಕಲಿಕೆಗೆ (ಶ್ರೇಣಿಯ ಮೇಲ್ಭಾಗದಲ್ಲಿ) ನೀಡಲಾದ ಸರ್ವೋಚ್ಚ ಸ್ಥಾನದ ಹೊರತಾಗಿ ಇದರಲ್ಲಿ ಯಾವುದೇ ವಿಶಿಷ್ಟವಾದದ್ದು ಇರಲಿಲ್ಲ – ಅದಕ್ಕೆ ಪ್ರಮುಖ ಶಕ್ತಿಯಾಗಿ ಒಂದೆರಡು ಬೇರೆ ನಾಗರೀಕತೆಗಳಿಂದ ಹೋಲಿಸಬಹುದಾಗಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 20/170–71**

## ಉಗಮವಲ್ಲ ಆದರೆ ಆಂತರಿಕ ಮನೋಭಾವ

ನಾಲ್ಕು ವರ್ಣಗಳ ಭಾರತೀಯ ವ್ಯವಸ್ಥೆಯ ನಿಜವಾದ ಶ್ರೇಷ್ಠತೆಯು ಅದರ ಆರ್ಥಿಕ ಕಾರ್ಯದ ಸುಸಂಘಟಿತ ವಿಭಾಗದಲ್ಲಿ ನೆಲೆಸಿಲ್ಲವಾದ್ದರಿಂದ ಅದರ ನಿಜವಾದ ಸ್ವಂತಿಕೆ ಮತ್ತು ಶಾಶ್ವತ ಮೌಲ್ಯವು ಚಿಂತಕರು ಮತ್ತು ನಿರ್ಮಾತೃಗಳು

ಈ ರೂಪಗಳಲ್ಲಿ ಹೊಯ್ದು ನೈತಿಕ ಹಾಗೂ ಆಧ್ಯಾತ್ಮಿಕ ವಿಷಯಗಳಲ್ಲಿ ಇತ್ತು. ವ್ಯಕ್ತಿಯ ಭೌದ್ಧಿಕ, ನೈತಿಕ ಮತ್ತು ಆಧ್ಯಾತ್ಮಿಕ ಬೆಳವಣಿಗೆಗೆ ಆ ವರ್ಣದ ಪ್ರಮುಖ ಅವಶ್ಯಕತೆಯಾಗಿದೆ ಎಂಬ ಪರಿಕಲ್ಪನೆಯೊಂದಿಗೆ ಈ ಆಂತರಿಕ ವಿಷಯವು ಪ್ರಾರಂಭವಾಯಿತು. ಸಮಾಜವು ಈ ಬೆಳವಣಿಗೆಗೆ ಅಗತ್ಯವಾದ ಚೌಕಟ್ಟು ಮಾತ್ರ; ಇದು ಅದರ ಅಗತ್ಯವಾದ ಮಾಧ್ಯಮ, ಕ್ಷೇತ್ರ ಹಾಗೂ ಪರಿಸ್ಥಿತಿಗಳೊಂದಿಗೆ ಮತ್ತು ಸಹಾಯಕಾರಿ ಪ್ರಭಾವಗಳೊಂದಿಗೆ ಅದನ್ನು ಒದಗಿಸುವ ಸಂಬಂಧಗಳ ವ್ಯವಸ್ಥೆಯಾಗಿದೆ. ವ್ಯಕ್ತಿಯು ಈ ಸಂಬಂಧಗಳಿಗೆ ಸೇವೆ ಸಲ್ಲಿಸಲು, ಸಮಾಜವನ್ನು ನಿರ್ವಹಿಸಲು ಸಹಾಯ ಮಾಡುತ್ತಿರಲು ಮತ್ತು ಅವನ ಕರ್ತವ್ಯದ ಹಾಗೂ ಸಹಾಯದ ಋಣವನ್ನು ಪಾವತಿಸಲು ಮತ್ತು ಸಾಮುದಾಯಿಕ ಜೀವನದಿಂದ ಸಾಧ್ಯವಾದ ಸಹಾಯದೊಂದಿಗೆ ತನ್ನ ಸ್ವಂತ ಅಭಿವೃದ್ಧಿಗಾಗಿ ಮುಂದುವರೆಯಲು ಸಮಾಜದಲ್ಲಿ ಒಂದು ಸುರಕ್ಷಿತವಾದ ಸ್ಥಳವನ್ನು ಕಂಡುಕೊಳ್ಳಬೇಕಾಗಿತ್ತು. ರೂಢಿಗತವಾಗಿ, ಜನನವನ್ನು ಮೊದಲ ಸ್ಥೂಲ ಹಾಗೂ ಸ್ವಾಭಾವಿಕ ಸೂಚಕವಾಗಿ ಅಂಗೀಕರಿಸಲಾಗಿತ್ತು; ಭಾರತದ ಮಾನಸಕ್ಕೆ ಆನುವಂಶೀಯತೆಯು ಯಾವಾಗಲೂ ಒಂದು ಅತ್ಯಂತ ಮಹತ್ವದ ಅಂಶವಾಗಿದೆ. ನಂತರದ ಚಿಂತನೆಗಳಲ್ಲಿ ಇದನ್ನು ಪ್ರಕೃತಿಯ ಸಂಕೇತವೆಂದು ಮತ್ತು ವ್ಯಕ್ತಿಯು ಮೊದಲಿನ ಜನ್ಮಗಳಲ್ಲಿ ತನಗಾಗಿ ತನ್ನ ಹಿಂದಿನ ಆತ್ಮಾಭಿವೃದ್ಧಿಗಳಿಂದ ಸುತ್ತಲಿನ ಪರಿಸರಕ್ಕೆ ಸಿದ್ಧಪಡಿಸಿಕೊಂಡ ಸೂಚ್ಯಂಕವೆಂದು ಪರಿಗಣಿಸಲಾಯಿತು. ಆದರೆ ಜನನವು ವರ್ಣದ ಏಕೈಕ ಪರೀಕ್ಷೆಯಲ್ಲ ಮತ್ತು ಆಗಕೂಡದು. ಮನುಷ್ಯನ ಬೌದ್ಧಿಕ ಸಾಮರ್ಥ್ಯ, ಅವನ ಮನೋಧರ್ಮದ ಬದಲಾವಣೆ, ಅವನ ನೈತಿಕ ಸ್ವಭಾವ, ಅವನ ಆಧ್ಯಾತ್ಮಿಕ ಸ್ಥಾನಮಾನ ಇವುಗಳು ಪ್ರಮುಖ ಅಂಶಗಳಾಗಿವೆ. ಆದ್ದರಿಂದ, ಕುಟುಂಬ ಜೀವನದ ನಿಯಮವೊಂದನ್ನು, ವೈಯಕ್ತಿಕ ಅನುಷ್ಠಾನದ ಕ್ರಮವನ್ನು ಮತ್ತು ಸ್ವ-ತರಬೇತಿಯನ್ನು ಹೊರತರಲು ರೂಪಿಸಲಾದ ಪಾಲನೆಯ ಹಾಗೂ ಶಿಕ್ಷಣದ ಶಕ್ತಿಯೊಂದನ್ನು ಅಲ್ಲಿ ಸ್ಥಾಪಿಸಲಾಯಿತು. ಪ್ರತಿಯೊಬ್ಬ ಮನುಷ್ಯನನ್ನು ಅರ್ಹತೆಗಳಲ್ಲಿ, ಹವ್ಯಾಸಗಳಲ್ಲಿ ಮತ್ತು ಸಾಧನೆಗಳಲ್ಲಿ ಎಚ್ಚರಿಕೆಯಿಂದ ತರಬೇತುಗೊಳಿಸಲಾಯಿತು, ಜೀವನದಲ್ಲಿ ಅವನಿಗೆ ವಹಿಸಲ್ಪಟ್ಟ ಕಾರ್ಯವನ್ನು ನಿರ್ವಹಿಸಲು ಅಗತ್ಯವಾದ ಗೌರವ ಹಾಗೂ ಕರ್ತವ್ಯದ ಭಾವನೆಯ ಗೀಳನ್ನು ಹಾಕಲಾಯಿತು. ಅವನು ಮಾಡಬೇಕಾದ ಸಂಗತಿಯ ವಿಜ್ಞಾನದೊಂದಿಗೆ, ಮತ್ತು ಅತ್ಯುನ್ನತ ಆಡಳಿತ, ಸಿದ್ಧಾಂತ ಮತ್ತು ಅದರ ಚಟುವಟಿಕೆಗಳ (ಆರ್ಥಿಕ, ರಾಜಕೀಯ, ಪೌರೋಹಿತ್ಯದ,

ಸಾಹಿತ್ಯಿಕ, ಸಾಂಪ್ರದಾಯಿಕ ಅಥವಾ ಇತರೇ ಯಾವುದೇ ಆಗಿರಲಿ) ಮಾನ್ಯಮಾಡಿದ ಪರಿಪೂರ್ಣತೆ ಹೊಂದಲು ಅವನನ್ನು ಎಚ್ಚರಿಕೆಯಿಂದ ಸಿದ್ಧಗೊಳಿಸಲಾಯಿತು – ಅಭಿರುಚಿಯಾಗಿ ಅದರಲ್ಲಿ ಯಶಸ್ವಿಯಾಗಲು ಇದೊಂದು ಉತ್ತಮವಾದ ಮಾರ್ಗ. ಕಡೆಗಣಿಸಲ್ಪಟ್ಟ ಕ್ಷೇತ್ರಗಳೂ ಸಹ ಅವುಗಳ ಕೃಷಿಯನ್ನು ಹೊಂದಿವೆ, ಅವುಗಳ ನಿಯಮ ಮತ್ತು ಸಿದ್ಧಾಂತ ಹೊಂದಿವೆ, ಅವುಗಳ ಯಶಸ್ಸಿನ ಮಹತ್ವಾಕಾಂಕ್ಷೆ ಹೊಂದಿವೆ, ಅವುಗಳ ಉತ್ತಮ ಕಾಯಕದ ನಿರ್ವಹಣೆಯಲ್ಲಿ ಹಾಗೂ ಧರ್ಮಸೂಕ್ಷ್ಮತೆಯಲ್ಲಿ ಗೌರವ ಭಾವ ಹೊಂದಿವೆ, ಅವುಗಳ ಪರಿಪೂರ್ಣತೆಯ ಒಂದು ನಿರ್ದಿಷ್ಟ ಮಾನದಂಡದ ಘನತೆ ಹೊಂದಿವೆ, ಯಾಕೆಂದರೆ ಅತಿ ಕಡಿಮೆ ಹಾಗೂ ಕನಿಷ್ಠ ಆಕರ್ಷಕವಾದವುಗಳೂ ಸಹ ಒಂದು ಮಟ್ಟದಲ್ಲಿ ಸ್ವ–ಶೋಧನೆಯ ಮತ್ತು ಶಿಸ್ತುಬದ್ಧವಾದ ಸ್ವ–ತೃಪ್ತಿಯ ಸಾಧನವಾಗಬಹುದಾದ ಈ ಸಂಗತಿಗಳನ್ನು ಅವುಗಳು ಹೊಂದಿದ್ದವು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 20/172–73**

## ಆಧ್ಯಾತ್ಮಿಕ ಗುರಿ

ಭಾರತೀಯ ಮತ್ತು ಯುರೋಪಿನ ಸಂಸ್ಕೃತಿಗಳ ನಡುವಿನ ವ್ಯತ್ಯಾಸದ ಇಡೀಯ ಬೇರು ಭಾರತದ ನಾಗರೀಕತೆಯ ಆಧ್ಯಾತ್ಮದ ಉದ್ದೇಶದಿಂದ ಉದ್ಭವಿಸುತ್ತದೆ. ಅದಕ್ಕೆ ಅದರ ವಿಶಿಷ್ಟವಾದ ನಡತೆಯನ್ನು ಕೊಡುವಂಥ ಅದರ ವಿವಿಧ ರೂಪಗಳ ಹಾಗೂ ಲಯಗಳ ಎಲ್ಲ ಸಮೃದ್ಧಿಯ ಮೇಲೆ ಮತ್ತು ಧಾರಾಳತನದ ಮೇಲೆ ಈ ಉದ್ದೇಶವು ಹೇರುವ ಬದಲಾವಣೆ ಇದಾಗಿದೆ. ಇತರ ಸಂಸ್ಕೃತಿಗಳೊಂದಿಗೆ ಅದು ಸಮಾನವಾಗಿ ಏನನ್ನು ಹೊಂದಿದೆಯೊ, ಆ ಅವಕಾಶದಿಂದ ಅದು ಒಂದು ಗಮನಾರ್ಹವಾದ ನವೀನತೆಯನ್ನು ಮತ್ತು ಶ್ರೇಷ್ಠತೆಯನ್ನು, ಮುದ್ರೆಯನ್ನು ಪಡೆದುಕೊಳ್ಳುತ್ತದೆ. ಆಧ್ಯಾತ್ಮಿಕ ಆಶಯವು ಈ ಸಂಸ್ಕೃತಿಯ ನಿಯಂತ್ರಣ ಶಕ್ತಿಯಾಗಿತ್ತು, ಅದರ ಮೂಲ ಚಿಂತನೆಯಾಗಿತ್ತು, ಅದರ ಸದ್ಯದ ಉತ್ಸಾಹವಾಗಿತ್ತು. ಇದು ಆಧ್ಯಾತ್ಮಿಕತೆಯನ್ನು ಜೀವನದ ಉನ್ನತ ಗುರಿಯನ್ನಾಗಿ ಮಾಡುವುದು ಮಾತ್ರವಲ್ಲದೆ, ಮಾನವ ಕುಲದ ಹಿಂದಿನ ಪರಿಸ್ಥಿತಿಗಳಲ್ಲಿ ಇಡೀ ಜೀವನವನ್ನು ಆಧ್ಯಾತ್ಮಿಕತೆಯ ಕಡೆಗೆ ತಿರುಗಿಸುವುದಕ್ಕಾಗಿಯೂ ಸಹ ಅದು ಸಾಧ್ಯವಾದಷ್ಟು ಪ್ರಯತ್ನಿಸಿತು. ಆದರೆ, ಸ್ವಭಾವಸಿದ್ಧವಾಗಿ ಧರ್ಮವು ಮಾನವನ ಮನಸ್ಸಿನಲ್ಲಿ ಇರುವುದರಿಂದ ಒಂದು ಆಧ್ಯಾತ್ಮಿಕ ಪ್ರೇರಣೆಯ ಪರಿಪೂರ್ಣವಿರದ

ರೂಪವು, ಆಧ್ಯಾತ್ಮಿಕ ಕಲ್ಪನೆಯ ಪ್ರಾಬಲ್ಯವು, ಜೀವನವನ್ನು ನಿಯಂತ್ರಿಸುವ ಅದರ ಪ್ರಯತ್ನವು, ಜೀವನದ ಪ್ರತಿಯೊಂದು ಸನ್ನಿವೇಶವನ್ನು ಆಧ್ಯಾತ್ಮಿಕ ಭಾವನೆಯೊಂದಿಗೆ ಧಾರ್ಮಿಕ ಅಚ್ಚಿನಲ್ಲಿ ಮತ್ತು ನಿರಂತರ ತುಂಬುವಿಕೆಯಲ್ಲಿ ಚಿಂತನೆ ಮತ್ತು ಕ್ರಿಯೆಯ ಬಿತ್ತರಿಸುವಿಕೆಯನ್ನು ಅನಿವಾರ್ಯವಾಗಿಸಿತು; ವ್ಯಾಪಿಸುತ್ತಿರುವ ಧರ್ಮ ಹಾಗೂ ತತ್ವ ಶಾಸ್ತ್ರವನ್ನು ಒಳಗೊಂಡ ಒಂದು ಸಂಸ್ಕೃತಿಯನ್ನು ಅದು ಕೇಳಿಕೊಂಡಿತು. ಅತಿ ಉನ್ನತ ಆಧ್ಯಾತ್ಮಿಕತೆಯು ಧಾರ್ಮಿಕ ರೂಪ ಹಾಗೂ ಸಿದ್ಧಾಂತಗಳಿಂದ ನಿಯಂತ್ರಿಸಲ್ಪಡುವ ಅನ್ವೇಷಣೆಯ ಕೆಳಹಂತದ ಅತಿ ಎತ್ತರದಲ್ಲಿ ಮುಕ್ತ ಹಾಗೂ ವಿಶಾಲವಾದ ವಾತಾವರಣದಲ್ಲಿ ನಿಜಕ್ಕೂ ಸಂಚರಿಸುತ್ತದೆ; ಅದು ಅವುಗಳ ಇತಿಮಿತಿಗಳನ್ನು ಸುಲಭವಾಗಿ ತಡೆದುಕೊಳ್ಳುವುದಿಲ್ಲ ಮತ್ತು ಅದು ಒಪ್ಪಿಕೊಂಡಾಗಲೂ ಸಹ ಅದು ಅವುಗಳನ್ನು ದಾಟಿ ಹೋಗುತ್ತದೆ; ಅದು ಸಾಂಪ್ರದಾಯಿಕ ಧಾರ್ಮಿಕ ಮನಸ್ಸಿಗೆ ಗ್ರಹಿಸಲಿಕ್ಕಾಗದ ಒಂದು ಅನುಭವದಲ್ಲಿ ಅದು ವಾಸಿಸುತ್ತದೆ. ಆದರೆ ಮನುಷ್ಯನು ಆ ಅತ್ಯುನ್ನತವಾದ ಆಂತರಿಕ ಉನ್ನತಿಗೆ ತತ್‌ಕ್ಷಣವೇ ಬರಲಾರನು ಮತ್ತು ಅದನ್ನು ಅವನಿಂದ ತಕ್ಷಣಕ್ಕೆ ಬೇಡಿಕೆ ಇಟ್ಟರೆ, ಅವನು ಅಲ್ಲಿಗೆ ಎಂದಿಗೂ ಬರಲಾರನು. ಮೊದಮೊದಲು ಅವನಿಗೆ ಕೆಳಹಂತದ ಬೆಂಬಲ ಮತ್ತು ಆರೋಹಣದ ಹಂತಗಳು ಬೇಕಾಗುತ್ತವೆ; ಅವನು ಸಿದ್ಧಾಂತದ, ಆರಾಧನೆಯ ಮೂರ್ತರೂಪದ, ಸಂಕೇತದ ವೇದಿಕೆಯನ್ನು ಬೇಡುತ್ತಾನೆ, ಅವನಲ್ಲಿ ಆತ್ಮ–ಮಂದಿರವನ್ನು ಕಟ್ಟಿಕೊಳ್ಳುವಾಗ ಬೇಕಾದ ಸ್ವಲ್ಪ ಅನುಗ್ರಹ ಮತ್ತು ಅರೆ ನೈಸರ್ಗಿಕದ ಅನುಮತಿಯನ್ನು ಬೇಡುತ್ತಾನೆ. ಮಂದಿರವು ಪೂರ್ಣಗೊಂಡಾಗ ಮಾತ್ರ ಆಧಾರಗಳನ್ನು ತೆಗೆಯಬಹುದು, ಆಗ ವೇದಿಕೆಯು ಕಣ್ಮರೆಯಾಗುತ್ತದೆ. ಹಿಂದೂ ಧರ್ಮದ ಹೆಸರಿನಲ್ಲಿ ಈಗ ನಡೆಯುವಂಥ ಧಾರ್ಮಿಕ ಸಂಸ್ಕೃತಿಯ ಈ ಉದ್ದೇಶವನ್ನು ಪೂರೈಸುವುದಷ್ಟೇ ಅಲ್ಲದೆ ಕೆಲವು ಪಂಥಗಳ ಧರ್ಮಗಳಿಗಿಂತ ಭಿನ್ನವಾಗಿ ಅದು ತನ್ನ ಉದ್ದೇಶವನ್ನು ಅರಿತುಕೊಂಡಿತು. ಅದು ತನ್ನಷ್ಟಕ್ಕೆ ತಾನು ಯಾವುದೇ ಹೆಸರನ್ನು ನೀಡಲಿಲ್ಲ, ಏಕೆಂದರೆ ಅದು ತನ್ನಷ್ಟಕ್ಕೆ ತಾನು ಜನಾಂಗೀಯ ಮಿತಿಗಳನ್ನು ಹಾಕಿಕೊಳ್ಳಲಿಲ್ಲ; ಅದು ಯಾವುದೇ ವಿಶ್ವಾತ್ಮಕ ಅಂಟುವಿಕೆಯನ್ನು ಪ್ರತಿಪಾದಿಸಲಿಲ್ಲ, ಯಾವುದೇ ದೋಷಾತೀತ ಸಿದ್ಧಾಂತವನ್ನು ಒತ್ತಿ ಹೇಳಲಿಲ್ಲ, ಮುಕ್ತಿಯ ಯಾವುದೇ ಕಿರಿದಾದ ಪಥವನ್ನು ಅಥವಾ ದ್ವಾರವನ್ನು ಸ್ಥಾಪಿಸಲಿಲ್ಲ; ಇದು ನಿರಂತರವಾಗಿ ವಿಕಸಿಸುತ್ತಿರುವ ಮಾನವ ಚೇತನದ,

ದೇವರೆಡೆಗಿನ ಪ್ರಯತ್ನಗಳ ಸಂಪ್ರದಾಯಕ್ಕಿಂತ ಕಡುಮೆಯಾದ ಒಂದು ನಂಬಿಕೆ ಅಥವಾ ಪಂಥವಾಗಿತ್ತು. ಆಧ್ಯಾತ್ಮಿಕ ಸ್ವ–ನಿರ್ಮಾಣ ಮತ್ತು ಸ್ವ–ಶೋಧನೆಗಾಗಿ ನಡೆಸಲಾದ ಬಹುಮುಖ ಅವಕಾಶವು ಅದು ತಿಳಿದ ಶಾಶ್ವತ ಧರ್ಮ, ಸನಾತನ ಧರ್ಮವೆಂಬ ಏಕೈಕ ಹೆಸರಿನಿಂದ ತನ್ನಷ್ಟಕ್ಕೆ ತಾನು ಪ್ರತಿಪಾದನೆ ಮಾಡಿಕೊಳ್ಳುವ ಹಕ್ಕನ್ನು ಅದು ಹೊಂದಿತ್ತು. ಭಾರತೀಯ ಧರ್ಮದ ಈ ಭಾವವನ್ನು ಮತ್ತು ಸ್ಫೂರ್ತಿಯ ನ್ಯಾಯಯುತ ಮತ್ತು ಸರಿಯಾದ ಮೆಚ್ಚುಗೆಯನ್ನು ಪಡೆದಿದ್ದರೆ ಮಾತ್ರ ನಾವು ಭಾರತೀಯ ಸಂಸ್ಕೃತಿಯ ನಿಜವಾದ ಪ್ರಜ್ಞೆಯ ಮತ್ತು ಸ್ಫೂರ್ತಿಯ ಒಂದು ತಿಳುವಳಿಕೆಗೆ ಬರಬಹುದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 20/178–79**

## ಮನುಷ್ಯ ಜೀವನದ ನಾಲ್ಕು ಅವಶ್ಯಕತೆಗಳು

ಭಾರತೀಯ ಧರ್ಮವು ಮನುಷ್ಯನ ಮುಂದೆ ನಾಲ್ಕು ಅವಶ್ಯಕತೆಗಳನ್ನು ಇಟ್ಟಿದೆ. ಮೊದಲನೆಯದು, ಭಾರತೀಯ ಧರ್ಮವು ಮನಸ್ಸಿನ ಮೇಲೆ ಅತ್ಯಂತ ಉನ್ನತ ಪ್ರಜ್ಞೆಯಲ್ಲಿ ಅದನ್ನು ತಿಳಿಯದೆ ಎಲ್ಲವೂ ಅದರಲ್ಲಿಯೇ ಇರುವ ಮತ್ತು ಚಲಿಸುವ, ಒಂದು ದಿನ ಎಲ್ಲರೂ ಅದರ ಅರಿವನ್ನು ಹೊಂದಲೇಬೇಕಾದ ಪರಿಪೂರ್ಣವಾದುದರೆಡೆಗೆ, ಶಾಶ್ವತವಾದುದರೆಡೆಗೆ ಮತ್ತು ಅನಂತವಾದುದರೆಡೆಗೆ ಹಿಂತಿರುಗುವ ಒಂದು ನಂಬಿಕೆಯನ್ನು ಅಥವಾ ವಿಶ್ವಾತ್ಮಕ ಅಸ್ತಿತ್ವದ ಮತ್ತು ವಿಶ್ವದ ಅತಿಂದ್ರೀಯ ಸ್ಥಿತಿಯನ್ನು ಹೇರಿತು. ಎರಡನೆಯದು, ಮನುಷ್ಯನು ಈ ಶ್ರೇಷ್ಠ ಉಪಸ್ಥಿತಿಯ ಸತ್ಯದಲ್ಲಿ ಪ್ರಜ್ಞಾವಂತನಾಗಿ ಬೆಳೆಯುವ ಪ್ರಯತ್ನಕ್ಕಾಗಿ ಸನ್ನದ್ಧವಾಗುವವರೆಗೆ ಅಭಿವೃದ್ಧಿಯಿಂದ ಮತ್ತು ಅನುಭವದಿಂದ ಬೇಕಾದ ಸ್ವಯಂ–ಸಿದ್ಧತೆಯನ್ನು ವೈಯಕ್ತಿಕ ಜೀವನದ ಮೇಲೆ ಹೇರಿತು. ಮೂರನೆಯದಾಗಿ, ಚೆನ್ನಾಗಿ ಹುಟ್ಟುಹಾಕಿದ, ಚೆನ್ನಾಗಿ ಅನ್ವೇಷಿಸಿದ, ಹಲವು ಕವಲುಗಳಾಗುವ ಮತ್ತು ಯಾವಾಗಲೂ ವರ್ಧಿಸುವ ಜ್ಞಾನದ ಮತ್ತು ಆಧ್ಯಾತ್ಮಿಕ ಅಥವಾ ಧಾರ್ಮಿಕ ಶಿಸ್ತುಕ್ರಮದ ಮಾರ್ಗವನ್ನು ಅದು ಒದಗಿಸಿತು. ಕೊನೆಯದಾಗಿ ಈ ಉನ್ನತ ಹಂತಗಳಿಗೆ ಇನ್ನೂ ಸಿದ್ಧವಿಲ್ಲದವರಿಗೆ ಅದು ವ್ಯಕ್ತಿಗತ ಮತ್ತು ಸಾಮೂಹಿಕ ಜೀವನದ ವ್ಯವಸ್ಥೆಯನ್ನು, ವೈಯಕ್ತಿಕ ಮತ್ತು ಸಾಮಾಜಿಕ ನಡುವಳಿಕೆಯ ಚೌಕಟ್ಟನ್ನು, ಮಾನಸಿಕ, ನೈತಿಕ ಹಾಗೂ ಪ್ರಾಣಿಕ ಬೆಳವಣಿಗೆಯ ಚೌಕಟ್ಟನ್ನು ಒದಗಿಸಿತು. ಇದರ ಮೂಲಕ ಅವುಗಳು ಪ್ರತಿಯೊಂದನ್ನು ಅವನ

ಸ್ವಂತ ಮಿತಿಗಳಲ್ಲಿ ಮತ್ತು ಅವನ ಸ್ವಂತ ಸ್ವಭಾವದ ಅನುಗುಣವಾಗಿ ಶ್ರೇಷ್ಠ ಇರುವಿಕೆಗೆ ಅಣಿಯಾಗಲು ಒಂದು ವ್ಯವಸ್ಥೆಯನ್ನು ಅಥವಾ ಚೌಕಟ್ಟನ್ನು ಒದಗಿಸಿತು. ಇವುಗಳಲ್ಲಿ ಮೊದಲ ಮೂರು ಅಂಶಗಳು ಯಾವುದೇ ಧರ್ಮಕ್ಕೂ ಅತಿ ಅವಶ್ಯಕವಾದವುಗಳಾಗಿವೆ, ಆದರೆ ಹಿಂದುತ್ವವು ಯಾವಾಗಲೂ ಕೊನೆಯ ಅವಶ್ಯಕತೆಯೊಂದಿಗೆ ಹೆಚ್ಚು ಮಹತ್ವವನ್ನು, ಸಂಬಂಧವನ್ನು ಕಲ್ಪಿಸಿದೆ. ಇದು ಜೀವನದ ಯವುದೇ ಭಾಗವನ್ನು ಜ್ಯಾತ್ಯಾತೀತ ಮತ್ತು ಪರಕೀಯವೆಂಬಂತೆ ಧಾರ್ಮಿಕ ಹಾಗೂ ಆಧ್ಯಾತ್ಮಿಕ ಜೀವನಕ್ಕೆ ಬಿಟ್ಟುಕೊಟ್ಟಿಲ್ಲ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 20/181**

**ಅಗಾಧವಾದ ಜೀವನಶಕ್ತಿ**

ನಾವು ಭಾರತದ ಗತಕಾಲವನ್ನು ನೋಡಿದಾಗ, ಮುಂದೆ ನಮಗೆ ಕಾಣಿಸುವುದು ಭಾರತಮಾತೆಯ ಅದ್ಭುತ ಚೈತನ್ಯ, ಅವಳ ಅಕ್ಷಯ ಜೀವನ ಶಕ್ತಿ ಮತ್ತು ಜೀವನದ ಆನಂದ, ಅವಳ ಊಹಿಸಲಾಗದ ಸಮೃದ್ಧ ಸೃಜನಶೀಲತೆ – ಕನಿಷ್ಠ ಮೂರು ಸಾವಿರ ವರ್ಷಗಳಿಂದ (ಇದು ನಿಜವಾಗಿಯೂ ದೀರ್ಘ ಸಮಯ), ಅವಳು ಹೇರಳವಾಗಿ ಮತ್ತು ನಿರಂತರವಾಗಿ, ಅದ್ದೂರಿಯಾಗಿ, ಅಕ್ಷಯ ಬಹುಮುಖತೆಯೊಂದಿಗೆ ಗಣರಾಜ್ಯಗಳನ್ನು ಮತ್ತು ಸಾಮ್ರಾಜ್ಯಗಳನ್ನು, ತತ್ವ ಶಾಸ್ತ್ರಗಳನ್ನು, ವಿಶ್ವರೂಪಗಳನ್ನು, ವಿಜ್ಞಾನವನ್ನು, ಧರ್ಮಗಳನ್ನು, ಕಲೆ ಮತ್ತು ಕವಿತೆಗಳನ್ನು, ಎಲ್ಲ ರೀತಿಯ ಸ್ಮಾರಕಗಳನ್ನು, ಅರಮನೆಗಳನ್ನು, ದೇವಾಲಯಗಳನ್ನು, ಸಾರ್ವಜನಿಕ ಕಾರ್ಯಗಳನ್ನು, ಸಮುದಾಯ ಹಾಗೂ ಸಮಾಜಗಳನ್ನು, ಧಾರ್ಮಿಕ ಆದೇಶಗಳನ್ನು, ಕಾನೂನು ಹಾಗೂ ಸಂಹಿತೆಗಳನ್ನು, ಆಚರಣೆಗಳನ್ನು, ಭೌತಿಕ ವಿಜ್ಞಾನಗಳನ್ನು, ಅತಿಂದ್ರೀಯ ವಿಜ್ಞಾನಗಳನ್ನು, ಯೋಗ ಪದ್ಧತಿಗಳನ್ನು, ರಾಜಕೀಯ ಹಾಗೂ ಆಡಳಿತ ವ್ಯವಸ್ಥೆಗಳನ್ನು, ಆಧ್ಯಾತ್ಮಿಕ ಕೌಶಲಗಳನ್ನು, ಲೌಕಿಕ ಕೌಶಲಗಳನ್ನು, ವ್ಯಾಪಾರಗಳನ್ನು, ಕೈಗಾರಿಕೆಗಳನ್ನು, ಉತ್ತಮ ಕರಕುಶಲಗಳನ್ನು (ಅಂತ್ಯವಿಲ್ಲದ ಪಟ್ಟಿ) ಸೃಷ್ಟಿಸುತ್ತಾಳೆ ಮತ್ತು ಪ್ರತಿ ಅಂಶದಲ್ಲೂ ಸಮೃದ್ಧತೆ ಇದೆ. ಅವಳು ಸೃಷ್ಟಿಸುತ್ತಾಳೆ ಮತ್ತು ರಚಿಸುತ್ತಾಳೆ ಆದರೂ ತೃಪ್ತಿ ಇಲ್ಲ ಮತ್ತು ದಣಿವಿಲ್ಲ; ಅವಳು ಅದರ ಅಂತ್ಯವನ್ನು ಬಯಸುವುದಿಲ್ಲ, ವಿಶ್ರಾಂತಿಗಾಗಿ ಸ್ಥಳಾವಕಾಶ ಬೇಕಾಗಿಲ್ಲ, ಜಡತ್ವಕ್ಕೆ ಸಮಯ ಬೇಕಾಗಿಲ್ಲ ಮತ್ತು ಪಾಳು ಬೀಳಲು(ವ್ಯರ್ಥವಾಗಲು) ಸಮಯವಿಲ್ಲ. ಅವಳ ಹಡಗುಗಳು ಸಾಗರವನ್ನು

ದಾಟುತ್ತವೆ ಮತ್ತು ಹೆಚ್ಚಾದ ಅವಳ ಸಂಪತ್ತು ಇಸ್ರೇಲ್, ಈಜಿಪ್ಟ್ ಮತ್ತು ರೋಮ್‌ವರೆಗೂ ಹರಿಯುತ್ತದೆ; ಅವಳ ನೆಲೆಗಳು ಅವಳ ಕಲೆಗಳನ್ನು, ಮಾಹಾಕಾವ್ಯಗಳನ್ನು, ಮತ್ತು ಸಿದ್ಧಾಂತಗಳನ್ನು ದ್ವೀಪ ಸಮೂಹಗಳಲ್ಲಿ ವಿಸ್ತರಿಸಿವೆ; ಅವಳ ಕುರುಹುಗಳು ಮೆಸೊಪೊಟಾಮಿಯಾದ ಮರಳಿನಲ್ಲಿ ಕಂಡುಬರುತ್ತವೆ; ಆಕೆಯ ಧರ್ಮಗಳು ಚೀನಾ ಹಾಗೂ ಜಪಾನ್ ದೇಶಗಳ ಮೇಲೂ ಪ್ರಭಾವ ಬೀರಿದ್ದವು ಮತ್ತು ಪಶ್ಚಿಮದೆಡೆಗೆ ಪ್ಯಾಲೆಸ್ಟೈನ್ ಹಾಗೂ ಅಲೆಕ್ಸಾಂಡ್ರಿಯಾದವರೆಗೂ ಹಬ್ಬಿದ್ದವು, ಉಪನಿಷತ್ತುಗಳ ಲಕ್ಷಣಗಳು ಹಾಗೂ ಬೌದ್ಧರ ವಿಚಾರಗಳು ಕ್ರಿಸ್ತನ ತುಟಿಗಳ ಮೇಲೆ ಪ್ರತಿಧ್ವನಿಸಿದ್ದವು. ಅವಳ ನಾಡಿನಲ್ಲಿರುವಂತೆ, ಎಲ್ಲೆಡೆಯೂ ಅವಳ ಕೃತಿಗಳಲ್ಲಿ ಜೀವನದ ಅತ್ಯುತ್ಕೃಷ್ಟ ಶಕ್ತಿಯು ಉಕ್ಕಿ ಹರಿಯುತ್ತಿತ್ತು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 20/7–8**

## ಸಮನ್ವಯ ಮತ್ತು ಮಿಲನ

ಪುರಾಣಗಳು ಮತ್ತು ತಂತ್ರಗಳು ತಮ್ಮೊಳಗೆ ಅತ್ಯುನ್ನತವಾದ ಆಧ್ಯಾತ್ಮಿಕ ಹಾಗೂ ತಾತ್ವಿಕ ಸತ್ಯಗಳನ್ನು ಒಳಗೊಂಡಿರುವುದನ್ನು, ಚಿಂತಕರ ಚರ್ಚೆಗಳಲ್ಲಿನ ಭಿನ್ನವಿರದ ಮತ್ತು ಪರಸ್ಪರ ಪ್ರತಿಪಾದನೆಯಲ್ಲಿ ಪ್ರಕಟವಾಗದ, ಆದರೆ ಮಿಲನದಿಂದ (ಒಂದಾಗುವಿಕೆಯಿಂದ) ಭಾರತೀಯ ಮನಸ್ಸಿನ ಮತ್ತು ಚೇತನದ ವಿಶ್ವವ್ಯಾಪಕತೆಗೆ ಅನುಕೂಲಕರವಾಗುವ ಬಾಂಧವ್ಯದಿಂದ ಅಥವಾ ಗುಂಪಿನಿಂದ ಸಮನ್ವಯಗೊಳಿಸಲ್ಪಟ್ಟಿದೆ ಎನ್ನುವುದನ್ನು ಗಮನಿಸಬೇಕು. ಕೆಲವೊಮ್ಮೆ ಇದನ್ನು ಸ್ಪಷ್ಟವಾಗಿ ಮಾಡಲಾಗುತ್ತದೆ, ಆದರೆ ಹೆಚ್ಚಾಗಿ ದಂತಕಥೆ, ಕಥೆ, ಚಿಹ್ನೆ, ನೀತಿಕಥೆ, ಪವಾಡ ಹಾಗೂ ದೃಷ್ಟಾಂತ ಇವುಗಳ ಮೂಲಕ ಜನಪ್ರಿಯ ಕಲ್ಪನೆ ಮತ್ತು ಭಾವನೆಗೆ ಏನನ್ನಾದರು ಕೊಂಡೊಯ್ಯುವಂಥ ರೂಪದಲ್ಲಿ ಮಾಡಲಾಗುತ್ತದೆ. ಮನೋ–ಆಧ್ಯಾತ್ಮಿಕ ಅನುಭವದ ಅಗಾಧವಾದ ಮತ್ತು ಸಂಕೀರ್ಣವಾದ ಶರೀರವು ತಂತ್ರಗಳಲ್ಲಿ ಮೈದಾಳಿದೆ, ದೃಷ್ಟಿಗೋಚರ ರೂಪಗಳಿಂದ ಬೆಂಬಲಿತವಾಗಿದೆ ಮತ್ತು ಯೋಗಾಭ್ಯಾಸದ ರೂಪಗಳಲ್ಲಿ ವಿಂಗಡಿಸಲಾಗಿದೆ. ಈ ಅಂಶವು ಪುರಾಣಗಳಲ್ಲಿಯೂ ಕಂಡುಬರುತ್ತದೆ – ಆದರೆ ಹೆಚ್ಚು ಬಿಡಿಬಿಡಿಯಾಗಿ ಮತ್ತು ಕಡಿಮೆ ಪ್ರಯಾಸಕರ ಅನುಕ್ರಮದಲ್ಲಿ ತೆಗೆದುಹಾಕಲಾಗಿದೆ. ಈ ವಿಧಾನವು ವೇದಗಳ ವಿಧಾನದ ಮತ್ತೊಂದು ರೂಪದಲ್ಲಿ ಮತ್ತು ಮನೋಧರ್ಮದ ಬದಲಾವಣೆಯೊಂದಿಗಿನ ಒಂದು ವಿಸ್ತರಣೆಯಾಗಿದೆ. ಪುರಾಣಗಳು ಭೌತಿಕ

ಚಿತ್ರಗಳ ಮತ್ತು ಆಚರಣೆಗಳ ಒಂದು ವ್ಯವಸ್ಥೆಯನ್ನು ಅದರ ಮಾನಸಿಕ ಪ್ರಾಧಾನ್ಯತೆಯೊಂದಿಗೆ ನಿರ್ಮಿಸುತ್ತವೆ. ಹೀಗಾಗಿ ಗಂಗಾ, ಯಮುನಾ, ಮತ್ತು ಸರಸ್ವತಿ ಎಂಬ ಮೂರು ನದಿಗಳ ಸಂಗಮದ ಪವಿತ್ರತೆಯು ಆಂತರಿಕ ಸಂಗಮದ ಪ್ರತಿರೂಪವಾಗಿದೆ ಮತ್ತು ಯೋಗದ ಮನೋ–ಭೌತಿಕ ಪ್ರಕ್ರಿಯೆಯಲ್ಲಿ ಒಂದು ಮಹತ್ವದ ಅನುಭವದೆಡೆಗೆ ಸಾಗಿಸುತ್ತದೆ ಮತ್ತು ಆರ್ಥಿಕತೆಯಲ್ಲಿ ಸಾಮಾನ್ಯವಾಗಿರುವಂತೆ ಈ ರೀತಿಯ ಸಂಕೇತತೆಯ ಇತರೇ ಪ್ರಾಧಾನ್ಯತೆಗಳನ್ನೂ ಸಹ ಇದು ಹೊಂದಿದೆ. ಪುರಾಣಗಳ ಅದ್ಭುತ ಭೌಗೋಳಿಕತೆ ಎಂದು ಕರೆಯಲ್ಪಡುವ, ನಾವು ಸ್ವತಃ ಪುರಾಣಗಳಲ್ಲಿ ಸ್ಪಷ್ಟವಾಗಿ ಹೇಳಿರುವಂತೆ ಇದೊಂದು ಶ್ರೀಮಂತ ಕಾವ್ಯಾತ್ಮಕ ಚಿತ್ರವಾಗಿದೆ, ಆಂತರಿಕ ಮಾನಸಿಕ ಬ್ರಹ್ಮಾಂಡದ ಸಾಂಕೇತಿಕ ಭೂಗೋಳವಾಗಿದೆ. ಭೌತಿಕ ಬ್ರಹ್ಮಾಂಡಕ್ಕೆ ಸೂಕ್ತವಾದ ಪರಿಭಾಷೆಯಲ್ಲಿ ವ್ಯಕ್ತಪಡಿಸಿದ ವಿಶ್ವಮೂಲವು ಕೆಲವೊಮ್ಮೆ ವೇದದಲ್ಲಿ ಇದ್ದಂತೆ ಆಧ್ಯಾತ್ಮಿಕ ಮತ್ತು ಮಾನಸಿಕ ಅರ್ಥವನ್ನು ಹಾಗೂ ಆಧಾರವನ್ನು ಹೊಂದಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 20/374**

## ಅಧಿಕಾರ ಭೇದ

ಭಾರತೀಯ ಮಾನಸಕ್ಕೆ ಎಲ್ಲ ಜೀವಿಗಳು ಆ ದೇವನ ಅಂಶವಾಗಿವೆ, ವಿಕಾಸಗೊಳ್ಳುತ್ತಿರುವ ಆತ್ಮಗಳಾಗಿವೆ, ಮತ್ತು ಮುಕ್ತಿಯ ಸಂಭಾವ್ಯತೆಯಲ್ಲಿ ಮತ್ತು ಚೇತನದಲ್ಲಿ ಬಿಡುಗಡೆಯು ನಿಶ್ಚಿತವಾಗಿದೆ. ಒಳ್ಳೆಯದು ಅವರಲ್ಲಿ ಬೆಳೆದಂತೆ, ಅಥವಾ ಅವರಲ್ಲಿಯ ದೇವಾಂಶವು, ಅತ್ಯುನ್ನತ ಸ್ಪರ್ಶವು ಮತ್ತು ಅವರ ಶ್ರೇಷ್ಠ ಆತ್ಮನ ಕರೆಯು ತನ್ನನ್ನು ತಾನು ಕಂಡುಕೊಳ್ಳುತ್ತದೆ ಮತ್ತು ಜಾಗೃತವಾಗುತ್ತದೆ, ಆ ಕರೆಯ ಮುಖಾಂತರ ಅನಂತಕ್ಕೆ, ಮಹಾಚೇತನಕ್ಕೆ ಆಕರ್ಷಣೆ ಎಂದು ಎಲ್ಲರೂ ಭಾವಿಸಬೇಕು. ಆದರೆ ವಾಸ್ತವದಲ್ಲಿ, ಮನುಷ್ಯ–ಮನುಷ್ಯರ ಮಧ್ಯೆ ಅನಂತ ಭಿನ್ನತೆಗಳಿವೆ; ಕೆಲವರು ಆಂತರಿಕವಾಗಿ ಹೆಚ್ಚು ವಿಕಸನಗೊಂಡಿದ್ದಾರೆ, ಉಳಿದವರು ಕಡಿಮೆ ಪ್ರೌಢಿಮೆ ಹೊಂದಿದ್ದಾರೆ, ಕೆಲವರು ದಿಟ್ಟ ಹೆಜ್ಜೆಗಳನ್ನು ತೆಗೆದುಕೊಳ್ಳಲು ಅಥವಾ ಕಠಿಣ ಪ್ರಯತ್ನಗಳನ್ನು ಮಾಡಲು ಅಶಕ್ತವಾದ ಶಿಶು (ಅಲ್ಪ ವಿಕಾಸವಾದ) ಆತ್ಮಗಳಾಗಿದ್ದಾರೆ. ಪ್ರತಿಯೊಬ್ಬರೂ ಅವರ ಸ್ವಭಾವದ ಮತ್ತು ಅವರ ಆತ್ಮದ ಸತ್ವಕ್ಕನುಗುಣವಾಗಿ ವ್ಯವಹರಿಸಬೇಕು. ಆದರೆ ಒಂದು ಸಾಮಾನ್ಯವಾದ ವ್ಯತ್ಯಾಸವನ್ನು ಮೂರು ಪ್ರಮುಖ ವಿಧಗಳ ನಡುವೆ ಮಾಡಬಹುದು – ಆಧ್ಯಾತ್ಮಿಕ

ಮೋಡಿಗೆ ಅಥವಾ ಧಾರ್ಮಿಕ ಪ್ರಭಾವಕ್ಕೆ ಅಥವಾ ಮಿಡಿತಕ್ಕೆ ಮಾರ್ಪಡುವ ಅವರ ಮುಕ್ತತೆಯಲ್ಲಿ. ಈ ವ್ಯತ್ಯಾಸವು ಬೆಳೆಯುತ್ತಿರುವ ಮಾನವ ಪ್ರಜ್ಞೆಯಲ್ಲಿ ಮೂರು ಹಂತಗಳ ಒಂದು ಮಜಲಿಗೆ ಸಮಾನವಾಗಿದೆ. ಅಶುದ್ಧ, ಕೆಟ್ಟದಾಗಿ ರೂಪಗೊಂಡ, ಇಲ್ಲಿಯವರೆಗೆ ಬಾಹ್ಯವಾಗಿರುವ, ಮತ್ತು ಇನ್ನೂ ಪ್ರಾಣಿಕ ಹಾಗೂ ದೈಹಿಕ ಮನಸ್ಥಿತಿವುಳ್ಳವರನ್ನು ತನ್ನ ಅಜ್ಞಾನಕ್ಕೆ ಸೂಕ್ತವಾದ ಸಾಧನಗಳಿಂದ ಮಾತ್ರ ಮುನ್ನೆಡಸಬಹುದು. ಇನ್ನೊರ್ವ ಹೆಚ್ಚು ಅಭಿವೃದ್ಧಿ ಹೊಂದಿದ ಮತ್ತು ಹೆಚ್ಚು ಬಲವಾದ ಹಾಗೂ ಆಳವಾದ ಮನೋ–ಆಧ್ಯಾತ್ಮಿಕ ಅನುಭವವನ್ನು ಹೊಂದಲು ಸಮರ್ಥನಾದವನು, ಹೆಚ್ಚು ಪ್ರಜ್ಞಾಪೂರ್ವಕ ಬುದ್ಧಿಮತ್ತೆಯ ಒಂದು ಬೃಹತ್ ಪ್ರಾಣಿಕ ಅಥವಾ ಕಲಾತ್ಮಕ ಸಾಧ್ಯತೆಯ ಪ್ರಕೃತಿಯ ಒಂದು ಬಲವಾದ ನೈತಿಕ ಶಕ್ತಿಯ ಉಡುಗೊರೆಯನ್ನು ಹೊಂದಿದವ, ಒಬ್ಬ ಪ್ರೌಢಿಮೆವುಳ್ಳ ಪುರುಷನನ್ನು ನೀಡುತ್ತಾನೆ. ಮೂರನೆಯವನು ಎಲ್ಲಕ್ಕಿಂತ ಹೆಚ್ಚು ಪಕ್ವವಾದ ಮತ್ತು ಅತಿ ಹೆಚ್ಚು ಅಭಿವೃದ್ಧಿ ಹೊಂದಿದ ಆಧ್ಯಾತ್ಮಿಕ ಉತ್ತುಂಗಕ್ಕೆ ಸಿದ್ಧನಾಗಿದ್ದಾನೆ, ಅತ್ಯುನ್ನತ ದೈವೀ ಸತ್ಯವನ್ನು ಸ್ವೀಕರಿಸಲು ಅಥವಾ ಅದರ ಕಡೆಗೆ ಏರಲು ಮತ್ತು ದೈವೀ ಶಿಖರಗಳನ್ನು ತುಳಿಯಲು ಯೋಗ್ಯನಾಗಿದ್ದಾನೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 20/220–21**

**ಸಂತರು ಮತ್ತು ಮಹಾಪುರುಷರು**

ಭಾರತದ ಬಳಿ ಅವಳ ಶ್ರೇಷ್ಠ ಸಂತರ, ಋಷಿಗಳ, ಚಿಂತಕರ, ಧಾರ್ಮಿಕ ಪ್ರವರ್ತಕರ, ಕವಿಗಳ, ನಿರ್ಮಾತೃಗಳ, ವಿಜ್ಞಾನಿಗಳ, ಪಂಡಿತರ, ವಿಶಾರದದ ದೀರ್ಘವಾದ ಪಟ್ಟಿ ಮಾತ್ರವಲ್ಲದೆ; ಅವಳ ಹತ್ತಿರ ಅವಳ ಶ್ರೇಷ್ಠ ಅರಸರು, ಆಡಳಿತಗಾರರು, ಸೈನಿಕರು, ವಿಜಯಿಗಳು, ನಾಯಕರು, ಗಟ್ಟಿಯಾದ ಕ್ರಿಯಾಶೀಲ ಇರಾದೆವುಳ್ಳವರು, ಯೋಜಿಸುವ ಮತ್ತು ಅದನ್ನು ನಿಜವಾಗಿಸುವ ಶಕ್ತಿಯನ್ನು ಹೊಂದಿದವರೂ ಸಹ ಇದ್ದಾರೆ. ಅವಳು ಹೋರಾಡಿದ್ದಾಳೆ ಮತ್ತು ಆಳ್ವಿಕೆ ಮಾಡಿದ್ದಾಳೆ, ವ್ಯಾಪಾರ ಮಾಡಿದ್ದಾಳೆ, ವಸಾಹತು ಸ್ಥಾಪಿಸಿದ್ದಾಳೆ ಮತ್ತು ಅವಳ ಸಂಸ್ಕೃತಿಯನ್ನು ಪ್ರಸಾರ ಮಾಡಿದ್ದಾಳೆ, ರಾಜ್ಯಾಡಳಿತವನ್ನು ಕಟ್ಟಿದ್ದಾಳೆ ಮತ್ತು ಸಮುದಾಯಗಳನ್ನು ಹಾಗೂ ಸಮಾಜಗಳನ್ನು ಸಂಘಟಿಸಿದ್ದಾಳೆ, ಶ್ರೇಷ್ಠ ಜನರ ಬಾಹ್ಯ ಚಟುಚಟಿಕೆಯನ್ನು ಮಾಡುವಂಥ ಎಲ್ಲವನ್ನೂ ಮಾಡಿದ್ದಾಳೆ. ಒಂದು ರಾಷ್ಟ್ರವು ತನ್ನ ಮನೋಧರ್ಮಕ್ಕೆ ಮತ್ತು ಅದರ ಪ್ರಮುಖವಾದ ಕಲ್ಪನೆಯ

ಅಭಿವ್ಯಕ್ತಿಗೆ ಹೆಚ್ಚು ಸರಿಹೊಂದುವಂಥ ಕ್ರಮದ ದಿಶೆಯಲ್ಲಿ ತನ್ನ ಗಮನಾರ್ಹವಾದ ವಿಧಗಳನ್ನು ಹೊರಗೆಡುವಲು ಒಲವು ತೋರುತ್ತದೆ ಮತ್ತು ಅದರ ಶ್ರೇಷ್ಠ ಸಂತರು ಮತ್ತು ಧಾರ್ಮಿಕ ಪುರುಷರು ಭಾರತದಲ್ಲಿ ಮುಂಚೂಣಿಯಲ್ಲಿ ಇರುತ್ತಾರೆ ಮತ್ತು ಗಮನಾರ್ಹವಾದ ಹಾಗೂ ಶ್ರೇಷ್ಠತೆಯ ನಿರಂತರ ಹಾಜರಾತಿಯನ್ನು ಪರಿಚಯ ಮಾಡಿಕೊಡುತ್ತದೆ (ರೋಮ್ ನಗರವು ತನ್ನ ಯೋಧರಲ್ಲಿ, ರಾಜ್ಯ ತಂತ್ರಜ್ಞರಲ್ಲಿ, ಆಡಳಿತಗಾರರಲ್ಲಿ ಹೆಚ್ಚು ಅಸ್ತಿತ್ವದಲ್ಲಿದ್ದಂತೆ). ಪ್ರಾಚೀನ ಭಾರತದಲ್ಲಿ ಋಷಿಗಳು ಮಹೋನ್ನತ ಪುರುಷರಾಗಿದ್ದರು ಮತ್ತು ನಾಯಕರು ಅವರ ಹಿಂದಿನ ಸಾಲಿನಲ್ಲಿ ಇರುವವರಾಗಿದ್ದರು. ನಂತರದ ದಿನಗಳಲ್ಲಿ ಬುದ್ಧ ಮತ್ತು ಮಹಾವೀರರಿಂದ ರಾಮಾನುಜ, ಚೈತನ್ಯ, ನಾನಕ, ರಾಮದಾಸ, ತುಕಾರಾಮರವರೆಗೆ ಮತ್ತು ಅವರಾಚೆ ಶ್ರೀ ರಾಮಕೃಷ್ಣ, ವಿವೇಕಾನಂದ ಮತ್ತು ದಯಾನಂದರವರೆಗಿನ ನಿರಂತರವಾದ ಸರಣಿಯು ಅತ್ಯಂತ ಗಮನಾರ್ಹವಾದ ಅಂಶವಾಗಿತ್ತು. ಆದರೆ, ಖಚಿತವಾದ ಇತಿಹಾಸದ ಮೊದಲ ಉದಯಕಾಲದಿಂದ ಬರುವಂಥ ಗಮನ ಸೆಳೆಯುವ ವ್ಯಕ್ತಿಗಳಾದ ಚಂದ್ರಗುಪ್ತ, ಚಾಣಕ್ಯ, ಅಶೋಕ, ಗುಪ್ತ ಸಾಮ್ರಾಟರ ಮತ್ತು ಮಧ್ಯ ಯುಗದಿಂದ ಆಧುನಿಕ ಯುಗದವರೆಗಿನ ಅನೇಕ ಪ್ರಸಿದ್ಧ ಹಿಂದೂ ಮತ್ತು ಇಸ್ಲಾಮಿನ ರಾಜ್ಯತಂತ್ರಜ್ಞರ ಹಾಗೂ ಪ್ರಭುಗಳ ಗಮನಾರ್ಹವಾದ ಸಾಧನೆಗಳೂ ಇವೆ. ಪ್ರಾಚೀನ ಭಾರತದಲ್ಲಿ ಗಣರಾಜ್ಯಗಳ, ಸರ್ವಾಧಿಕಾರಿಗಳ, ಪ್ರಜಾಪ್ರಭುತ್ವಗಳ, ಸಣ್ಣ ಸಾಮ್ರಾಜ್ಯಗಳ ಅಸ್ತಿತ್ವವಿತ್ತು, ಆದರೆ ಈಗ ಅವುಗಳ ಇತಿಹಾಸದ ಯಾವುದೇ ವಿವರಗಳು ಉಳಿದುಕೊಂಡಿಲ್ಲ. ನಂತರದಲ್ಲಿ, ಸಾಮ್ರಾಜ್ಯ ಕಟ್ಟುವಲ್ಲಿ, ಸಿಲೋನಿನ ವಸಾಹತು ಶಾಹಿಯಲ್ಲಿನ ಮತ್ತು ದ್ವೀಪ ಸಮೂಹಗಳಲ್ಲಿನ ಸುದೀರ್ಘ ಪ್ರಯತ್ನ, ಪಠಾಣ ಮತ್ತು ಮೊಗಲ್ ರಾಜವಂಶಗಳ ಉದಯಕ್ಕೆ ಹಾಗೂ ಅವನತಿಗೆ ಕಾರಣವಾದ ಸ್ಪಷ್ಟ ಹೋರಾಟಗಳು, ದಕ್ಷಿಣದಲ್ಲಿ ಉಳಿವಿಗಾಗಿ ಹಿಂದೂ ಹೋರಾಟ, ರಜಪೂತ ನಾಯಕತ್ವದ ಅದ್ಭುತ ದಾಖಲೆ ಮತ್ತು ಮಹಾರಾಷ್ಟ್ರದಲ್ಲಿ ಸಮಾಜದ ಅತ್ಯಂತ ಕೆಳಸ್ತರಕ್ಕೆ ಪ್ರವೇಶಿಸಿದ ರಾಷ್ಟ್ರೀಯ ಜೀವನದ ಮಹಾನ್ ಕ್ರಾಂತಿ, ಸಿಖ್‌ಖಾಲ್ಸಾದ ಗಮನಾರ್ಹವಾದ ಪ್ರಸಂಗ, ಇವೆಲ್ಲವೂಗಳಲ್ಲಿ ಸುದೀರ್ಘ ಪ್ರಯತ್ನವನ್ನು ಕಾಣಬಹುದು. ಆ ಬಾಹ್ಯ ಜೀವನದ ಸಮರ್ಪಕ ಚಿತ್ರಣವನ್ನು ಇನ್ನೂ ನೀಡಬೇಕಾಗಿದೆ; ಒಂದೊಮ್ಮೆ ಅದನ್ನು ಒದಗಿಸಿದರೆ, ಅದು ಅನೇಕ ಕಾಲ್ಪನಿಕ ಕಥೆಗಳ ಅಂತ್ಯವಾಗುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 20/246 – ಶ್ರೀ ಅರವಿಂದರು**

# ಮಾತೃಭೂಮಿಯ ಸ್ವರೂಪ

– ಅನುವಾದ: ನಾಗಜ್ಯೋತಿ ಮಾನವಿ

## ಭಾರತದ ದೇಹ

ಆನರ ತತ್ವಜ್ಞಾನ ಮತ್ತು ಉನ್ನತ ವಿಚಾರಗಳು ನಮಗೆ ಭಾರತದ ಮನದ ಅತಿ ಪರಿಶುದ್ಧವಾದ, ವಿಶಾಲವಾದ ಮತ್ತು ಇದರ ಜೀವನದ ಪ್ರಜ್ಞೆಯ ಅತ್ಯಂತ ಸಾಮಾನ್ಯ ವ್ಯವಸ್ಥಿತವಾದ ನಿರೂಪಣೆ ಮತ್ತು ಇದರ ಅಸ್ತಿತ್ವದ ಕ್ರಿಯಾತ್ಮಕ ನೋಟವನ್ನು ಕೊಡುತ್ತದೆ. ಅದರ ಧರ್ಮವು ಅತ್ಯಂತ ತೀವ್ರತರ ರೂಪದ ಮೇಲ್ಮಟ್ಟದ ಸಂಕಲ್ಪ ಮತ್ತು ಅದರ ಅತ್ಯುನ್ನತ ಆದರ್ಶ ಮತ್ತು ಪ್ರೇರಣೆಯನ್ನು ಈಡೇರಿಸಿಕೊಳ್ಳಬೇಕೆಂಬುದರ ಕಡೆಗಿನ ಆತ್ಮದ ಅಭೀಪ್ಸೆಯನ್ನು ನಿರೂಪಿಸುತ್ತದೆ. ಇದರ ಕಲೆ, ಕಾವ್ಯ, ಸಾಹಿತ್ಯವು ನಮಗೆ ಸೃಜನಾತ್ಮಕ ವ್ಯಕ್ತಪಡಿಸುವಿಕೆ ಮತ್ತು ಅಂತರ್ಬೋಧೆಯ(INTUTION) ಗುರುತು, ಕಲ್ಪನೆ, ಪ್ರಾಣದ ಅವಕಾಶ ಮತ್ತು ಸೃಜನಾತ್ಮಕ ಬುದ್ಧಿಶಕ್ತಿಯನ್ನು ಒದಗಿಸುತ್ತದೆ. ಇದರ ಸಮಾಜ ಮತ್ತು ರಾಜಕೀಯವು ಬಹಿರಂಗದ ಚೌಕಟ್ಟನ್ನು ಒದಗಿಸುತ್ತವೆ. ಅದರ ಮೂಲಕ ಅತಿ ಬಾಹ್ಯ ಜೀವನವು ತನ್ನ ಸ್ಫೂರ್ತಿದಾಯಕ ಆದರ್ಶನ್ನು ತನಗೆ ಎಷ್ಟು ಸಾಧ್ಯವೋ ಅಷ್ಟು ವ್ಯಕ್ತಪಡಿಸಲು ಪ್ರಯತ್ನಿಸುತ್ತದೆ. ಹಾಗೂ ತನ್ನ ಸುತ್ತಮುತ್ತಲಿನ ಕಷ್ಟಕರ ವಾತಾವರಣದ ಮೂಲಕ ತನ್ನ ವಿಶೇಷ ಚಾರಿತ್ಯ ಮತ್ತು ಪ್ರಕೃತಿಯನ್ನು ವ್ಯಕ್ತಪಡಿಸುತ್ತದೆ. ಎಷ್ಟೊಂದು ಜೀವಂತ ಕಚ್ಚಾ ವಸ್ತುವನ್ನು ತೆಗೆದುಕೊಂಡಿದೆ ಎಂಬುದನ್ನು ನಾವು ನೋಡಬಹುದು. ಅದನ್ನು ಏನು ಮಾಡಿದೆ ಅದರ ಮಾರ್ಗದರ್ಶಕ ಪ್ರಜ್ಞೆ, ಮತ್ತು ಆಳವಾದ ಚೈತನ್ಯದ ಪ್ರತಿಫಲನವನ್ನು ಅದು ಹೇಗೆ ರೂಪಿಸಿದೆ, ಇವು ಯಾವೂವೂ ಕೂಡ ಅವುಗಳ ಹಿಂದಿರುವ ರಹಸ್ಯಮಯ ಚೈತನ್ಯವನ್ನು ವ್ಯಕ್ತಪಡಿಸಲು ಸಾಧ್ಯವಾಗಿಲ್ಲ. ಆದರೆ ಅವುಗಳ ಮೂಲ ವಿಚಾರಗಳು ಮತ್ತು ಸಾಂಸ್ಕೃತಿಕ ಚಾರಿತ್ರ್ಯವು ಅದರಿಂದಲೇ ಬಂದಿದೆ. ಎಲ್ಲವೂ ಜೊತೆಗೆ ಸೇರಿ ಅದರ ಆತ್ಮ ಮನ ಮತ್ತು ದೇಹಗಳಾಗಿವೆ. ಭಾರತೀಯ ನಾಗರಿಕತೆಯಲ್ಲಿ ತತ್ವ ಜ್ಞಾನ ಮತ್ತು ಧರ್ಮ, ಧರ್ಮದಿಂದ ತತ್ವ ಜ್ಞಾನವನ್ನು ಕ್ರಿಯಾಶೀಲಗೊಳಿಸಿ, ತತ್ವ ಜ್ಞಾನದಿಂದ ಧರ್ಮವು ಬೆಳಕನ್ನು ಕಂಡಿದೆ; ಉಳಿದೆಲ್ಲವೂ ಇವುಗಳನ್ನು ಎಷ್ಟು ಸಾಧ್ಯವೋ ಅಷ್ಟು ಪಾಲಿಸಲು ಪ್ರಯತ್ನಿಸುತ್ತವೆ. ಇದು ಭಾರತೀಯ ನಾಗರಿಕತೆಯ ವಿಭಿನ್ನ ಗುಣಲಕ್ಷಣವಾಗಿದೆ. ಇದನ್ನು ಏಷ್ಯಾ ಖಂಡದ ಹೆಚ್ಚು ಬೆಳವಣಿಗೆಯಾದ ಜನರೊಡನೆ ಹಂಚಿಕೊಳ್ಳುತ್ತದೆ; ಆದರೆ ಇದು ತನ್ನೊಳಗೆ ಅತಿ ಶ್ರೇಷ್ಠ ರೀತಿಯಲ್ಲಿ ಅಳವಡಿಸಿಕೊಂಡಿದೆ. ಯಾವಾಗ ಇದನ್ನು ಬ್ರಾಹ್ಮಣರ ನಾಗರಿಕತೆಯೆಂದು

ಕರೆಯುತ್ತಾರೋ ಅದರ ಮಹತ್ವವೇ ಇದಾಗಿದೆ. ಇದರ ಅರ್ಥ ಪುರೋಹಿತ ಶಾಹಿಗಳ ಪ್ರಭುತ್ವವಿತ್ತೆಂಬ ಅರ್ಥವಲ್ಲ, ಆದಾಗ್ಯೂ ಕೆಲ ಸಂಸ್ಕೃತಿಯ ಉನ್ನತ ಬದಲಾವಣೆಯ ಕ್ಷೇತ್ರದಲ್ಲಿ ಪುರೋಹಿತನ ಪಾತ್ರವೇನೂ ಇರಲಿಲ್ಲ. ಆದರೆ ಭಾರತೀಯ ಸಂಸ್ಕೃತಿಯ ಮೂಲ ಉದ್ದೇಶಗಳು ಧಾರ್ಮಿಕ ಮತ್ತು ತಾತ್ವಿಕ ಚಿಂತಕರಿಂದಲೇ ರೂಪುಗೊಂಡಿವೆ. ಆದರೆ ಅವರೆಲ್ಲರೂ ಹುಟ್ಟಿನಿಂದ ಬ್ರಾಹ್ಮಣರೇನಲ್ಲ. ಭಾರತದಲ್ಲಿ ಕೇವಲ ಆಧ್ಯಾತ್ಮಿಕ ಪರಂಪರೆಯನ್ನು, ಜ್ಞಾನವನ್ನು ಮತ್ತು ಜನಾಂಗದ ಪವಿತ್ರ ನಿಯಮಗಳನ್ನು ಕಾಪಾಡಲು ಒಂದು ವರ್ಗವನ್ನು ಬೆಳಸಲಾಗಿತ್ತು; ಇದು ಬ್ರಾಹ್ಮಣರ ಮೂಲ ಕಾರ್ಯವಾಗಿತ್ತೇ ಹೊರತು ಕೇವಲ ಅರ್ಚಕನಾಗುವುದಲ್ಲ. ಈ ವರ್ಗವು ಸಾವಿರಾರು ವರ್ಷಗಳಿಂದ ಈ ಶ್ರೇಷ್ಠ ಕಾರ್ಯವನ್ನು ಮಾಡುತ್ತಲೇ ಬಂದಿತ್ತು. ಇದರಲ್ಲಿ ಏಕಸಾಮ್ಯವನ್ನು ಸಾಧಿಸದೇ ದೇಶದ ಪ್ರಜ್ಞೆಯನ್ನು ಸಾಮಾಜಿಕ ತತ್ವಗಳ ನಿರ್ದೇಶನ, ಅದರ ರೂಪಗಳನ್ನು ಕಾಪಾಡುವುದೇ ಅದರ ಗುಣಲಕ್ಷಣವಾಗಿತ್ತು. ಇದರ ಹಿಂದಿನ ವಾಸ್ತವವೇನೆಂದರೆ, ಭಾರತೀಯ ಸಂಸ್ಕೃತಿಯ ಪ್ರಾರಂಭದಿಂದ ಹಿಡಿದು ಇಂದಿನವರೆಗೂ ಸಹ ಒಂದು ಆಧ್ಯಾತ್ಮಿಕ, ಅಂತರ್ಮುಖಿಯಾಗಿ ನೋಡುವ ಧಾರ್ಮಿಕ–ತಾತ್ವಿಕ ಸಂಸ್ಕೃತಿಯಾಗಿದೆ. ಭಾರತದಲ್ಲಿ ಎಲ್ಲವೂ ಈ ಆಧ್ಯಾತ್ಮಿಕ ತತ್ವದ ಮೇಲೆಯೇ ಬೆಳವಣಿಗೆಯಾಗಿದೆ ಅಥವಾ ಅದರ ಮೇಲೆ ಅವಲಂಬಿತವಾಗಿದೆ ಅಥವಾ ಅದರ ಅಧೀನದಲ್ಲಿದೆ; ಬಾಹ್ಯ ಜೀವನವೂ ಸಹ ಈ ಆತ್ಮಿಕ ಅಂತರಂಗದ ದೃಷ್ಠಕೋನದ ಮೇಲೆಯೇ ಪ್ರಭಾವಿತವಾಗಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 20/106–08**

**ಭಾರತದ ಏಕತೆ**

ಆದರೆ ಆಧ್ಯಾತ್ಮಿಕ ಐಕ್ಯತೆಯು ಉನ್ನತ ಮತ್ತು ಹೊಂದಿಕೊಳ್ಳುವ ಅಂಶಗಳಿಂದ ಕೂಡಿಕೊಂಡಿದೆ; ಇದು ರಾಜಕೀಯ ಮತ್ತು ಬಹಿರಂಗದ ಕೇಂದ್ರೀಕರಣ ಮತ್ತು ಏಕರೂಪತೆಯ ಮೇಲೆ ಒತ್ತಾಯ ಹೇರುವುದಿಲ್ಲ, ಆಧ್ಯಾತ್ಮಿಕ ಐಕ್ಯತೆಯು ವ್ಯವಸ್ಥೆಯ ಒಳಗೆ ಪಸರಿಸಿಕೊಂಡು ಶ್ರೇಷ್ಠವಾದ ವೈವಿಧ್ಯತೆ ಜೀವನದಲ್ಲಿ ಸ್ವತಂತ್ರ್ಯಕ್ಕೆ ಅನುಕೂಲಮಾಡಿಕೊಡುತ್ತದೆ. ಇಲ್ಲಿ ನಾವು ಭಾರತದಲ್ಲಿ ತರಬೇತಾದ ಐಕ್ಯತೆಯ ಸಮಸ್ಯೆಯ ರಹಸ್ಯವನ್ನು ಕಾಣಲು ಸಾಧ್ಯವಾಗುವುದು. ಈ ಐಕ್ಯತೆಯನ್ನು ನಾವು ಸಾಮೂಹ್ಯ ಶಾಹಿರಾಜ್ಯದ ಕೇಂದ್ರೀಕರಣ ಮತ್ತು ಏಕರೂಪತೆಯಿಂದ ತರಲು ಸಾಧ್ಯವಿಲ್ಲ; ಅದು ಸ್ವತಂತ್ರ್ಯ ವೈವಿಧ್ಯತೆಗಳನ್ನು, ಸ್ಥಳೀಯ ಸ್ವಾಯತ್ತತೆಯನ್ನು ಹಾಗೂ ಸ್ಥಾಪಿತಗೊಂಡ ಸಾಮುದಾಯಕ ಸ್ವತಂತ್ರವನ್ನು ನಾಶಪಡಿಸಲು ಪ್ರಯತ್ನಿಸುತ್ತದೆ.

ಪ್ರತೀಬಾರಿಯೂ ಈ ರೀತಿಯಲ್ಲಿ ಐಕ್ಯತೆಯನ್ನು ಸ್ಥಾಪಿಸಲು ಪ್ರಯತ್ನಿಸಿದಾಗ, ಅದು ಹಲವು ಕಾಲ ಯಶಸ್ವಿಯಾಗಿ ಕಂಡರೂ, ಅದು ಬಹುಕಾಲ ಬಾಳಲು ಸಾಧ್ಯವಾಗುವುದಿಲ್ಲ. ಭಾರತದ ಭವಿಷ್ಯವನ್ನು ಕಾಯುವ ರಕ್ಷಕನು ಇದನ್ನು ಸೋಲಿಸದೇ ಬಿಡುವುದಿಲ್ಲ; ಹಾಗೂ ಭಾರತದ ಅಂತರಂಗದ ಚೈತನ್ಯವನ್ನು ಅಳಿಸಲು ಮತ್ತು ಅದರ ಆತ್ಮವನ್ನು ಒಂದು ತಾತ್ಕಾಲಿಕ ಯಶಸ್ವಿಯಾಗಿ ಮಾರಾಟ ಮಾಡಲು ಬಿಡುವುದಿಲ್ಲ. ಭಾರತದ ಪುರಾತನವಾದ ಮನಸ್ಸಿಗೆ ಇದರ ಅವಶ್ಯಕತೆಯ ಬಗ್ಗೆ ಅಂತಃಪ್ರಜ್ಞೆಯ ಅರಿವು ಇತ್ತು. ಅದರ ಸಾಮ್ರಾಜ್ಯದ ನಿರ್ಧಾರವೇನೆಂದರೆ, ಐಕ್ಯತೆಯ ನಿಯಮ ಯಾವ ರೀತಿ ಇರಬೇಕೆಂದರೆ, ಅದು ಪ್ರಾದೇಶಿಕ ಮತ್ತು ಸಮುದಾಯಗಳ ಸ್ವತಂತ್ರ್ಯಕ್ಕೆ ಗೌರವನ್ನು ಕೊಡಬೇಕು, ಸ್ಥಳಿಯ ಜೀವಂತ ಸ್ವಾಯತ್ತತೆಗಳನ್ನು ಅನವಶ್ಯಕವಾಗಿ ಹಾಳುಮಾಡಬಾರದು, ಮತ್ತು ಜೀವನದಲ್ಲಿ ಸಮನ್ವಯತೆಯನ್ನು ಸ್ಥಾಪಿಸಬೇಕೇ ಹೊರತು ಯಾಂತ್ರಿಕ ಏಕತೆಯನ್ನಲ್ಲ, ಯಾವ ವಾತಾವರಣದಲ್ಲಿ ಈ ತರಹದ ಆಧ್ಯಾತ್ಮಿಕ ಐಕ್ಯತೆಯನ್ನು ಸ್ಥಾಪಿಸಲು ಸಾಧ್ಯವಿತ್ತೋ, ಅಂತಹ ವಾತಾವರಣವು ನಾಶವಾದಾಗ ಭಾರತವು ಅನಿವಾರ್ಯವಾಗಿ ಒಂದೇ ಆಡಳಿತತ್ಮಾಕ ಸಾಮ್ರಾಜ್ಯವನ್ನು ಸ್ಥಾಪಿಸಲು ಪ್ರಯತ್ನಿಸಿತು. ಈ ಪ್ರಯತ್ನವು ಆಂತರಿಕ ಮತ್ತು ಬಾಹ್ಯ ಒತ್ತಡಗಳ ಪರಿಣಾಮದಿಂದ ಮಾಡಬೇಕಾಯಿತು. ಹಾಗೂ ಇದರ ಪರಿಣಾಮ ಎಷ್ಟೇ ಶ್ರೇಷ್ಠ ಮತ್ತು ವೈಭವದಿಂದ ಕೂಡಿದ್ದರೂ ಇದು ಸಂಪೂರ್ಣ ಯಶಸ್ಸನ್ನು ತರಲು ಸಾಧ್ಯವಾಗಲಿಲ್ಲ. ಈ ಅಪಯಶಸ್ಸಿಗೆ ಕಾರಣವೇನೆಂದರೆ, ಇದು ಭಾರತದ ಆತ್ಮದ ಜೊತೆ ಹೊಂದಾಣಿಕೆಯನ್ನು ಮಾಡಲಾಗಲಿಲ್ಲ. ಭಾರತೀಯ ರಾಜಕೀಯ, ಸಾಮಾಜಿಕ ವ್ಯವಸ್ಥೆಯ ಹಿಂದಿರುವ ತತ್ವವೇನೆಂದರೆ, ಸ್ವಾಯತ್ತತೆಗಳಿಂದ ಕೂಡಿದ ಸಮುದಾಯಗಳ ಸಮನ್ವಯ, ಹಳ್ಳಿಗಳ ಸ್ವಾಯತ್ತತೆ, ಪ್ರಾಂತ್ಯಗಳ ಮತ್ತು ನಗರಗಳ, ಜಾತಿಗಳ, ಪಂಗಡಗಳ, ಕುಲ, ಧಾರ್ಮಿಕ ಸಮುದಾಯಗಳ, ಪ್ರಾಂತೀಯ ಘಟಕಗಳ ನಡುವಿನ ಸಮನ್ವಯತೆ. ಇಂತಹ ಸ್ವತಂತ್ರ್ಯ ಮತ್ತು ಜೀವಂತ ವ್ಯವಸ್ಥೆಯ ಸ್ವಾಯತ್ತತೆಯನ್ನು ಕಾಪಾಡಿಕೊಂಡು ಹೋಗುವ ಹಾಗೂ ಅವುಗಳ ನಡುವೆ ಸಮನ್ವಯನ್ನು ಸೃಷ್ಟಿಸುವ ಕೆಲಸವು ರಾಜ್ಯಗಳ, ಸಾಮ್ರಾಜ್ಯಗಳ ಮತ್ತು ಒಕ್ಕೂಟದ ಗಣರಾಜ್ಯಗಳ ಕರ್ತವ್ಯವಾಗಿದೆ. ಸಾಮ್ರಾಜ್ಯಗಳ ಸಮಸ್ಯೆ ಇದೇ ಆಗಿದೆ; ರಾಜ್ಯಗಳ ಜನರ, ದೇಶಗಳ ನಡುವೆ ಸಮನ್ವಯವನ್ನು ಸೃಷ್ಟಿಮಾಡಬೇಕಾಗಿದೆ; ಪ್ರತಿಯೊಂದರ ಸ್ವಾಯತ್ತತೆಗೆ ಗೌರವನ್ನು ಕೊಟ್ಟು ಐಕ್ಯತೆಯನ್ನು ತರಬೇಕಾಗಿದೆ; ಸಾಮಾಜ್ಯವು ವಿಶಾಲ, ಸ್ವತಂತ್ರ್ಯದಿಂದ ಕೂಡಿದ ಜೀವಂತ ಜೀವಿಯಾಗಬೇಕಾಗಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 20/431–32**

**ಒಕ್ಕೂಟದ ಐಕ್ಯತೆ**

ಮಹಾಭಾರತವು ಅಂತಹ ಐಕ್ಯತೆಯ ಪೌರಾಣಿಕ ದಾಖಲೆ, ಅಥವಾ, ಬಹುಶಃ ಅಂತಹ ಧರ್ಮರಾಜ್ಯವನ್ನು ಸ್ಥಾಪಿಸುವ ಐತಿಹಾಸಿಕ ಪ್ರಯತ್ನವಾಗಿದೆ. ಅಲ್ಲಿ ಈ ಆದರ್ಶವನ್ನು ಕಡ್ಡಾಯವಾಗಿ ಹಾಗೂ ವಿಶಾಲವಾಗಿ ಎಲ್ಲರೂ ಒಪ್ಪಿಕೊಂಡಂತೆ ತೋರುತ್ತದೆ, ಯಾಕೆಂದರೆ ಧರ್ಮದ ಪ್ರಕಾರ ರಾಜಸೂಯ ಯಾಗವನ್ನು ಮಾಡುವ ಧರ್ಮರಾಯನ ಕಾರ್ಯವನ್ನು, ಶಿಶುಪಾಲನಂಥಹ ಪ್ರಕ್ಷುಬ ವ್ಯಕ್ತಿವೂ ಸಹ ತನ್ನ ಒಪ್ಪಿಗೆಯನ್ನು ಸೂಚಿಸುತ್ತಾನೆ. ರಾಮಾಯಣದಲ್ಲಿಯೂ ಸಹ ಇಂತಹ ಆದರ್ಶಮಯ ಧರ್ಮರಾಜ್ಯದ ಚಿತ್ರಣವಿದೆ; ಸಾರ್ವತ್ರಿಕ ಸಾಮ್ರಾಜ್ಯದ ನೆಲೆಸಿತ್ತು. ಇಲ್ಲಿ ನಿರಂಕುಶಾಧೀಕಾರಿಯ ಸಾಮ್ರಾಜ್ಯವಲ್ಲದೆ ಸಾರ್ವತ್ರಿಕ ರಾಜಪ್ರಭುತ್ವವಿದ್ದು ಅದಕ್ಕೆ ನಗರ ಹಾಗೂ ಪ್ರಾಂತಗಳ ಸ್ವತಂತ್ರ್ಯ ಸಭೆಯ ಬೆಂಬಲವಿರುತ್ತದೆ. ಇದು ಎಲ್ಲಾ ಜನಾಂಗಗಳ ಆದರ್ಶವಾಗಿಟ್ಟುಕೊಂಡು, ರಾಜಪ್ರಭುತ್ವವನ್ನು ವಿಸ್ತರಿಸಿ ಅದರಲ್ಲಿ ಭಾರತೀಯ ಪದ್ಧತಿಯ ಸಮುದಾಯಿಕ ಸ್ವಾಯತ್ತೆಗಳನ್ನು ಸಮನ್ವಯಗೊಳಿಸಿ, 'ಧಾರ್ಮದ' ಸಂವಿಧಾನ ಹಾಗೂ ಕಾನೂನುನ್ನು ಕಾಪಾಡಿಕೊಂಡು ಹೋಗಲಾಗುತ್ತದೆ. ಇನ್ನೊಂದು ರಾಜ್ಯವನ್ನು ಆಕ್ರಮಣ ಮಾಡಿ ಕೊಳ್ಳೆ ಹೊಡೆದು, ಅಲ್ಲಿಯ ರಾಜಕೀಯ, ಸಾಮಾಜಿಕ ಸಂಘ ಸಂಸ್ಥೆಗಳನ್ನು ಮತ್ತು ಜನರ ಸಹಜ ಸ್ವಾತಂತ್ರ್ಯವನ್ನು ನಾಶಪಡಿಸುವುದು, ಜನರ ವಾಣಿಜ್ಯ ಸಂಪತ್ತನ್ನು ಶೋಷಣೆ ಮಾಡುವುದು 'ವಿಜಯದ' ಆದರ್ಶವಾಗಿರಲಿಲ್ಲ. ಇನ್ನೊಬ್ಬರ ಶಕ್ತಿಶಾಲಿ ಸೈನ್ಯದ ಮುಂದೆ ಸೋತಾಗ ಅದನ್ನು ಅವಮಾನವಾಗಿ ಅಥವಾ ದಾಸ್ಯನಾಗುವ ಅಥವಾ ದುಃಖಕ್ಕೆ ಈಡಾಗುವ ಘಟನೆಯೆಂದು ಪರಿಗಣಿಸಲಾಗುವುದಿಲ್ಲ; ಒಂದು ಪ್ರಗತಿಪರ ತ್ಯಾಗವಾಗಿ, ಸೋಲನ್ನು ಸುಲಭವಾಗಿ ಧರ್ಮದ ಹಾಗೂ ರಾಜ್ಯದ ಐಕ್ಯತೆಯನ್ನು ಕಾಪಾಡುವ ಪ್ರಭುತ್ವ ಬೆಂಬಲವೀಯುತ್ತೇವೆ ಎಂಬ ವಿಜಯದ ಆದರ್ಶವನ್ನು ಪಾಲಿಸಲಾಗುತ್ತದೆ. ನಮ್ಮ ಪುರಾತನ ಋಷಿಗಳ ಆದರ್ಶವು ಸ್ಪಷ್ಟವಾಗಿದೆ ಹಾಗೂ ಅದರ ಉದ್ದೇಶವೇನೆಂದರೆ; ವಿಭಜನೆಯಿಂದ ಹಾಗೂ ಹೋರಾಡುತ್ತಿರುವ ಬಣಗಳ ಮಧ್ಯ ಐಕ್ಯತೆಯನ್ನು ತರಲು ಸೈನ್ಯದ ಹಾಗೂ ರಾಜಕೀಯದ ಅವಶ್ಯಕತೆಯನ್ನು ಅವರು ಅರಿತಿದ್ದರು, ಆದರೆ ಆ ಐಕ್ಯತೆಯನ್ನು ತರಲು ಜನರ ಸ್ವತಂತ್ರ್ಯ ಜೀವನವನ್ನು, ಸಮುದಾಯಗಳ ಸ್ವತಂತ್ರ್ಯವನ್ನು ನಾಶಪಡಿಸುವುದು ಅವಶ್ಯವಿಲ್ಲ ಎಂದು ಅರಿತಿದ್ದರು. ಹಾಗಾಗಿ ಕೇಂದ್ರೀಕೃತ ರಾಜ್ಯಪ್ರಭುತ್ವವಾಗಲಿ ಅಥವಾ ಏಕರೂಪದ ಸಾಮ್ರಾಜ್ಯಶಾಹಿ ರಾಜ್ಯದ ಕಲ್ಪನೆಯ ನಮ್ಮ ಋಷಿಗಳ ಆದರ್ಶವಾಗಿರಲಿಲ್ಲ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 20/435–36 – ಶ್ರೀ ಅರವಿಂದರು**

# ಶ್ರೀ ಅರವಿಂದರ
# 'ಗೀತಾ ಪ್ರಬಂಧಗಳು'

**– ಅನುವಾದ: ಜಾನ್ವಿ**

**10**

## ಅಧ್ಯಾಯ – 10
## ಬುದ್ಧಿ ಯೋಗ

ಕಳೆದೆರಡು ಅಧ್ಯಾಯಗಳಲ್ಲಿ ನಾನು (ಶ್ರೀ ಅರವಿಂದರು) ನನ್ನ ಜೊತೆ ಓದುಗರನ್ನೂ ಸಹ ದಾರ್ಶನಿಕ ಮತ ಮತಾಂತರಗಳ ರೂಕ್ಷ ಪ್ರದೇಶದಲ್ಲಿ ಕರೆದೊಯ್ಯಬೇಕಾಗಿ ಬಂದಿತು. ಸರಳ ಮಾರ್ಗವನ್ನು ಬಿಟ್ಟು ರೂಕ್ಷ ಪ್ರದೇಶದಲ್ಲಿ ನಾನು ಪ್ರವೇಶಮಾಡಿದ್ದೇನೋ ನಿಜ, ಆದರೆ ನಾನೇನೂ ಅಲ್ಲಿ ಅತಿ ಸೂಕ್ಷ್ಮವಾಗಿ ವಿಚಾರ ಮಾಡಲು ಹೋಗಲಿಲ್ಲ. ಓಡೋಡುತ್ತ ಹಾಗೆಯೇ ಮೇಲೆ ಮೇಲೆ ನಿರೀಕ್ಷಣ ಹಾಗೂ ಪರೀಕ್ಷಣ ಮಾಡಿದೆ. ಪ್ರವೇಶ ಮಾಡಿದ್ದಾದರೂ ಏಕೆಂದರೆ, ಗೀತೆಯು ತನ್ನ ಅಭಿಮತವನ್ನು ಯಾವ ಕ್ರಮದಿಂದ ಮಂಡಿಸಿದೆಯೋ ಅದನ್ನು ಹಾಗೇಕೆ ಮಾಡಿದೆ ಎಂಬುದನ್ನು ಓದುಗರಿಗೆ ತಿಳಿಸುವುದು ಅವಶ್ಯವಾಗಿತ್ತು. ಗೀತೆಯು ತನ್ನ ಸತ್ಯದ ಅಭಿಮತವನ್ನು ಮೊದಲು ನಮ್ಮ ಮುಂದಿರಿಸುತ್ತದೆ. ಈ ಆಂಶಿಕ ಸತ್ಯದ ಆಂತರ್ಯದಲ್ಲಿರುವ ಪರಿಪೂರ್ಣ ಅರ್ಥವನ್ನು ಕೇವಲ ಸೂಚನಾ ರೂಪದಲ್ಲಿ ಮಾತ್ರ ಆರಂಭದಲ್ಲಿ ಮಂಡಿಸುತ್ತದೆ; ಆನಂತರ ಅದರೆಡೆಗೆ ನಿಧಾನವಾಗಿ ಹೊರಳುತ್ತ ಅದರ ಪೂರ್ಣ ಅರ್ಥವನ್ನು ಪ್ರಕಟಪಡಿಸುತ್ತದೆ. ಈ ರೀತಿ ಮಾಡುತ್ತ, ತನ್ನ ಸತ್ಯವನ್ನು ಗೀತೆ ನಮಗೆ ಪೂರ್ಣ ಪ್ರಮಾಣದಲ್ಲಿ ಪರಿಚಯಿಸುತ್ತದೆ. ತನ್ನ ಸರ್ವೋತ್ತಮ ಸತ್ಯವನ್ನದು ಶಬ್ದಗಳಲ್ಲಿ ಹೇಳುವುದೇ? ಅಂದರೆ ಅದೂ ಇಲ್ಲ. ಈ ರಹಸ್ಯಭೂತ ಸತ್ಯದ ಮಂಡನೆಯು ಆಚಾರದ ಮೂಲಕ, ಪ್ರಾಯೋಗಿಕವಾಗಿ ಮಾನವನ ಜೀವನದಲ್ಲಿ ಅಳವಡಬೇಕೆಂಬ ಮೂಲಭೂತ ಇಚ್ಛೆಯಿಂದ ಅತಿ ಸಂಕ್ಷಿಪ್ತವಾಗಿ ಶಬ್ದಗಳ ರೂಪದಲ್ಲಿ ನಮ್ಮ ಮುಂದಿರಿಸುತ್ತದೆ. ಗೀತೆಯ ಸರ್ವೋತ್ತಮ ರಹಸ್ಯ ಸತ್ಯವನ್ನು ಅನುಷ್ಠಾನದಲ್ಲಿ ತರಲು ಅವಶ್ಯವಿರುವ ಆಚಾರ ಪದ್ಧತಿಯು ಉತ್ತರಕಾಲೀನ ಯುಗದಲ್ಲಿ ಸಾಕಷ್ಟು ಬೆಳೆದಿರುವುದನ್ನು ನಾವು ಕಾಣಬಹುದು. ಈ ಯುಗದಲ್ಲಿ ಪ್ರೇಮ ಭಕ್ತಿಯ, ಆತ್ಮ ಸಮರ್ಪಣೆಯ, ನಿರತಿಶಯ ಆತ್ಮಾನಂದನದ ಪ್ರಚಂಡ ಪ್ರವಾಹವು ಹರಿದು

ಬಂದಿರುವುದನ್ನು ನಾವು ಕಾಣುತ್ತೇವೆ. ಗೀತೆಯ ಲಕ್ಷ್ಯವು ಅಥವಾ ಉದ್ದೇಶವು ಮುಖ್ಯವಾಗಿ ಸಮನ್ವಯವೇ ಆಗಿದ್ದು, ಸದಾ ಆ ದಿಶೆಯಲ್ಲೇ ಅದು ಕೆಲಸ ಮಾಡುತ್ತದೆ. ಹಾಗೆ ಮಾಡುವಾಗ ನಡು ನಡುವೆ ಬಂದ ಅನೇಕ ವಿಭಿನ್ನ ವಿಚಾರ ಕ್ರಮಗಳ ತಿರುವುಗಳು ಕೂಡ ಅಂತಃ ಸಮನ್ವಯೀಕರಣದ ಕಡೆಗೆ ಹೊರಳುತ್ತ, ನಮ್ಮನ್ನು ಆ ದಿಸೆಯಲ್ಲಿ ಸಿದ್ಧಪಡಿಸುತ್ತವೆ.

ಶ್ರೀ ಕೃಷ್ಣನು ಅರ್ಜುನನಿಗೆ ಹೇಳುತ್ತಾನೆ; “ಅರ್ಜುನಾ, ಸಾಂಖ್ಯ ಯೋಗದಲ್ಲಿ ಆತ್ಮ ವಿಮೋಚಕ ಬುದ್ಧಿಯು ಹೇಗೆ ಸಮತೋಲನದಲ್ಲಿರುತ್ತದೆ ಅನ್ನುವುದನ್ನು ವಿವರಿಸಿದ್ದೇನೆ. ಈಗ ಯೋಗದ ಇನ್ನೊಂದು ಆತ್ಮವಿಮೋಚಕ ಸಮತೋಲನ ಅಥವಾ ಸಮತ್ವದ ಸ್ಥಿತಿಯನ್ನು ಹೇಳುತ್ತೇನೆ. ಕೇಳು, ನೀನು ನಿನ್ನ ಕರ್ಮಫಲದ ವಿಚಾರವಾಗಿ ಹೆದರಿರುವಿ, ಅಂತಲೇ ಕರ್ಮ ಮಾಡಲು ಹಿಂಜರಿಯುತ್ತಿರುವಿ. ನಿನಗೆ ಬೇರೆ ಫಲದ ಅಪೇಕ್ಷೆ ಇದೆ, ಅಂತೆಯೇ ನೀನು ನಿನ್ನ ಪ್ರಕೃತಿ ಸಹಜವಾದ ಮಾರ್ಗವನ್ನು ಬಿಟ್ಟು ಬೇರೆಯದೇ ಆದ ಮಾರ್ಗವನ್ನು ತುಳಿಯಲು ಇಚ್ಛಿಸುತ್ತಿರುವಿ. ಆದರೆ ನಿನ್ನ ವಿಚಾರದ ಪದ್ಧತಿಯಲ್ಲಿ ದೋಷವಿದೆ; ಕರ್ಮ ಮತ್ತು ಕರ್ಮಫಲ, ನಿಶ್ಚಿತ ಉದ್ದೇಶವನ್ನಿಟ್ಟುಕೊಂಡೇ ಕರ್ಮ ಮಾಡುವುದು ಮತ್ತು ಅದನ್ನು ಬಯಸುವುದು, ಇಚ್ಛಾಪೂರ್ತಿಗಾಗಿಯೇ ಕರ್ಮ ಮಾಡುವುದು, ಕರ್ಮವು ಇಚ್ಛಾಪೂರ್ತಿಯ ಸಾಧನವೆಂದು ಬಗೆಯುವುದು ಇದೇ ನಿಜವಾದ ಬಂಧನ; ಈ ರೀತಿ ಕರ್ಮವೆಂದರೇನೆಂಬುದನ್ನರಿಯದ ಮೂಢರು ವಿಚಾರ ಮಾಡುತ್ತಾರೆ, ಅಂಥವರಿಗೆ ಕರ್ಮದ ಮೂಲ ಗೊತ್ತಿಲ್ಲ, ಕರ್ಮದ ನಿಜವಾದ ಪ್ರಕ್ರಿಯೆ ಹೇಗೆ ಎಂಬುದು ಗೊತ್ತಿಲ್ಲ. ಅದರಿಂದ ಪ್ರಯೋಜನವೇನಿದೆ ಇದಾವುದೂ ಗೊತ್ತಿಲ್ಲ. ನಾನು ಹೇಳುವ ಈ ಯೋಗವು ನಿನ್ನನ್ನು ಕರ್ಮದ ಎಲ್ಲ ಬಂಧನಗಳಿಂದ ಮುಕ್ತಗೊಳಿಸುವುದು. ‘ಕರ್ಮಬಂಧಂ ಪ್ರಹಾಸ್ಯಸಿ’. ನಿನ್ನ ಆತ್ಮವು ಯಾವ ಕರ್ಮಗಳಿಗೂ ಅಂಟಿಕೊಳ್ಳುವುದಿಲ್ಲ. ನಿನಗೆ ಅನೇಕ ಸಂಗತಿಗಳ ಬಗ್ಗೆ ಹೆದರಿಕೆ ಇದೆ, ಪಾಪದ ಭಯವಿದೆ, ದುಃಖದ ಭಯವಿದೆ, ನರಕ ಮತ್ತು ನರಕ ಯಾತನೆಯ ಶಿಕ್ಷೆಯ ಬಗ್ಗೆ ಹೆದರಿಕೆ ಇದೆ, ದೇವರ ಬಗ್ಗೆ ಭಯವಿದೆ, ಜಗತ್ತಿನ ಬಗ್ಗೆ ಭಯವಿದೆ, ಮುಂದೇನು ಎಂಬ ಭವಿಷ್ಯದ ಬಗ್ಗೆ ಭಯ ಇದೆ, ಮರಣಾನಂತರ ಏನು ಎಂಬ ಭಯವಿದೆ, ನಿನಗೆ ನಿನ್ನ ಬಗ್ಗೆಯೇ ಭಯವಿದೆ. ನಿನಗೆ ಯಾವುದರ ಬಗ್ಗೆ ಭಯ ಇಲ್ಲ ಹೇಳು? ನಿನಗೆ ಎಲ್ಲದರ ಬಗ್ಗೆಯೂ ಭಯ ಇದೆ. ನೀನು ಆರ್ಯ ಕ್ಷತ್ರಿಯ ವೀರ ಯೋಧ, ನೀನು ಜಗದೇಕ ವೀರ, ಶೂರ.

ನಿನಗೆ ಇಂಥ ಭಯ ಏಕೆ? ಪಾಪದ ಭಯ, ನೋವಿನ ಭಯ, ಇಹಲೋಕದ ಭಯ, ಪರಲೋಕದ ಭಯ ಇದೆಲ್ಲ ಸಾಮಾನ್ಯವಾಗಿ ಈ ಜಗತ್ತಿಗೇ ಅಂಟಿಕೊಂಡು ಬಿಟ್ಟಿದೆ. ನಿಜವಾಗಿ ಇದೇ ಬಹುದೊಡ್ಡ ಶತ್ರು. ಪರಲೋಕದ ಬಗ್ಗೆ ಏನೂ ತಿಳಿಯದು, ಪರಮಾತ್ಮನ ಬಗ್ಗೆಯೂ ಏನೂ ಅರಿವಿಲ್ಲ, ವಿಶ್ವದ ಉದ್ದೇಶ ಏನೊಂದೂ ಗೊತ್ತಿಲ್ಲ. ನಾನು ಹೇಳುವ ಯೋಗವನ್ನು ಅನುಷ್ಠಾನ ಮಾಡು, ನೀನು ಎಲ್ಲ ರೀತಿಯ ಭಯಗಳಿಂದಲೂ ಮುಕ್ತನಾಗುವಿ, "ಅಲ್ಪಮಪ್ಯಸ್ಯ ಧರ್ಮಸ್ಯ ತ್ರಾಯತೇ ಮಹತೋ ಭಯಾತ್" ನೀನೊಂದು ಹೆಜ್ಜೆ ಇಟ್ಟು ಆರಂಭ ಮಾಡಿದೆಯೋ ಮುಗಿಯಿತು. ನಿನ್ನ ಮುಂದಿನ ಯಾವ ಹೆಜ್ಜೆಯೂ ತಪ್ಪುವುದೇ ಇಲ್ಲ. ಒಂದೊಂದು ಕ್ಷಣ ಕೂಡ ನಿನಗೆ ಲಾಭವೇ. ನಿನಗೆ ಯಾವ ಅಡ್ಡಿಯೂ ಆಗದು, ನೀನು ತಡವರಿಸಬೇಕಾದ ಪ್ರಸಂಗ ಕೂಡ ಬರುವುದಿಲ್ಲ. ನಿನ್ನ ಪ್ರಗತಿಯನ್ನು ಯಾವುದೂ ತಡೆಯದು. ಶ್ರೀ ಕೃಷ್ಣನು ನೀಡಿದ ಈ ಅಭಯ ವಚನವು ಅತ್ಯಂತ ನಿಸ್ಸಂದಿಗ್ಧವಾಗಿದೆ, ಬಹಳ ಸ್ಪಷ್ಟವಾಗಿದೆ. ಹೀಗೆ ಹೇಳುವಲ್ಲಿ ಬಹಳ ಧೈರ್ಯ ಬೇಕು. ಆದರೆ ಸಂಶಯಗ್ರಸ್ತ, ಹೆದರಿಕೆಯಿಂದ ಡೋಲಾಯಮಾನವಾದ ಮನಸ್ಸು ಇದನ್ನು ಬೇಗನೇ ನಂಬಲಿಕ್ಕಿಲ್ಲ. ಇದರ ಅರ್ಥವನ್ನು, ವಿಶಾಲ ಸತ್ಯವನ್ನು ಗ್ರಹಿಸಲಿಕ್ಕಿಲ್ಲ. ಇದರ ಜೊತೆಗೆ ನಾವು ಶ್ರೀ ಕೃಷ್ಣನು ಕೊನೆಕೊನೆಗೆ ಹೇಳುವ "ಸರ್ವಧರ್ಮಗಳನ್ನು ಬದಿಗಿರಿಸು, ನನ್ನಲ್ಲೇ ಶರಣುಬಾ, ನಾನು ನಿನ್ನನ್ನು ಎಲ್ಲ ದುಃಖದಿಂದ, ಪಾಪಗಳಿಂದ ಪಾರುಗಾಣಿಸುತ್ತೇನೆ (18.66)" ಎಂಬ ಗೀತೆಯ ವಚನ ನೆನೆದಾಗ ಮಾತ್ರ ನಮಗೆ ಸಂದೇಹ ದೂರಾಗುತ್ತದೆ."

ಆದರೆ ಇದು ಭಗವಂತನು ಮಾನವನಿಗೆ ನೀಡಿದ ಪರಮೋಚ್ಚ ಆದೇಶವೆಂದಾಗಲಿ, ಅಂತಿಮ ವಾಕ್ಯವೆಂದಾಗಲಿ ಭಾವಿಸಬಾರದು. ಆರಂಭದಲ್ಲಿ ಸಾಧಕನು ನಡೆಯಬೇಕಾದ ಮಾರ್ಗದಲ್ಲಿ ಬೀರುವ ಬೆಳಕು ಮಾತ್ರ; ಇದೇನೂ ಆತ್ಮನಿಗೆ ನೀಡಿದ ಉಪದೇಶವಲ್ಲ, ಇದು ಮಾನವನ ಬುದ್ಧಿಗೆ ನೀಡಿದ ಉಪದೇಶ. ಇಲ್ಲಿಂದ ಗೀತೆಯ ಉಪದೇಶ ಆರಂಭವಾಗುತ್ತದೆ. ಈ ಹಂತದಲ್ಲಿ ಅಂದರೆ ಮೊದಮೊದಲು ಶ್ರೀ ಕೃಷ್ಣನು ಸ್ನೇಹಿತನಾಗಿ, ಪ್ರಿಯಕರ(ಪ್ರೇಮಿ)ನಾಗಿ ಹೇಳುವುದಿಲ್ಲ, ಬದಲಾಗಿ ಮಾರ್ಗದರ್ಶಿಯಾಗಿ, ಶಿಕ್ಷಕನಾಗಿ ಮಾತನಾಡುತ್ತಾನೆ. ತನ್ನ ಶಿಷ್ಯನಾದ ಅರ್ಜುನನ ಅಜ್ಞಾನವನ್ನಾತ ತೊಲಗಿಸಬೇಕಿದೆ, ಅವನ ನಿಜ ಸ್ವರೂಪವನ್ನು ದರ್ಶನ ಮಾಡಿಸಬೇಕಿದೆ, ಈ ಜಗದ ಬಗೆಗಿರುವ ಅಜ್ಞಾನವನ್ನು

ದೂರ ಮಾಡಬೇಕಾಗಿದೆ. ಯಾವ ನೆಲೆಯಲ್ಲಿ ನಿಂತು ಅವನು ಕರ್ಮ ಮಾಡುತ್ತಾನೆ ಎಂಬುದನ್ನು ಅರ್ಜುನನಿಗೆ ತೋರಿಸಿಕೊಡಬೇಕಾಗಿದೆ. ಏಕೆಂದರೆ ಅವನು ಅಜ್ಞಾನವಶನಾಗಿ ಕರ್ಮ ಮಾಡುತ್ತಿದ್ದಾನೆ. ವಿಕೃತವಾದ ಬುದ್ಧಿಯಿಂದ ಮಾಡುತ್ತಿದ್ದಾನೆ, ಹೀಗಾಗಿ ಅವನ ಸಂಕಲ್ಪ ದೋಷಯುಕ್ತವಾಗಿದೆ. ಅಂತೆಯೇ ಮಾನವನು ಕರ್ಮಗಳಿಂದ ಬದ್ಧನಾಗಿದ್ದಾನೆ ಎಂಬ ಭಾವ ಅರ್ಜುನನಿಗಿದೆ. ನಿಜವಾಗಿ ಕರ್ಮಗಳು ಆತ್ಮಕ್ಕೆ ಬಂಧನವಲ್ಲ. ಈ ರೀತಿ ಬುದ್ಧಿಯ ದೋಷದಿಂದಾಗಿ ಮಾನವನಲ್ಲಿ ಮೋಹ, ಭಯ, ಕ್ರೋಧ, ಶೋಕ, ತಾತ್ಕಾಲಿಕ ಸುಖ ಕಂಡುಬರುತ್ತವೆ. ಅನ್ಯಥಾ ಎಲ್ಲ ರೀತಿಯ ಕರ್ಮಗಳನ್ನು ಪರಿಪೂರ್ಣ ಗಾಂಭೀರ್ಯದಿಂದ, ಸ್ವತಂತ್ರ ಭಾವದಿಂದ ಮಾಡಲು ಸಾಧ್ಯವಿದೆ. ಆದ್ದರಿಂದ ಇದನ್ನು ಬುದ್ಧಿಯೋಗ ಎಂದೇ ಕರೆಯಲಾಗಿದೆ. ಇದನ್ನೇ ಅರ್ಜುನನಿಗೆ ಮೊದಲು ಉಪದೇಶ ಮಾಡುತ್ತಾನೆ. ದೋಷಮುಕ್ತ ಬುದ್ಧಿಯಿಂದ, ಸರಿಯಾದ ಸಂಕಲ್ಪದಿಂದ, ಏಕೈಕನಾದ ಪರಮಾತ್ಮನ ಮೇಲೆ ಲಕ್ಷ್ಯವಿಟ್ಟು, ಎಲ್ಲ ಜೀವರಾಶಿಗಳಲ್ಲೂ ಒಂದೇ ಆತ್ಮ ಇದೆ ಎಂಬ ಸದ್ಭಾವ ತಾಳಿ, ಗಂಭೀರವಾದ ಸಮತೆಯಿಂದ ಕಾರ್ಯ ಮಾಡಬೇಕು; ಬೇರೆ ಬೇರೆ ದಾರಿಗಳಲ್ಲಿ ಹೋಗಬಾರದು, ಮನಸ್ಸಿನ ಪ್ರಭಾವಕ್ಕೊಳಗಾಗಿ ಬೇರೆ ಬೇರೆ ದಿಕ್ಕು, ದಾರಿಗಳಲ್ಲಿ ಹೋಗಬಾರದು. ಇದನ್ನೇ ಬುದ್ಧಿ, ಸಂಕಲ್ಪ ಯೋಗವೆಂದು ಕರೆಯುತ್ತಾರೆ.

ಗೀತೆಯು ಹೇಳುವಂತೆ, ಮಾನವರಲ್ಲಿ ಎರಡು ಪ್ರಕಾರದ ಬುದ್ಧಿ ಇರುತ್ತವೆ. ಮೊದಲನೆಯದು, ಏಕಾಗ್ರ, ಸಮತೆಯುಳ್ಳ, ಏಕತೆಯ, ಏಕರಸವಾದ, ಸತ್ಯದೆಡೆಗೆ, ಕೇವಲ ಸತ್ಯದೆಡೆಗೆ ಮಾತ್ರ ಲಕ್ಷ್ಯವುಳ್ಳ ಬುದ್ಧಿಯಾಗಿದೆ. ಇದರ ವೈಶಿಷ್ಟ್ಯವು ಏಕತೇಯಾದರೆ, ಏಕಾಗ್ರ ಸ್ಥಿರತೆಯೇ ಅದರ ಆತ್ಮವಾಗಿದೆ. ಮತ್ತೊಂದರಲ್ಲಿ ಒಂದೇ ಸಂಕಲ್ಪ ಇರುವುದಿಲ್ಲ. ಏಕಾಗ್ರಗೊಂಡ ಬುದ್ಧಿಯೂ ಇರುವುದಿಲ್ಲ. ಅದರಲ್ಲಿ ಅನಂತ ಕಲ್ಪನೆಗಳು, ಕಲ್ಪನೆಯ ಅನಂತ ಶಾಖೆಗಳು ಇರುತ್ತವೆ. ಹೀಗಾಗಿ ಅದು ಒಮ್ಮೆ ಆ ದಿಶೆಯಲ್ಲಿ ಹೋದರೆ ಇನ್ನೊಮ್ಮೆ ಈ ದಿಶೆಯಲ್ಲಿ ಹೋಗುತ್ತದೆ. ಒಮ್ಮೆ ಆ ಇಚ್ಛೆ, ಒಂದು ಸಲ ಈ ಇಚ್ಛೆ, ಜೀವನದ ವಿವಿಧ ಪ್ರಸಂಗಗಳು ಒಡ್ಡಿದ ನಾನಾ ಬಗೆಯ ಪ್ರಭಾವಗಳಿಗೆ ಬಲಿಯಾಗುತ್ತಿರುತ್ತದೆ. ಅದು ಸ್ವೈರಭಾವ ಹೊಂದಿರುತ್ತದೆ. ಬುದ್ಧಿಯೋಗದಲ್ಲಿ ಬರುವ ಬುದ್ಧಿ ಎಂಬ ಶಬ್ದದ ವಾಚ್ಯಾರ್ಥವು "ವಿಷಯವನ್ನು ಸರಿಯಾದ ರೀತಿಯಲ್ಲಿ ಗ್ರಹಿಸುವ ಸಾಮರ್ಥ್ಯ" ಎಂದಾಗುತ್ತದೆ. ಆದರೆ ಗೀತೆಯು ಈ ಶಬ್ದವನ್ನು ಬಹಳ ವ್ಯಾಪಕವಾದ ಅರ್ಥದಲ್ಲಿ ಬಳಸುತ್ತದೆ;

ಬುದ್ಧಿ ಅಂದರೆ ಇಲ್ಲಿ ವಿಶಾಲ, ತತ್ವ ಜ್ಞಾನದ ಅರ್ಥದಲ್ಲಿ ಬಳಸುತ್ತದೆ. ವಿಷಯಗಳ ವಿಮರ್ಶೆ, ನಿಷ್ಕರ್ಷಿಸುವ ಮನಸ್ಸು ಆನಂತರ ನಮ್ಮ ವಿಚಾರಗಳನ್ನು ಸರಿಯಾದ ದಾರಿಯಲ್ಲಿ ನಿರ್ದೇಶಿಸುವುದು ಮತ್ತು ನಿರ್ಣಯಿಸುವುದು ಹಾಗೂ ಅದೇ ರೀತಿ ನಮ್ಮ ಕರ್ಮಗಳನ್ನು ಕೂಡ ಸರಿಯಾದ ರೀತಿಯಲ್ಲಿ ನಿರ್ಣಯಿಸಿ ನಿರ್ದೇಶಿಸುವುದು ಇವೆಲ್ಲವೂ ಅದರಲ್ಲಿ ಅಡಕವಾಗುತ್ತವೆ. ನಮ್ಮ ಆಲೋಚನೆಗಳು, ಬುದ್ಧಿ, ನಿರ್ಣಯ, ಆಯ್ಕೆ ಹಾಗೂ ಉದ್ದೇಶ ಇವೆಲ್ಲವೂ "ಬುದ್ಧಿ" ಅನ್ನುವ ಹೆಸರಿನಲ್ಲಿಯೇ ಅಡಕವಾಗುತ್ತವೆ. ಏಕೆಂದರೆ, ಏಕೀಕೃತವಾದ ಬುದ್ಧಿ ಅಂದರೆ ಕೇವಲ ಮನಸ್ಸಿನ ಏಕಾಗ್ರತೆ ಮಾತ್ರ ಅಲ್ಲ. ಅದರ ಬದಲಾಗಿ ಮನಸ್ಸು ತನ್ನ ನಿರ್ಣಯದ ಕಾರ್ಯದಲ್ಲಿ ಏಕಾಗ್ರತೆ ಹೊಂದುವುದು, ಆ ನಿರ್ಣಯದ ಮೇಲೆ ತನ್ನ ನಿಲುವು ರೂಪಿಸುವುದು, ವ್ಯವಸಾಯ, ಇದೆಲ್ಲ ಸಮ್ಮಿಲಿತವಾಗಿರುವುದು; ಇದರ ಬದಲಾಗಿ ಚಂಚಲ ಬುದ್ಧಿಯಲ್ಲಿ (ನಾನಾ ದಿಕ್ಕುಗಳಲ್ಲಿ ಚದುರಿಹೋಗಿರುವ ಬುದ್ಧಿಯಲ್ಲಿ) ವೈಚಾರಿಕ ನಿಖರತೆ ಇರುವುದಿಲ್ಲ. ವೈಚಾರಿಕ ಸ್ಪಷ್ಟತೆ ಇರುವುದಿಲ್ಲ. ಉದ್ದೇಶದ ಮೇಲೆ ಏಕಾಗ್ರತೆ ಇರುವುದಿಲ್ಲ ಹೀಗಾಗಿ ತನಗೇನು ಬೇಕು ಎಂಬ ನಿಶ್ಚಿತತೆ ಇಲ್ಲವಾಗಿ ಸಂಕಲ್ಪ ಕೂಡ ಪ್ರಬಲವಾಗಿರುವುದಿಲ್ಲ. ಏಕಾಗ್ರಗೊಂಡ ಬುದ್ಧಿ ಮತ್ತು ಸಂಕಲ್ಪವು ಸಾಕ್ಷಾತ್ಕಾರ ಪಡೆದ ಆತ್ಮದಲ್ಲಿ ಸ್ಥಿತವಾಗಿರುವುದು, ಅದು ಆಂತರಿಕ ಆತ್ಮ ಜ್ಞಾನದ ಮೇಲೆ ಕೇಂದ್ರೀಕೃತವಾಗಿರುತ್ತದೆ. ಆದರೆ ಅನೇಕ ದಿಕ್ಕುಗಳಲ್ಲಿ ಚದುರಿಹೋಗಿರುವ, ಹರಿದಾಡುವ ಬುದ್ಧಿಯು ಯಾವುದು ನಿಜವಾಗಿ ಅವಶ್ಯಕವಿದೆಯೋ ಅದನ್ನು ಬಿಟ್ಟು, ಅದನ್ನು ದುರ್ಲಕ್ಷಿಸಿ, ಅನವಶ್ಯಕವಾಗಿ ಮನಸ್ಸಿನ ಚಂಚಲ ಮತ್ತು ಯಾವುದೇ ನಿರ್ಣಯಕ್ಕೆ ಬಾರದ ಸ್ಥಿತಿಯನ್ನವಲಂಬಿಸಿ ಬಾಹ್ಯ ಕರ್ಮ ಮತ್ತು ಅವುಗಳ ಫಲದ ಗೊಂದಲದಲ್ಲಿ ಸಿಕ್ಕು ಬೀಳುತ್ತದೆ. ಶ್ರೀ ಕೃಷ್ಣನು ಹೇಳುತ್ತಾನೆ; ಬುದ್ದಿಯೋಗಕ್ಕಿಂತ ಕರ್ಮ ತುಂಬ ಕೆಳಮಟ್ಟದ್ದು, ಆದ್ದರಿಂದ ಬುದ್ಧಿಯೋಗವನ್ನೇ ನೀನು ಅವಲಂಬಿಸು, ತಮ್ಮ ವಿಚಾರ ಹಾಗೂ ಕರ್ಮಗಳನ್ನೂ ಯಾರು ಕರ್ಮಫಲದ ಉದ್ದೇಶದಿಂದಲೇ ಮಾಡುವರೋ ಅವರು ನಿಜವಾಗಿ ಕೀಳು ಮನೋಭಾವದವರು. (1.49)

ಗೀತೆಯು ಸಾಂಖ್ಯರ ಮನೋವೈಜ್ಞಾನಿಕ ವ್ಯವಸ್ಥೆಯನ್ನು ಒಪ್ಪಿದೆ ಎಂಬುದನ್ನು ನಾವು ಮರೆಯಬಾರದು. ಒಂದೆಡೆ ಸ್ಥಿರ, ನಿಷ್ಕ್ರಿಯ, ಅಚಲ, ಅಕ್ಷರ ಮತ್ತು ಅವಿಕಾರಿಯಾದ ಪುರುಷ; ಅಂದರೆ ಪುರುಷ ತತ್ವವು ವಿಕಾಸದ ಪರಿಣಾಮದಿಂದ ಆಚೆಗಿರುವಂಥದು. ಇನ್ನೊಂದೆಡೆ ಪ್ರಕೃತಿ, ಅಥವಾ ನಿಸರ್ಗ ಶಕ್ತಿ; ಇದು

ಕ್ರಿಯಾಶೀಲ ತತ್ವವಾಗಿದ್ದರೂ ಪುರುಷನ ಚೇತನದ ಸಂಸರ್ಗವಿಲ್ಲದೇ ಏನೂ ಮಾಡದು, ಪುರುಷ, ಪ್ರಜ್ಞೆಯ ಸಾನಿಧ್ಯದಲ್ಲಿ ಮಾತ್ರ ಕೆಲಸ ಮಾಡುವಂಥದು – ಪುರುಷನೊಡನೆ ಪ್ರಕೃತಿಯು ಏಕರೂಪ ಸಂಬಂಧವನ್ನು ಹೊಂದಿಲ್ಲ, ಈ ಸಂಬಂಧವನ್ನು ಅನಿಶ್ಚಿತ ಸಂಬಂಧವೆಂದು ಹೇಳಬಹುದು. ಪ್ರಕೃತಿಯು ತ್ರಿಗುಣಾತ್ಮಕವಾಗಿದೆ, ವಿವರ್ತನ. ನಿವರ್ತನ ಹೊಂದುವ ತತ್ವ. ಪುರುಷನ ಜೊತೆ ಸಂಧಿಸಿದಾಗ ವಿಕಾಸಕ್ಕೆ ಬದ್ಧವಾಗುತ್ತದೆ. ಅನ್ಯತಾ ವಿಕಾಸ ಹೊಂದದೆ ಅವಿಕಾರಿಯಾಗಿರುತ್ತದೆ. ಪ್ರಕೃತಿ ಮತ್ತು ಪುರುಷರ ಸಂಯೋಗವು ಆತ್ಮನಿಷ್ಠ ಮತ್ತು ವಸ್ತುನಿಷ್ಠ ವಿಶ್ವದ ನಿರ್ಮಾಣಕ್ಕೆ ಕಾರಣವಾಗುವುದು. ಈ ವಿಶ್ವವೇ ನಮ್ಮ ಅನುಭವದ ಕ್ಷೇತ್ರವಾಗಿದೆ. ನಮಗೆ ವ್ಯಕ್ತಿನಿಷ್ಠವೆನಿಸುವ, ಆತ್ಮನಿಷ್ಠವೆನಿಸುವ ವಸ್ತು (ವಿಶ್ವ) ಮೊದಲು ವಿಕಾಸಹೊಂದುತ್ತದೆ. ಏಕೆಂದರೆ ಆತ್ಮಪ್ರಜ್ಞೆ(ಪುರುಷ ಪ್ರಜ್ಞೆ)ಯು ಮೊದಲ ಕಾರಣವಾಗಿದೆ. ಅಚೇತನವಾದ ಪ್ರಕೃತಿಯು ಎರಡನೆಯ ಹಾಗೂ ಆಲಂಬನ(ಸಾಪೇಕ್ಷ) ತತ್ವವಾಗಿದೆ. ಆದರೆ ಗಮನಿಸಬೇಕಾದ ಸಂಗತಿ ಏನೆಂದರೆ, ನಮ್ಮ ಆತ್ಮನಿಷ್ಠ ಅನುಭವದ ಉಪಕರಣಗಳನ್ನು ಮಾತ್ರ ಪ್ರಕೃತಿಯೇ ಒದಗಿಸುವುದೇ ಹೊರತು ಆತ್ಮ ತತ್ವವಲ್ಲ. ಪ್ರಕೃತಿಯಿಂದ ನಮಗೆ ಪೂರೈಕೆಯಾಗುವ ಉಪಕರಣಗಳಲ್ಲಿ ಮೊದಲನೆಯದು ಬುದ್ಧಿ, ಇದು ವಿಮರ್ಶಾತ್ಮಕ ಮತ್ತು ನಿರ್ಣಯಾತ್ಮಕ ಶಕ್ತಿಯುಳ್ಳ ತತ್ವ. ಆನಂತರ ಅದರ ಅಧೀನ ಶಕ್ತಿಯಾದ ಅಹಂ ತತ್ವವು ವಿಕಾಸ ಹೊಂದುವುದು. ಅಹಂಕಾರವು ಭೇದ ಕಾರಕವಾದ ತತ್ವವಾಗಿದೆ. ಇವುಗಳ ನಂತರ ನಿರ್ಮಾಣವಾಗುವುದು ಅಹಂಕಾರವು ನಿರೂಪಿಸುವ ಭೇದಗಳನ್ನು ವಿಮಾರ್ಶಾತ್ಮಕವಾಗಿ ಗುರುತಿಸಬಲ್ಲ ಇಂದ್ರಿಯಾಧಾರಿತ ಮನಸ್ಸು ಅಥವಾ ಮನಸ್ಸು ನಾವು ಅನಿವಾರ್ಯವಾಗಿ ಮತ್ತು ಅವಶ್ಯವಾಗಿ ಭಾರತೀಯ ದರ್ಶನಗಳಲ್ಲಿ ಪ್ರಯೋಗಿಸಿದ ಶಬ್ದಗಳನ್ನು ಬಳಸುವುದು ವಿಹಿತ, ಏಕೆಂದರೆ ಬೇರೆ ಭಾಷೆಯಲ್ಲಿ ಅವುಗಳ ಸಮಾನಾರ್ಥಕ ಶಬ್ದಗಳು ಸಿಕ್ಕುವುದೇ ಇಲ್ಲ. ಆನಂತರದಲ್ಲಿ ಸೃಷ್ಟಿಯ ಹಂತದಲ್ಲಿ ಇಂದ್ರಿಯ ಮನದ ಮೂಲಕ ಐದು ಜ್ಞಾನೇಂದ್ರಿಯಗಳು, ಐದು ಕರ್ಮೇಂದ್ರಿಯಗಳು ಹೀಗೆ ಒಟ್ಟು 10 ಇಂದ್ರಿಯಗಳು ಅಸ್ತಿತ್ವದಲ್ಲಿ ಬರುತ್ತವೆ. ಆನಂತರ ಜ್ಞಾನೇಂದ್ರಿಯಗಳ ಶಕ್ತಿಗಳಾದ ಶಬ್ದ, ರೂಪ, ಗಂಧ ಇತ್ಯಾದಿಗಳು ಮೂಡಿಬರುತ್ತವೆ. ಇವುಗಳಿಂದಾಗಿಯೇ ಇಂದ್ರಿಯಾರ್ಥಗಳಿಗೆ ಅಥವಾ ವಿಷಯಗಳಿಗೆ ಮೌಲ್ಯ ಒದಗುತ್ತದೆ, ಮನಸ್ಸು ಇವುಗಳನ್ನು ಗ್ರಹಿಸಲು ಶಕ್ತವಾಗುತ್ತದೆ. ಈ ಐದು ಜ್ಞಾನೇಂದ್ರಿಯಗಳ ಆಧಾರಭೂತ ದ್ರವ್ಯಗಳಾಗಿ ಪಂಚ

ಮಹಾಭೂತಗಳು ನಿರ್ಮಾಣವಾಗುತ್ತವೆ. ಆಕಾಶ, ಗಾಳಿ, ಬೆಂಕಿ, ನೀರು, ನೆಲ ಇವು ಪ್ರಕೃತಿಯ ಮೂಲ ತತ್ವಗಳು. ಇವುಗಳ ಸಂಯೋಗ ವಿಶೇಷದಿಂದಲೇ ಅನಂತ ಸೃಷ್ಟಿ ಅಸ್ತಿತ್ವಕ್ಕೆ ಬರುತ್ತದೆ.

ಪ್ರಕೃತಿಯ ಶಕ್ತಿಗಳು ಮತ್ತು ಅವುಗಳ ತರತಮ ಹಂತಗಳು ಪುರುಷನ ಶುದ್ಧ ಪ್ರಜ್ಞೆಯಲ್ಲಿ ಪ್ರತಿಫಲಿತವಾಗುವುದು ನಿಜವಾದರೂ, ಅವು ವೈಯಕ್ತಿಕ ಅಥವಾ ವ್ಯಕ್ತಿನಿಷ್ಠ ಪ್ರಮೇಯದ ಹಂತಕ್ಕೆ ಬಂದಾಗ ಅಶುದ್ಧವಾಗುತ್ತವೆ, ಅಥವಾ ವಿಕೃತವಾಗುತ್ತವೆ. ಏಕೆಂದರೆ ವೈಯಕ್ತಿಕ ದೃಷ್ಟಿಕೋನವು ವ್ಯಕ್ತಿಯ ಇಂದ್ರಿಯಗಳ ಮೇಲೆ ಅವಲಂಬಿತವಾಗಿರುತ್ತದೆ ಮತ್ತು ವಸ್ತುಗಳನ್ನು ನೋಡಿ ಅವುಗಳಿಗೆ ಪ್ರತಿಕ್ರಯಿಸುವ ಅಥವಾ ಅವುಗಳನ್ನು ಗ್ರಹಿಸುವ ಕ್ರಿಯೆಯು ವ್ಯಕ್ತಿಯ ವೈಯಕ್ತಿಕ ದೃಷ್ಟಿಕೋನಕ್ಕೆ ಸಾಪೇಕ್ಷವಾಗಿರುತ್ತದೆ. ಬುದ್ಧಿಯೇನೋ ಮೂಲತಃ ಕೇವಲ ನಿರ್ಣಾಯಕ ಶಕ್ತಿಯಾಗಿರಬಹುದು, ಆದರೆ ಅದು ಎಲ್ಲವನ್ನೂ ಅವ್ಯಾಕೃತ ಅಚೇತನ ಶಕ್ತಿಯ ಮೂಲಕ ನಿರ್ವೈಯಕ್ತಿಕವಾಗಿ ಗ್ರಹಿಸುವಂಥದಾಗಿದೆ. ಆದರೆ ಆ ಬುದ್ಧಿಯು ನಮ್ಮಲ್ಲಿ ವೈಯಕ್ತಿಕ ಬುದ್ಧಿಯಾಗಿ, ಸಂಕಲ್ಪವಾಗಿ ಕೆಲಸ ಮಾಡುವುದು. ಇನ್ನು ಮನಸ್ಸು ಅಚೇತನದ ಶಕ್ತಿಯಾಗಿದ್ದು, ಪ್ರಕೃತಿಯ ವಿಶ್ಲೇಷಣೆ, ವಿಮರ್ಶೆಗಳನ್ನು ವಸ್ತುನಿಷ್ಠವಾಗಿ ಗ್ರಹಿಸುವುದಾದರೂ ಆ ಗ್ರಹಿಕೆಯು ಆಕರ್ಷಣೆ, ವಿಕರ್ಷಣೆಯ ಮೂಲಕವಾಗಿದ್ದು, ಇಂದ್ರಿಯ ಅರಿವಾಗಿ, ಕಾಮನೆಯಾಗಿ, ಬಯಕೆಯಾಗಿ (ವಿಕರ್ಷಣೆಯಾಗಿ) ಬುದ್ಧಿ ಹಾಗೂ ಸಂಕಲ್ಪಗಳ ಋಜು ಕ್ರಿಯೆಯಲ್ಲಿ ಅವರೋಧ ಒಡ್ಡುವುದು. ಆಗ ಇಂದ್ರಿಯ–ಮನ, ಸಂವೇದನೆ, ಭಾವನಾತ್ಮಕ ಹಾಗೂ ಕೆಳ ಹಂತದಲ್ಲಿ ಕಾಮನೆ, ಆಸೆ, ಬಯಕೆ, ಹಂಬಲ, ಆವೇಶ, ಪ್ರಾಣಿಕ ತುಡಿತ ಹೀಗೆ ಎಲ್ಲ ರೀತಿಯ ವಿಕೃತಿಗಳಿಗೆ, ವಿಚಾರಗಳಿಗೆ ಬಲಿಯಾಗುವುದು. ಆಗ ಜ್ಞಾನವು ಇಂದ್ರಿಯ–ಮನದ ಅಧೀನವಾಗಿ ಬಿಡುವುದು, ಜ್ಞಾನೇಂದ್ರಿಯಗಳಿಗೆ ದಾಸನಾಗಿ–ಬಿಡುವುದು. ಪ್ರಾಣಿಕ ಪ್ರವೃತ್ತಿಗೆ ದಾಸನಂತಾಗುವುದು ವ್ಯಕ್ತಿನಿಷ್ಠ ಮತ್ತು ವಸ್ತುನಿಷ್ಠ ಗ್ರಹಿಕೆಗಳ ನಡುವಿನ ದಲ್ಲಾಳಿಯಂತೆ, ಮಧ್ಯವರ್ತಿಯಂತೆ ಆಗುವುದು. ಉಳಿದೆಲ್ಲವೂ ನಮ್ಮ ಪ್ರಜ್ಞೆಯ ಜ್ಞೇಯಗಳಾಗುವವು, ವಿಷಯ(ಇಂದ್ರಿಯಾರ್ಥ)ಗಳಾಗುವವು.

ವಿಕಾಸದ ಈ ಕ್ರಮವು ನಿಮ್ಮ ಭೌತಿಕ ಜಗದ (ವೈಜ್ಞಾನಿಕ) ವಿಕಾಸದ ಕ್ರಮಕ್ಕೆ ವಿರುದ್ಧವೆಂಬಂತೆ ತೋರುತ್ತದೆ. ಆದರೆ ಬುದ್ಧಿಯೂ ಸಹ ಆಚೇತನ ಪ್ರಕೃತಿಯ ನಿಶ್ಚಲ ಕಾರ್ಯವಾಗಿದೆ ಎಂಬುದು ನಮಗೆ ಗೊತ್ತಿದೆ; ಈ ದೃಷ್ಟಿಯಿಂದ ನೋಡಿದಾಗ ಅಣು, ಪರಮಾಣುವಿನಲ್ಲಿ ಕೂಡ ವಿಶ್ಲೇಷಣಾತ್ಮಕ ಮತ್ತು

ನಿರ್ಣಯಾತ್ಮಕ ಶಕ್ತಿಯಾದ ಅಚೇತನ ಸಂಕಲ್ಪ ಮತ್ತು ಬುದ್ಧಿ ಇದ್ದೇ ಇದೆ ಎಂಬ ಸತ್ಯ ಅರಿವಾಗುವುದು. ನಾವು ಈ ಒರಟು ಅಚೇತನ ದ್ರವ್ಯವನ್ನು ಪರೀಕ್ಷಿಸಿದರೆ ಅದರಲ್ಲಿಯೂ ಸಹ ಸಂವೇದನೆ, ಭಾವನೆ, ಸ್ಮೃತಿ, ತುಡಿತ, ಸಹಜ ಪ್ರವೃತ್ತಿ ಇರುವುದು, ಸಸ್ಯಗಳಲ್ಲೂ ಹಾಗೂ ಸೃಷ್ಟಿಯ ಇತರ ಅವಚೇತನದ ಸತ್ತೆಗಳಲ್ಲಿಯೂ ಕೂಡ ಅದೇ ವಿಧವಾಗಿ ಈ ಶಕ್ತಿಗಳೇ ವಿಕಾಸ ಹೊಂದುತ್ತಲಿರುವ ಪ್ರಾಣಿಗಳಲ್ಲಿ, ಮಾನವನಲ್ಲಿ ವ್ಯಕ್ತಿನಿಷ್ಠತೆಯ ಅಥವಾ ಆತ್ಮನಿಷ್ಠತೆಯ ಸ್ವರೂಪ ತಾಳುತ್ತಿರುವುದು ನಮಗೆ ಗೊತ್ತಾಗುತ್ತದೆ. ಆಗ ಈ ಸಾಂಖ್ಯರ ದರ್ಶನವು ಅರ್ವಾಚೀನ ವೈಜ್ಞಾನಿಕ ಸಿದ್ಧಾಂತದ ಜೊತೆ ಸರಿಸಾಟಿಯಾಗಿ ನಿಲ್ಲುವುದೆಂಬುದು ನಮಗೆ ಅರಿವಾಗುತ್ತದೆ. ವಿಕಾಸವೆಂಬುದು ನಿಜವಾಗಿ ಪ್ರಕೃತಿಯಿಂದ ಪುರುಷನೆಡೆಗೆ ಸಾಗುವ ಹಿಮ್ಮುಖ ಚಲನೆಯನ್ನೇ ನಾವು ಪ್ರಕೃತಿಯ ವಾಸ್ತವಿಕ ವಿಕಾಸವೆಂದು ಮನ್ನಿಸುತ್ತೇವೆ ಅನ್ನುವುದು ಗೀತೆಯ ಹಾಗೂ ಉಪನಿಷತ್ತುಗಳ ಉಧೃತಗಳಿಂದ ತಿಳಿದು ಬರುತ್ತದೆ. ಉಪನಿಷತ್ತುಗಳು ಹೇಳುವಂತೆ ವಿಕಾಸವೆಂದರೆ ನಮ್ಮ ವೈಯಕ್ತಿಕ ಆತ್ಮ ನಿಷ್ಠ ಶಕ್ತಿಗಳನ್ನು ಮರಳಿ ಹಿಮ್ಮುಖವಾಗಿ ಸಾಗಿ ಪಡೆದುಕೊಳ್ಳುವುದೇ ಆಗಿದೆ. ಉಪನಿಷತ್ತು ಹೇಳುತ್ತವೆ; ಇಂದ್ರಿಯಗಳು ಶ್ರೇಷ್ಠ, ಇಂದ್ರಿಯಗಳಿಗಿಂತ ಮನಸ್ಸು ಶ್ರೇಷ್ಠ, ಮನಸ್ಸಿಗಿಂತ ಬುದ್ಧಿ ಮತ್ತು ಅದರ ಸಂಕಲ್ಪ ಶ್ರೇಷ್ಠ, ಈ ಶ್ರೇಷ್ಠ ಬುದ್ಧಿ ಮತ್ತು ಸಂಕಲ್ಪಗಳಿಗಿಂತ ಅತ್ಯಂತ ಶ್ರೇಷ್ಠವಾದುದು ಆತ್ಮ (ಪುರುಷ) (3/42).

ಆದ್ದರಿಂದ ಈ ಪುರುಷನೇ ನಮ್ಮ ವೈಯಕ್ತಿಕ ಬದುಕಿನ ಅತಿ ಹಿರಿಯ ಅಥವಾ ಪ್ರಧಾನ ಕಾರಣವಾಗಿದ್ದಾನೆ. ನಾವಿದನ್ನು ಬುದ್ಧಿಪೂರ್ವಕವಾಗಿ ಸರಿಯಾಗಿ ಅರ್ಥಮಾಡಿಕೊಳ್ಳಬೇಕು. ಅದರಲ್ಲಿಯೇ ನಮ್ಮ ಸಂಕಲ್ಪವನ್ನು ಸ್ಥಿರಗೊಳಿಸಬೇಕು. ನಮ್ಮ ಕೆಳ ಹಂತದ ವೈಯಕ್ತಿಕ ಪ್ರತ್ಯೇಕ ಆತ್ಮವನ್ನು ಪ್ರಕೃತಿಯಲ್ಲಿ ಹೊಯ್ದಾಡದಂತೆ, ಚಂಚಲವಾಗದಂತೆ ನಿಶ್ಚಲಗೊಳಿಸಬೇಕು. ನಮ್ಮ ಉನ್ನತವಾದ ಪ್ರಜ್ಞಾಪೂರ್ಣ ಆತ್ಮತತ್ವದಿಂದ ಸಮತೆಯನ್ನು ಸ್ಥಾಪಿಸಬೇಕು. ನಮ್ಮ ಶಾಂತಿ ಹಾಗೂ ಆತ್ಮ ಪ್ರಭುತ್ವದ ಸಿದ್ಧಿಗೆ ತೀವ್ರ ವಿರೋಧಿಯಾದ, ವೈರಿಯಂತಿರುವ ಮನದ ಕಾಮನೆಗಳನ್ನು ಸಂಪೂರ್ಣವಾಗಿ ಗೆಲ್ಲಬೇಕು.

ಬುದ್ಧಿಯ ಸಂಕಲ್ಪವು ಎರಡು ರೀತಿಯಾಗಿ ಕೆಲಸ ಮಾಡಬಲ್ಲದು. ಅದು ಕೆಳಗೆ ಮತ್ತು ಹೊರಗೆ ಹೋಗಿ ಪ್ರಕೃತಿಯ ಗುಣಗಳ ಆಟದಲ್ಲಿ ಸಿಕ್ಕುಬಿದ್ದು ಸಂವೇದನೆ ಮತ್ತು ವಾಸನೆಗಳ ಗೊಂದಲದಲ್ಲಿ ಒದ್ದಾಡುವುದು ಅಥವಾ ಅಂತರಂಗಕ್ಕಿಳಿದು ಮೇಲೇರಿ ಪ್ರಕೃತಿಯ ವಿಕ್ಷೇಪಗಳಿಂದ ದೂರ ಸರಿದು

ಪ್ರಜ್ಞಾಯುಕ್ತ ಶಾಂತ, ಆತ್ಮದ ಶಾಂತಿ ಮತ್ತು ಅವ್ಯಯ ವಿಶುದ್ಧ ಶಾಂತ ಸ್ಥಿತಿಯಲ್ಲಿ ಸ್ಥಿರವಾಗಿ, ಎಲ್ಲವನ್ನು ಸಮತ್ವದಿಂದ ಅನುಭವಿಸಬಲ್ಲದು. ಬುದ್ಧಿಯು ಬಹಿರ್ಮುಖ ಮತ್ತು ಅಧೋಮುಖವಾದಾಗ ಜೀವವು ಇಂದ್ರಿಯಾಕರ್ಷಕ ವಿಷಯಗಳ ಬಲೆಯಲ್ಲಿ ಸಿಕ್ಕವುದು. ಪದಾರ್ಥಗಳ ಬಾಹ್ಯ ಸಂಪರ್ಕದಲ್ಲಿಯೇ ಅದರ ಜೀವನ ಕಳೆದುಹೋಗುವುದು. ಅದರ ಜೀವನ ವಾಸನಾಮಯವಾಗುವುದು. ಅದರಿಂದ ಇಂದ್ರಿಯಗಳು ಉತ್ತೇಜಿತವಾಗುವುವು, ಕ್ಷೋಭೆ ಉತ್ಪನ್ನವಾಗುವುದು. ವಿಷಯೋಪ–ಭೋಗಕ್ಕಾಗಿ ಮನಸ್ಸು(ಬುದ್ಧಿಯು) ಕೆಲಸಲ ಅನೇಕ ಅವಿವೇಕ ಪೂರ್ಣ ಕೆಲಸಗಳನ್ನು ಮಾಡುವುದು. ಸಮುದ್ರದಲ್ಲಿ ಸಾಗಿದ ನೌಕೆಯು ಅದರ ಅಲೆಗಳ ಓಲಾಟಕ್ಕೆ ಸಿಕ್ಕು ಅತ್ತಿತ್ತ ಓಲಾಡುವಂತೆ. ಇಂದ್ರಿಯಗಳು, ಇಂದ್ರಿಯಾರ್ಥಗಳು ಇವುಗಳ ಬಲೆಯಲ್ಲಿ ಸಿಕ್ಕ ಬುದ್ಧಿಯು ಅತ್ತಿತ್ತ ಹೊಯ್ದಾಡುವುದು ಸಹಜವಿದೆ. ಇಂದ್ರಿಯಗಳ ಬಹಿರ್ಮುಖ ವೃತ್ತಿಯ ಮೂಲಕ ಮನಸ್ಸಿನಲ್ಲಿ ಅನೇಕ ಭಾವನೆಗಳು, ಕಾಮನೆಗಳು, ಆಕಾಂಕ್ಷೆಗಳು ಏಳುತ್ತಲೇ ಇರುತ್ತವೆ. ಮನದ ಭಾವನೆಗಳ ಹಿಡಿತದಲ್ಲಿ ಸಿಕ್ಕ ಬುದ್ಧಿಯು ಅವುಗಳಂತೆ ವರ್ತಿಸತೊಡಗುತ್ತದೆ. ಆಗ ಬುದ್ಧಿಯಲ್ಲಿನ ಸಮತ್ವ, ಶಾಂತ ವ್ಯವಸ್ಥೆ ಕಳೆದುಹೋಗುತ್ತದೆ. ಭಾವನೆಗಳ ಓಘಕ್ಕೆ ಸಿಲುಕಿದ ಬುದ್ಧಿಯು ತನ್ನ ಸ್ವ–ಸಂಯಮನವನ್ನು ಕಳೆದುಕೊಳ್ಳುತ್ತದೆ. ಹೀಗೆ ಅಧೋಮುಖಿಯಾದ ಬುದ್ಧಿಯಿಂದಾಗ ಪುರುಷನು(ಆತ್ಮವು) ಪ್ರಕೃತಿಯ ಗುಣಗಳ ಗೊಂದಲದ ಆಟದಲ್ಲಿ ಸಿಕ್ಕುಬೀಳುತ್ತಾನೆ. ಆಗ ಅಜ್ಞಾನಮಯ ಮತ್ತು ಅವಾಸ್ತವ ಜೀವನವನ್ನು ನಡೆಸಬೇಕಾಗುವುದು. ದುಃಖ, ಕ್ರೋಧ, ಆಸಕ್ತಿ, ಭೋಗ ಇವುಗಳ ತಳಮಳದಲ್ಲಿ ಸಿಕ್ಕಿಬೀಳುತ್ತಾನೆ. ಸ್ವಲ್ಪದರಲ್ಲಿ ಹೇಳಬೇಕೆಂದರೆ, ಬುದ್ಧಿಯು ಅಧೋಮುಖ ಮತ್ತು ಬಹಿರ್ಮುಖವಾದರೆ, ಸಾಮಾನ್ಯ, ಅಜ್ಞಾನ, ಅಸಂಯಮ, ವಿವೇಕಹೀನ, ಅಶಾಂತ ಜೀವನವನ್ನು ಮಾನವನು ನಡೆಸಬೇಕಾಗುವುದು. ವೇದವಾದರತರಾದ ಕರ್ಮಠರು ಹೇಳುವಂತೆ ಇಂದ್ರಿಯ ಸುಖವನ್ನೇ ಕರ್ಮದ ಪ್ರೇರಕವೆಂದು ಮನ್ನಿಸಿದರೆ, ಹಾಗೂ ಅದೇ ರೀತಿ ಇಂದ್ರಿಯ ಸುಖ ಪ್ರಾಪ್ತಿಯೇ ಪರಮ ಧ್ಯೇಯವೆಂದು ಮನ್ನಿಸುವ ವಾದವನ್ನು ಎತ್ತಿ ಹಿಡಿದರೆ ನಾವು ತಪ್ಪು ದಾರಿ ತುಳಿಯುತ್ತೇವೆ. ಈ ಎರಡೂ ವಾದಗಳು ಬೇರೆ ಬೇರೆ ಎಂಬಂತೆ ತೋರಿದರೂ ನಿಜವಾಗಿ ಒಂದೇ ಆಗಿವೆ. ಇವೆರಡೂ ನಮ್ಮನ್ನು ಅಡ್ಡದಾರಿಗೆಳೆಸುತ್ತವೆ. ಆಂತರಿಕ, ಆತ್ಮಗತ ವಿಷಯ ನಿರಪೇಕ್ಷ ಆತ್ಮ ಸುಖವೇ ನಮ್ಮ ನಿಜವಾದ ಧ್ಯೇಯವಾಗಿರಬೇಕು. ನಮ್ಮ ಶಾಂತಿಯ ಮತ್ತು ಮುಕ್ತಿಯ ಉಚ್ಚ

ವ್ಯಾಪಕ ಅವಸ್ಥೆ ಎಂದರೆ ಈ ವಿಷಯ ನಿರಪೇಕ್ಷ ಆತ್ಮ ಸುಖವೇ ನಮ್ಮ ನಿಜವಾದ ಧ್ಯೇಯವಾಗಿರಬೇಕು. ಶಾಂತಿ ಮತ್ತು ಮುಕ್ತಿಯ ಉಚ್ಚ ವ್ಯಾಪಕ ಅವಸ್ಥೆ ಎಂದರೆ ಈ ವಿಷಯ ನಿರಪೇಕ್ಷ ಆತ್ಮ ಸುಖದ ಅವಸ್ಥೆಯೇ ಆಗಿದೆ.

ಶ್ರೀ ಕೃಷ್ಣನು ಬಾಹ್ಯ ಸನ್ಯಾಸವನ್ನು ಹೇಳುವುದಿಲ್ಲ; ವಿಷಯಗಳನ್ನು ಭೌತಿಕವಾಗಿ ತ್ಯಾಗ ಮಾಡಬೇಕೆಂದು ನಾನೇನೂ ಹೇಳುವುದಿಲ್ಲ ಎಂದು ಸ್ವತಃ ಅವನೇ ಸ್ಪಷ್ಟಪಡಿಸುತ್ತಾನೆ. ಇಲ್ಲಿ ತಪ್ಪರ್ಥ ಮಾಡಿಕೊಳ್ಳುವ ಸಂಭವ ಅತಿ ಹೆಚ್ಚಾಗಿ ಇರುವುದರಿಂದ ಅದನ್ನು ಮೊದಲೇ ಸರಿಯಾಗಿ ತಿಳಿ ಹೇಳಿಬಿಡುತ್ತಾನೆ. "ಸಾಂಖ್ಯರು ಹೇಳುವ ಕರ್ಮ ತ್ಯಾಗವಾಗಲಿ, ಸನ್ಯಾಸಿಗಳ ತೀವ್ರ ಸನ್ಯಾಸ, ಉಪವಾಸ ವ್ರತ, ದೇಹದಂಡನೆ, ಆಹಾರವನ್ನು ಕೂಡ ತ್ಯಾಗ ಮಾಡುವುದು ಇಂಥ ಕರ್ಮಗಳನ್ನು ನಾನು ಹೇಳುವುದಿಲ್ಲ. ನಾನು ಹೇಳುವುದು ಆಂತರಿಕ ಸನ್ಯಾಸವನ್ನು, ಕಾಮನೆಗಳ ತ್ಯಾಗವನ್ನು. ಶರೀರ ಧಾರಣ ಮಾಡಿದ ಆತ್ಮವು ಭೌತಿಕ ಕ್ರಿಯೆಗಳಿಗಾಗಿ ಶರೀರವನ್ನೇ ಅವಲಂಬಿಸಿರುವುದರಿಂದ ಅದನ್ನು ಆಹಾರೋಪಭೋಗದಿಂದ ರಕ್ಷಿಸಲೇಬೇಕು. ಆಹಾರವನ್ನು ದೂರೀಕರಿಸಿದ ಮಾತ್ರಕ್ಕೆ ಅದು ಕೇವಲ ಭೌತಿಕ ವಿಷಯಗಳ ಜೊತೆ ಸಂಪರ್ಕವನ್ನು ದೂರಿಕರಿಸುವುದೇ ಹೊರತು, ವಿಷಯದ ಆಂತರಿಕ ಸಂಬಂಧದ, ಅಪಾಯವನ್ನುಂಟು ಮಾಡಬಲ್ಲ ಸಾಧ್ಯತೆಯನ್ನು ದೂರ ಮಾಡುವುದಿಲ್ಲ. ವಿಷಯಗಳಲ್ಲಿನ ಆನಂದೋಪಭೋಗದ ಸಂವೇದನೆಯನ್ನದು ಉಳಿಸಿಕೊಳ್ಳುವುದು. ರಸ/ಬಯಕೆ, ವಿಕರ್ಷಣೆ ಇವೆಲ್ಲ ಉಳಿಯುವವು. ರಸವು ಎರಡು ಮುಖಗಳುಳ್ಳದ್ದಾಗಿದೆ. ಆತ್ಮವು ಆಂತರಿಕವಾಗಿ ನೋವನುಭವಿಸುವುದರಿಂದ, ಸಂವೇದನಾತ್ಮಕ ಪ್ರತಿಕ್ರಿಯೆಯಿಂದ ಬಾಧಿತವಾಗದೇ ಬಾಹ್ಯ ಸಂಪರ್ಕವನ್ನು ಸಹಿಸಿಕೊಳ್ಳಬಲ್ಲ ಸಾಮರ್ಥ್ಯ ಹೊಂದಿದೆ. ಅನ್ಯಥಾ ಅದು ನಿವೃತ್ತಿಯಾಗಿಬಿಡುವುದು, ವಿಷಯಗಳ ನಿವೃತ್ತಿಯಾಗುವುದು, ವಿಷಯಾವಿನಿವರ್ತಂತೇ. ಆದರೆ ಆತ್ಮನಿಷ್ಠ ನಿವೃತ್ತಿ ಬೇಕು ಅಂದರೆ ರಸದ ಸಂವೇದನೆಯಾಗದೇ ಇರುವ ರಸ ನಿವೃತ್ತಿಯಾಗಿ ಮಾರ್ಪಡುವುದು. ಇದೇ ಆತ್ಮ ಪ್ರಭುತ್ವದ ಲಕ್ಷಣವಾಗಿದೆ. ಆದರೆ ವಿಷಯಗಳ ಜೊತೆ ನಿಷ್ಕಾಮ ಸಂಪರ್ಕ ಹೇಗೆ ಸಾಧ್ಯ? ಇಂದ್ರಿಯಗಳನ್ನೇನು ಸಂವೇದನಾರಾಹಿತ್ಯ ದೃಷ್ಟಿಯಿಂದಲೇ ಸ್ವೀಕರಿಸುವುದೇ? ಹೌದು, ಸಾಧ್ಯವಿದೆ, ಪರಮೋಚ್ಚ ದರ್ಶನದಿಂದ, ಪರಮ ಪುರುಷನ ಸಾಕ್ಷಾತ್ಕಾರದಿಂದ, ಯೋಗಸ್ಥವಾಗಿ ಜೀವನ ನಡೆಸುವುದರಿಂದ, ವೈಯಕ್ತಿಕವಾಗಿ ಆ ಶ್ರೇಷ್ಠ "ತತ್"ದ ಜೊತೆ ಒಂದಾಗುವುದರಿಂದ, ಬುದ್ಧಿಯೋಗದ ಮೂಲಕ ಸಾಧ್ಯವಾಗುವುದು. ಆತ್ಮವು

ಏಕವಾಗಿದೆ. ಶಾಂತವಾಗಿದೆ. ತನ್ನದೇ ಆದ ಆನಂದದಲ್ಲಿ ನಿಮಗ್ನವಾಗಿರುವುದು, ಅದರ ಆನಂದದಲ್ಲಿ ದ್ವೈತವೆಂಬುದಿಲ್ಲ. ಈ ಶ್ರೇಷ್ಠ ಆತ್ಮತತ್ವವು ನಮ್ಮಲ್ಲಿ ಸಿದ್ಧಿಸಿತೆಂದರೆ, ನಾವು ಅದರ ಮೇಲೆ ನಮ್ಮ ಮನವನ್ನು ಕೇಂದ್ರೀಕರಿಸಿದರೆ, ಸಂಕಲ್ಪವನ್ನು ಅದರ ಮೇಲೆಯೇ ಏಕಾಗ್ರಗೊಳಿಸಿದರೆ, ವಿಷಯಾಧಾರಿತ ಆನಂದ ಭೋಗಗಳ ಆಶೆಗೆ ಜಾಣೆಯೇ ಉಳಿಯುವುದಿಲ್ಲ. ಅದು ಬೇಕು–ಇದು ಬೇಡ ಅನ್ನುವ ಆಕರ್ಷಣೆ ವಿಕರ್ಷಣೆಗಳಿಗೆ ಸ್ಥಳವೇ ಇರುವುದಿಲ್ಲ. ಇದು ನಿಜವಾದ ಮುಕ್ತಿಯ ದಾರಿ.

ಆತ್ಮಸಂಯಮನ, ಆತ್ಮ ನಿಯಂತ್ರಣಗಳು ಸುಲಭವಲ್ಲ. ಸಾಮಾನ್ಯವಾಗಿ ಎಲ್ಲರಿಗೂ ಗೊತ್ತು. ತಮ್ಮ ಮೇಲೆ ಸ್ವಲ್ಪ ಮಟ್ಟಿಗಾದರೂ ನಿಯಂತ್ರಣ ಸಾಧಿಸಲೇಬೇಕೆಂಬುದನ್ನು ಎಲ್ಲರೂ ಬಲ್ಲರು. ಇಂದ್ರಿಯಗಳ ಮೇಲೆ ನಿಯಂತ್ರಣವಿರಲಿ, ಹಿಡಿತವಿರಲಿ ಎಂಬುದೇ ಸಾಮಾನ್ಯ ಉಪದೇಶ, ನಾವಿದನ್ನೇ ಎಲ್ಲೆಡೆ ಕೇಳುತ್ತೇವೆ. ಆದರೆ ಈ ಉಪದೇಶವು ಅಪರಿಪೂರ್ಣವಾಗಿರುತ್ತದೆ. ಅದರ ಅನುಷ್ಠಾನವೂ ಅಸಮರ್ಪಕವಾಗಿರುತ್ತದೆ. ಸಾಮಾನ್ಯವಾಗಿ ಸ್ಪಷ್ಟವಾದ, ವಿಶೇಷಪೂರ್ಣ ದೃಷ್ಟಿಯುಳ್ಳ ಸಾಧುಪುರುಷನಂಥವನೂ ಸಹ ಸಂಪೂರ್ಣ ಆತ್ಮಪ್ರಭುತ್ವ ಸಾಧಿಸಲು ಅವಸರಿಸಿ, ಏನೇನೋ ಉಪಕ್ರಮಗಳನ್ನು ಅನುಷ್ಠಾನ ಮಾಡಿ, ಕಷ್ಟಪಟ್ಟರೂ ಸಹ ಕೆಲವೊಮ್ಮೆ ಇಂದ್ರಿಯಗಳ ಲೋಲುಪತೆಗೆ ಬಲಿಯಾಗಿರುವುದನ್ನು ನಾವು ಬಲ್ಲೆವು. ಏಕೆಂದರೆ, ಸಾಮಾನ್ಯವಾಗಿ ಮನಸ್ಸು ತಾನಾಗಿ ಇಂದ್ರಿಯಗಳಿಗೆ ಶರಣಾಗುತ್ತದೆ. ಅದು ವಿಷಯಗಳ್ನು ಸಾಮಾನ್ಯವಾಗಿ ಯಾವಾಗಲೂ ಆಂತರಿಕ ಬಯಕೆಯಿಂದಲೇ ನೋಡುತ್ತದೆ. ಅವುಗಳಲ್ಲಿ ತೊಡಗಿಕೊಳ್ಳುತ್ತದೆ. ಅವುಗಳ ಮೇಲೆ ಸಂಪೂರ್ಣ ಲಕ್ಷ್ಯವಿರಿಸಿ, ಅವುಗಳಲ್ಲಿಯೇ ಮಗ್ನವಾಗುತ್ತದೆ. ಬುದ್ಧಿ ಮತ್ತು ಸಂಕಲ್ಪಗಳು ಆ ವಸ್ತುವಿನಲ್ಲೇ ಕೇಂದ್ರೀಕೃತ–ವಾಗಿಬಿಡುತ್ತವೆ. ಈ ರೀತಿಯ ಸಂಗದಿಂದ ಕಾಮ(ಬಯಕೆ) ಉತ್ಪನ್ನವಾಗುತ್ತದೆ. ಕಾಮದಿಂದಾಗಿ ಕ್ರೋಧ, ಆವೇಶ, ನಿರಾಶೆ ಇವೆಲ್ಲ ಉತ್ಪನ್ನವಾಗುತ್ತವೆ. ಇದರಿಂದಾಗಿ ಸಂಮೋಹ, ಬುದ್ಧಿಯು ಸಂಯೋಹಿತವಾಗುತ್ತದೆ. ಇದರಿಂದಾಗಿ ಶಾಂತ ಚಿತ್ತದಿಂದ ಕುಳಿತು ವಿವೇಚನೆ ಮಾಡುವ ಶಕ್ತಿಯೇ ಕಳೆದು ಹೋಗುತ್ತದೆ. ಆಗ ಯುಕ್ತಾಯುಕ್ತತೆಯ ಸ್ಮೃತಿಯೇ ನಾಶವಾಗುತ್ತದೆ, ಆತ್ಮ ವಿಸ್ಮೃತಿ ಸಂಭವಿಸುತ್ತದೆ. ಇದರಿಂದ ಬುದ್ಧಿ ನಾಶವಾಗುತ್ತದೆ. ಬುದ್ಧಿನಾಶದಿಂದ ಸರ್ವನಾಶ ಸಂಭವಿಸುತ್ತದೆ. ಇದನ್ನು ಆರಂಭದಲ್ಲೇ ನಿಯಂತ್ರಿಸಬೇಕು. ಎಲ್ಲ ಇಂದ್ರಿಯಗಳನ್ನು ಮೊದಲೇ

ಸಂಯಮನದಲ್ಲಿರಿಸಬೇಕು. ಇಂದ್ರಿಯಗಳ ಮೇಲೆ ಸಂಪೂರ್ಣ ಹಿಡಿತ ಬಂದಾಗ, ಆತ್ಮ ನಿಯಂತ್ರಣ ಬಂದಾಗಲೇ ಬುದ್ಧಿಯು ಸ್ವಸ್ಥವಾಗಿ ಕುಳಿತು, ಶಾಂತವಾಗಿ ತನ್ನ ಲಕ್ಷ್ಯದೆಡೆಗೆ ಧಾವಿಸಬಲ್ಲದು.

ಇದನ್ನು ಕೇವಲ ಬುದ್ಧಿಯ ಮೂಲಕ, ಕೇವಲ ಮಾನಸಿಕ ಆತ್ಮ–ನಿಯಂತ್ರಣದ ಮೂಲಕ ಮಾಡಲು ಸಾಧ್ಯವಿಲ್ಲ. ಇದನ್ನು ಯೋಗದ ಮೂಲಕ ಮಾತ್ರ ಮಾಡಲು ಸಾಧ್ಯ. ಮನೋ ಬುದ್ಧಿಗಳಿಗಿಂತ ಹಿರಿದಾದ ತತ್ವದ ಜೊತೆ ಸಂಯೋಗ ಸಾಧಿಸುವುದರಿಂದ ಮಾತ್ರ ಇದನ್ನು ಮಾಡಲು ಸಾಧ್ಯ. ಏಕೆಂದರೆ ಆ ತತ್ವದಲ್ಲಿ ಶಾಂತಿ ಮತ್ತು ಆತ್ಮಸಂಯಮನ ಸಹಜವಾಗಿ ಸ್ವಯಂ ಸಿದ್ಧವಾಗಿರುತ್ತವೆ ಮತ್ತು ಯೋಗವು ಸಿದ್ಧಿಸುವುದು ಎಲ್ಲವನ್ನೂ ಪರಮಾತ್ಮನಿಗೆ "ನನಗೆ" ನಿವೇದಿಸುವುದರಿಂದ, ಭಕ್ತಿಯಿಂದ ಅರ್ಪಿಸುವುದರ ಮೂಲಕ ಮಾತ್ರ ಎಂದು ಶ್ರೀ ಕೃಷ್ಣ ಹೇಳುತ್ತಾನೆ. ಏಕೆಂದರೆ ಮುಕ್ತಿದಾಯಕನು ನಮ್ಮೊಳಗೆಯೇ ಇದ್ದಾನೆ. ಆದರೆ ಅವನಿರುವುದು ಮನದಲ್ಲಲ್ಲ. ಬುದ್ಧಿಯಲ್ಲಲ್ಲ, ನಮ್ಮ ವೈಯಕ್ತಿಕ ಸಂಕಲ್ಪದಲ್ಲಿಯೂ ಅಲ್ಲ, ಇವೆಲ್ಲ ಕೇವಲ ಉಪಕರಣಗಳು ಮಾತ್ರ. ಶ್ರೀ ಕೃಷ್ಣನು ಗೀತೆಯ ಕೊನೆಯಲ್ಲಿ ಹೇಳುವಂತೆ, ಪರಮ ಪ್ರಭುವಾದ ಭಗವಂತನಲ್ಲಿ ನಾವು ಸಂಪೂರ್ಣ ಶರಣಾಗತಿ ಮಾಡಬೇಕು. ಅದಕ್ಕಾಗಿ ನಾವು ಮೊದಲು ಅವನನ್ನು ನಮ್ಮ ಪರಮ ಧ್ಯೇಯವೆಂದು ಗುರುತಿಸಿಕೊಳ್ಳಬೇಕು, ಅವನ ಜೊತೆ ಆತ್ಮಸಂಪರ್ಕ ಸಿದ್ಧಿಸಿಕೊಳ್ಳಬೇಕು. "ಯುಕ್ತ ಆಸೀತ ಮತ್ಪರಃ" (2.6) ನನ್ನಲ್ಲಿ ಯೋಗಯುಕ್ತನಾಗಿ, ಸ್ಥಿರವಾಗಿರು ಎಂದು ಹೇಳಿದುದರ ಅರ್ಥ ಇದೇ. ಈ ಮೂರು ಶಬ್ದಗಳಲ್ಲಿ "ಯುಕ್ತ ಆಸೀತ ಮತ್ಪರಃ" ಪರಮ ರಹಸ್ಯವನ್ನು ಬೀಜ ರೂಪದಲ್ಲಿ ತುಂಬಿಡಲಾಗಿದೆ. ಇದರ ವಿಸ್ತೃತ ವಿವೇಚನೆಯನ್ನು ನಾವು ಇನ್ನೂ ಮಾಡಬೇಕಿದೆ.

ಇಂಥ ಯೋಗ ಸಿದ್ಧಿಸಿದರೆ, ಅಂದರೆ ಬುದ್ಧಿಯು ಆತ್ಮಸ್ಥವಾಗಿ, "ಮತ್ಪರನಾಗಿ" ಇರಲು ಸಾಧ್ಯವಾದರೆ, ಆಗ ವಿಷಯಗಳ ಮಧ್ಯ ಇದ್ದರೂ ಇಂದ್ರಿಯಗಳನ್ನು ಆತ್ಮವಶದಲ್ಲಿರಿಸಿಕೊಳ್ಳಬಹುದು. ಇಂದ್ರಿಯಗಳ ಒತ್ತಡವು ಮನಸ್ಸಿನ ಮೇಲೆ ಆಗುವುದಿಲ್ಲ. ವಿಷಯಗಳ ಸಂಪರ್ಕ ಬಂದರೂ ಸಹ ರಾಗ ದ್ವೇಷಾದಿ ಪ್ರತಿಕ್ರಿಯೆಗಳು ಉತ್ಪನ್ನವಾಗುವುದಿಲ್ಲ. ಏಕೆಂದರೆ ಆಗ ನಮ್ಮ ಆತ್ಮವು ಸರ್ವಶ್ರೇಷ್ಠ ಪುರುಷನಾದ, ಈಶ್ವರನ ಆಶ್ರಯದಲ್ಲಿರುತ್ತ, ಅವನ ಅನುಜ್ಞೆಯ ಮೇರೆಗೆ ಕಾರ್ಯ ಮಾಡುತ್ತಿರುತ್ತದೆ. ಇಂದ್ರಿಯಗಳು ಪ್ರತಿಕ್ರಿಯಾ ಶೂನ್ಯವಾದರೆ,

ರಾಗದ್ವೇಷಾದಿ ಪ್ರತಿಕ್ರಿಯೆಗಳಿಂದ ಸಂಪೂರ್ಣ ಮುಕ್ತವಾದರೆ ವಾಸನಾ, ಘೃಣಾ, ಜುಗುಪ್ಸೆ, ಮುಂತಾದ ಯಾವ ದ್ವಂದ್ವಗಳೂ ಬಾಧಿಸುವುದಿಲ್ಲ. ಆಗ ಆತ್ಮನಿಗೆ (ಜೀವನಿಗೆ) ನಿರ್ಮಲ, ಸುಖಮಯ ಶಾಂತಿ, ಆತ್ಮ ಪ್ರಸಾದ, ಸುಸ್ಥಿರ ಪ್ರಸನ್ನತೆ ಲಭಿಸುವುದು. ನಿಸ್ಸಂದಿಗ್ಧ ನಿರ್ಮಲ ಆತ್ಮ ಶಾಂತಿಯು ಆತ್ಮ ಸುಖದ ಜನನಿ ಇದ್ದಂತೆ. ಈ ಶಾಂತಿಮಯ ಆತ್ಮವನ್ನು ಎಂಥದೇ ದುಃಖವಾದರೂ ಬಾಧಿಸಲಾರದು. ಈ ತೆರನಾದ ಆತ್ಮ ಶಾಂತಿಯಲ್ಲಿ ಬುದ್ಧಿಯು ಬಹು ಬೇಗನೇ ಸ್ಥಿತವಾಗುತ್ತದೆ. ದುಃಖವು ಸಂಪೂರ್ಣತಃ ನಷ್ಟವಾಗುತ್ತದೆ. ಬುದ್ಧಿಯು ಆತ್ಮಜ್ಞವಾಗಿ (ಆತ್ಮವನ್ನರಿತುಕೊಂಡು) ಆತ್ಮಸ್ಥವಾಗುವುದನ್ನು, ಆತ್ಮ ಜ್ಞಾನದಲ್ಲಿರುವ ಸ್ಥಿರ, ನಿಷ್ಕಾಮ, ದುಃಖರಹಿತ ಬುದ್ಧಿಯ ಧೃತಿಯನ್ನು ಗೀತೆಯು ಸಮಾಧಿ ಎಂದು ಕರೆಯುತ್ತದೆ.

ಸಮಾಧಿಸ್ಥನಾಗಿರುವ ವ್ಯಕ್ತಿಗೆ ವಸ್ತು, ವಿಷಯಗಳ ಜ್ಞಾನ ಇರುವುದಿಲ್ಲ. ಪರಿಸರದ ಮರೆವು ಸಂಭವಿಸುತ್ತದೆ ಎಂದು ಸಾಮಾನ್ಯ ಜನರಲ್ಲಿ ಬಹು ತಪ್ಪು ತಿಳುವಳಿಕೆ ಬೇರೂರಿದೆ; ಅವನ ಶರೀರವನ್ನು ಬೆಂಕಿಯಿಂದ ಸುಟ್ಟರೂ ಅವನಿಗೆ ತಿಳಿಯುವುದಿಲ್ಲ. ಎಷ್ಟೇ ಪೀಡಿಸಿದರೂ, ಹಿಂಸಿಸಿದರೂ ಅವನು ಶರೀರ ಪ್ರಜ್ಞೆಗೆ ಮರಳುವುದಿಲ್ಲ ಎಂಬ ಕಲ್ಪನೆ ಬಹು ಜನರಲ್ಲಿ ಅದು ಹೇಗೂ ಬೇರೂರಿದೆ. ಆದರೆ ಇದು ತಪ್ಪು; ಇದು ಸಮಾಧಿಸ್ಥ ಪುರುಷನ ಲಕ್ಷಣವಲ್ಲ. ಶರೀರ ಮನಸ್ಸುಗಳ ಪ್ರಜ್ಞೆಯೇ ಲುಪ್ತವಾಗುವುದು ಚೇತನದ ಒಂದು ಸುಷುಪ್ತಿಯಂಥ ಗಾಢ ಮರೆವಿನ ಸ್ಥಿತಿಯೇ ಹೊರತು ಸಮಾಧಿ ಸ್ಥಿತಿಯ ಲಕ್ಷಣವಲ್ಲ. ಗೀತೆಯ ಪ್ರಕಾರ ಸಮಾಧಿಯ ಒರೆಗಲ್ಲು ಹೀಗಿದೆ; ಸಮಾಧಿಸ್ಥನಾದವನಲ್ಲಿ ಯಾವ ಕಾಮನೆಗಳೂ, ಆಶೆಗಳು ಇರುವುದಿಲ್ಲ. ಯಾವ ಆಶೆ, ಆಕರ್ಷಣೆ, ಒತ್ತಡ, ಪ್ರಭಾವ ಅವನ ಮನಸ್ಸನ್ನು ಮುಟ್ಟದು. ಅದೊಂದು ಆಂತರಿಕ ಸ್ಥಿತಿ, ಆಂತರಿಕವಾಗಿ ವಿಷಯ ಮುಕ್ತಿಯಾಗಿರುವುದರಿಂದ ಇಂಥ ನಿರ್ಲಿಪ್ತ ಸ್ಥಿತಿ ಕಂಡುಬರುತ್ತದೆ. ಆತ್ಮದ ಆನಂದ ಗುಣವು ತಾನೇ ತಾನಾಗಿ ಕೇಂದ್ರಿಕೃತವಾಗಿರುತ್ತದೆ. ಮನಸ್ಸು–ಬುದ್ಧಿ–ಸಂಕಲ್ಪಗಳಲ್ಲಿ ಹೊಯ್ದಾಟವಿರುವುದಿಲ್ಲ, ಅದು ಸ್ಥಿರವಾಗಿರುತ್ತದೆ. ಎಲ್ಲ ಆಕರ್ಷಣೆ ವಿಕರ್ಷಣೆಗಳನ್ನು ಮೀರಿ ನಿಂತಿರುತ್ತದೆ. ಬಾಹ್ಯ ಜೀವನದಲ್ಲಿ ಕಷ್ಟಗಳ ತಾಪ, ಬಿರುಗಾಳಿಗಳನ್ನು ಮೀರಿ ಅದು ಮೇಲೆ ನಿಂತಿರುತ್ತದೆ. ಮನಸ್ಸು ಬಾಹ್ಯ ಕೆಲಸಗಳಲ್ಲಿ ಪ್ರವರ್ತಿಸುವಾಗಲೂ ಅದು ಅಂತರ್ಮುಖಿಯಾಗಿಯೇ ಇರುತ್ತದೆ. ಬಾಹ್ಯದ ವ್ಯವಹಾರದಲ್ಲಿ ತೊಡಗಿರುವಾಗಲೂ ಅವನ ಬುದ್ಧಿಯು ಇಂದ್ರಿಯಗಳಿಂದ

ಪರಾವೃತವಾಗಿರುತ್ತದೆ. ಅದು ಸಂಪೂರ್ಣವಾಗಿ ಪರಮಾತ್ಮನಲ್ಲಿ ಕೇಂದ್ರಿತವಾಗಿರುತ್ತದೆ. ಜನರಿಗೇನೋ ಅವನು ಬಾಹ್ಯ ಜಗತ್ತಿನ ವ್ಯವಹಾರದಲ್ಲಿ ಇದ್ದಾನೆ ಎಂದು ತೋರಿದರೂ ಅಂತರಂಗದಲ್ಲಿ ಅವನು ಅವುಗಳಿಂದ ಮುಕ್ತನಾಗಿರುತ್ತಾನೆ. ಆಗ ಅರ್ಜುನನಿಗೆ ಸಾಮಾನ್ಯ ಜನರಂತೆ ಸಂದೇಹ ಬರುತ್ತದೆ ಅವನು ಶ್ರೀಕೃಷ್ಣನನ್ನು ಪ್ರಶ್ನಿಸುತ್ತಾನೆ: ಹಾಗಾದರೆ ಅಂಥ ಸ್ಥಿತ ಬುದ್ಧಿಯ, ಸಮಾಧಿಸ್ಥನಾದ ಪುರುಷನ ಲಕ್ಷಣಗಳೇನು? ಅವನು ಹೇಗೆ ಮಾತನಾಡುತ್ತಾನೆ? ಅವನ ವರ್ತನೆ ಹೇಗಿರುತ್ತದೆ? ಶ್ರೀ ಕೃಷ್ಣನು ಸ್ಪಷ್ಟವಾಗಿ ಹೇಳುತ್ತಾನೆ: ಸಮಾಧಿಸ್ಥನಾದ ಪುರುಷನ ಲಕ್ಷಣಗಳನ್ನು ಇದಮಿತ್ಥಂ ಎಂದು ಹೇಳಲು ಬರುವುದಿಲ್ಲ. ಅದರ ಒರೆಗಲ್ಲು ಆಂತರಿಕವಾಗಿರುವುದರಿಂದ, ಬಾಹ್ಯ ಲಕ್ಷಣಗಳನ್ನು ಹೇಳಿ ಪ್ರಯೋಜನವಿಲ್ಲ. ಏನೇನೋ ಮಾನಸಿಕ, ಪರಾಮಾನಸಿಕ ಲಕ್ಷಣಗಳನ್ನು ಹೇಳಬಹುದು. ಆದರೆ ಅವೆಲ್ಲವುಗಳನ್ನು ಅವನು ಮೀರಿರುತ್ತಾನೆ. ಮುಕ್ತ ಆತ್ಮನ ಏಕೈಕ ಪ್ರಮುಖ ಲಕ್ಷಣವೆಂದರೆ ಸಮತ್ವ. ಈ ಸಮತ್ವದ ಲಕ್ಷಣವನ್ನು ವಿವರಿಸಲು ಬರುವುದಿಲ್ಲ. ಏಕೆಂದರೆ ಅದು ಆತ್ಮನಿಷ್ಠ ಅನುಭವವಾಗಿದೆ. ಯಾವ ಪುರುಷನ ಬುದ್ಧಿಯು ಸ್ಥಿರತೆಯಲ್ಲಿ ನೆಲೆಗೊಂಡಿದೆಯೋ ಅವನ ಮನಸ್ಸು ದುಃಖದ ಆಘಾತಗಳಿಂದ ಉದ್ವೇಗಗೊಳ್ಳುವುದಿಲ್ಲ. ಅವನಲ್ಲಿ ಸುಖದ ಕಾಮನೆ ಇರುವುದಿಲ್ಲ. ಇಷ್ಟ, ಅನಿಷ್ಟ, ಭಯ, ಕ್ರೋಧ ಮುಂತಾದ ಯಾವ ವಿಕಾರಗಳೂ ಅವನಲ್ಲಿ ಇರುವುದಿಲ್ಲ. (2.46) ಅವನು ಪ್ರಕೃತಿಯ ತ್ರಿಗುಣ ವ್ಯಾಪಾರಗಳಿಂದ ಮುಕ್ತನಾಗಿರುತ್ತಾನೆ. ನಿರ್ದ್ವಂದ್ವನಾಗಿ ತನ್ನ ಆತ್ಮ ಸತ್ವದಲ್ಲಿ ಸ್ಥಿತನಾಗಿರುತ್ತಾನೆ. ಅವನು ನಿತ್ಯ ಸತ್ವಸ್ಥನು – ಇರುವುದನ್ನು ಕಾಯ್ದುಕೊಳ್ಳಬೇಕು, ಇಲ್ಲದನ್ನು ಪಡೆಯಬೇಕೆಂಬ ಮನಃಸ್ಥಿತಿ ಅವನಿಂದ ಬಹುದೂರ. ಅವನು ನಿರ್ಯೋಗಕ್ಷೇಮ ಆತ್ಮವಾನ್ (2.45) ಮುಕ್ತಾತ್ಮನಾದವನಿಗೆ ಯೋಗಕ್ಷೇಮದ ಚಿಂತೆ ಎಲ್ಲಿಯದು? ನಾವು ಆತ್ಮವನ್ನು ಒಮ್ಮೆ ಪಡೆದೆವೆಂದರೆ, ನಾವು ಸರ್ವಸ್ವವನ್ನೂ ಪಡೆದಂತೆಯೇ.

ಆದರೂ ಅವನು, ಸ್ಥಿತಪ್ರಜ್ಞನಾದ ಸಮಾಧಿಸ್ಥ ಪುರುಷನು, ಕರ್ಮಗಳಿಂದ ವಿಮುಖನೇನೂ ಆಗುವುದಿಲ್ಲ. ಅವನು ಕರ್ತವ್ಯ ಕರ್ಮಗಳನ್ನು ಸಂಪೂರ್ಣ ತ್ಯಜಿಸಿಬಿಡುವುದಿಲ್ಲ. ಹೀಗೆ ಹೇಳುವಲ್ಲಿಯೇ ಗೀತೆಯ ನಿಜವಾದ ಸತ್ವ, ಅದರ ಸಾಮರ್ಥ್ಯ ಅಡಗಿದೆ. ಮುಕ್ತ ಆತ್ಮನ ಸ್ವಸ್ಥ ಅವಸ್ಥೆಯು ಪ್ರಕೃತಿಯ ವ್ಯವಹಾರಗಳ ಆಚೆಗಿರುತ್ತದೆ. ಪ್ರಕೃತಿಯ ಮೂಲಕ ನಡೆಯುವ ಕ್ರಿಯೆಗಳು ಅಲ್ಲಿ ಶೂನ್ಯವಾಗಿರುತ್ತವೆ. ಇಷ್ಟಿದ್ದರೂ, ಗೀತೆಯು ಅಂಥ ಮುಕ್ತಾತ್ಮನು ಕರ್ಮ

ಮಾಡುತ್ತ ಇರುವುದರಲ್ಲಿ ದೋಷವೇನೂ ಇಲ್ಲ ಎಂದು ಹೇಳಿ, ಅಲ್ಲದೇ ನಿಲ್ಲದೇ ಅವನು ಕರ್ಮ ಮಾಡುತ್ತಲೇ ಇರಬೇಕು ಎಂದು ಆದೇಶಿಸುತ್ತದೆ. "ನೀನು ಕರ್ಮ ಮಾಡಲೇಬೇಕು, ನಿನಗಿರುವ ಅಧಿಕಾರ ಕರ್ಮ ಮಾಡುವುದರಲ್ಲಿ ಮಾತ್ರ. ಕರ್ಮಫಲವನ್ನುದ್ದೇಶಿಸಿ ನೀನು ಕರ್ಮ ಮಾಡಬಾರದು. ಕರ್ಮತ್ಯಾಗ ಮಾಡುವ ಆಗ್ರಹವನ್ನೆಂತೂ ಯಾವತ್ತಿಗೂ ಧರಿಸಬಾರದು" (2.47) ಕರ್ಮಗಳನ್ನು ತ್ರಿಗುಣ ರಹಿತನಾಗಿ ಮಾಡಬೇಕು, ವೇದವಾದಿಗಳು ಹೇಳುವ ವಾಸನಾಯುಕ್ತ ಕರ್ಮವನ್ನಲ್ಲ. ವ್ಯವಹಾರಿಕ ರಾಜಸಿಕ ವ್ಯಕ್ತಿಯು ತನ್ನ ಮನಃ ಸಮಾಧಾನಕ್ಕಾಗಿ ಮಾಡುವ ಸಾಮಾನ್ಯ ಕರ್ಮವನ್ನೂ ಗೀತೆ ಹೇಳುವುದಿಲ್ಲ. ಅದು ಹೇಳುವುದು "ಯೋಗಸ್ಥನಾಗಿ, ಆಸಕ್ತಿಯನ್ನು ಸಂಪೂರ್ಣವಾಗಿ ತೊರೆದು, ಸೋಲು–ಗೆಲುವು, ಸುಖ, ದುಃಖಗಳಲ್ಲಿ ಸಮಭಾವ ಇರಿಸಿ ಕರ್ಮ ಮಾಡಬೇಕು. ಯೋಗವೆಂದರೆ ಸಮತ್ವ" (2.48) ಸಾಮಾನ್ಯವಾಗಿ ಮಾನವನು ಮಾಡುವ ಕರ್ಮವು ಯಾವಾಗಲೂ ಒಂದು ವಿಶಿಷ್ಟ ಆಪತ್ತಿಯಿಂದ ಪ್ರೇರಿತವಾಗಿರುವುದೇ ವಿನಃ ಮುಕ್ತ ಆತ್ಮದಿಂದ ಪ್ರಬೋಧಿತವಾಗಿರುವುದಿಲ್ಲ. ಸಾಮಾನ್ಯ ಮಾನವನು ಕರ್ಮ ಮಾಡುವಾಗಲೇ ಒಳ್ಳೆಯದು, ಕೆಟ್ಟದ್ದು ಎಂಬ ಸಾಪೇಕ್ಷ ದೃಷ್ಟಿಯನ್ನಿಟ್ಟುಕೊಂಡೇ ಇರುತ್ತಾನೆ. ಅವನು ಪಾಪಕ್ಕೆ ಹೆದರುತ್ತಾನೆ. ಪುಣ್ಯಕಾರ್ಯ ಮಾಡಬೇಕೆಂಬ ಪ್ರಬಲ ಇಚ್ಛೆಯಿಂದ ಅವನು ಕಷ್ಟಗಳನ್ನು ಸಹಿಸುತ್ತ ಮಾಡುತ್ತಾನೆ. ಮುಕ್ತಾತ್ಮನ ದೃಷ್ಟಿಯಲ್ಲಿ ಪಾಪ–ಪುಣ್ಯಗಳ ವಿಶೇಷ ವಿವೇಚನೆ ಇಲ್ಲ; ಅವನು ತನ್ನ ಮನ ಬುದ್ಧಿಗಳನ್ನು ಈಶ್ವರನ ಮೇಲೆ ಕೇಂದ್ರೀಕರಿಸಿರುತ್ತಾನೆ. ಹಾಗೆ ನೋಡಿದರೆ ನಿಜವಾಗಿ ಈ ಪಾಪ–ಪುಣ್ಯ ಕರ್ಮಗಳ ವಿಚಾರವು ಪ್ರಕ್ಷಿಪ್ತ; ಅದು ಸಾಮಾಜಿಕ ನಿಯಮ, ನೀತಿ ಧರ್ಮ ಇತ್ಯಾದಿ ದ್ವಂದ್ವಗಳನ್ನು ಒಳಗೊಂಡಿದೆ. ಆದರೆ ಸಮಾಧಿಸ್ಥನಾದ ಪುರುಷನು ಈ ದ್ವಂದ್ವಗಳನ್ನು ಮೀರಿದ ಧರ್ಮದ ಮೂಲಕ ವ್ಯವಹರಿಸುತ್ತಾನೆ. ಈ ಶ್ರೇಷ್ಠ ಧರ್ಮವು ಆತ್ಮ ಜ್ಞಾನದ ಮೇಲೆ ಆಧಾರಿತವಾಗಿರುತ್ತದೆ. ಕರ್ಮ ಮಾಡುವಲ್ಲಿ ಸ್ಥಿತಪ್ರಜ್ಞನಾದವನಿಗೆ ಸಂದೇಹವೇ ಇರುವುದಿಲ್ಲ. ಅವನ ನಿಷ್ಕಾಮ ಕರ್ಮದ ಹಿಂದೆ ಸ್ವಾರ್ಥದ ಲೇಶವೂ ಇರುವುದಿಲ್ಲ. ಇದನ್ನೇ ಕೆಲವರು ಆಕ್ಷೇಪವೆಂದು ಭಾವಿಸಿದ್ದುಂಟು. ನಿಷ್ಕಾಮ ಕರ್ಮಕ್ಕೆ ನಿಶ್ಚಿತ ಗುರಿ ಇರುವುದಿಲ್ಲ. ಪರಿಣಾಮದ ಪರಿವೆ ಇರುವುದಿಲ್ಲ. ಆದ್ದರಿಂದ ವಿಶಾಲ ಸೃಷ್ಟಿಯ ಓಜಸ್ಸು ಇರುವುದಿಲ್ಲ. ಸಾಮರ್ಥ್ಯ ಇರುವುದಿಲ್ಲ ಎಂದು ಕೆಲವರು ಆಕ್ಷೇಪ ಮಾಡುವುದುಂಟು. ಆದರೆ ಇದು ತಪ್ಪು ಅಭಿಪ್ರಾಯ.

ಯೋಗಸ್ಥನಾಗಿ ಮಾಡುವ ವ್ಯಕ್ತಿಯ ಕರ್ಮವು ಕೇವಲ ಶ್ರೇಷ್ಠ ಮಾತ್ರ ಅಲ್ಲ, ಅತ್ಯಂತ ವಿವೇಕದಿಂದ ಕೂಡಿರುತ್ತದೆ. ಪ್ರಾಪಂಚಿಕ ವ್ಯವಹಾರದಲ್ಲಿ ಕೂಡ ಅದು ಅಮೌಲ್ಯ ಪರಿಣಾಮಗಳನ್ನು ನೀಡಲು ಶಕ್ತವಾಗಿರುತ್ತದೆ. ಅದು ಕರ್ಮ ಪ್ರಭುವಿನ ಜ್ಞಾನ, ಸಂಕಲ್ಪಗಳಿಂದ ಕೂಡಿ ಅತೀವ ಪರಿಣಾಮಕಾರಿಯಾಗಿರುತ್ತದೆ. ಅಂತೆಯೇ ಶ್ರೀ ಕೃಷ್ಣನು ಬಹು ಚೆನ್ನಾಗಿ ಹೇಳುತ್ತಾನೆ; ಯೋಗ; ಕರ್ಮಸು ಕೌಶಲಂ. ಅವನು ಯಾವುದೇ ಕರ್ಮ ಮಾಡಲಿ ಅದು ಬಹು ಕೌಶಲ ಪೂರ್ಣವಾಗಿರುತ್ತದೆ. ಅದರಲ್ಲಿ ಚ್ಯುತಿ, ತ್ರುಟಿ, ತಪ್ಪುಗಳಿರುವುದಿಲ್ಲ. ಇನ್ನೊಂದು ರೀತಿಯ ಆಕ್ಷೇಪವನ್ನು ಕೆಲವರು ಮಾಡುವುದುಂಟು. ಅದು ಹೀಗಿದೆ. ಯೋಗದ ಸಾರ್ವತ್ರಿಕ ಉದ್ದೇಶವು ಮಾನವ ಜನ್ಮದ ದುಃಖಮಯ ಬಂಧನದಿಂದ ಪಾರಾಗುವುದು, ಹೀಗಾಗಿ ಯೋಗಿ ಮಾಡುವ ಸಾಂಸಾರಿಕ ಕರ್ಮವು ಅವನ ಮೂಲ ಉದ್ದೇಶಕ್ಕೆ ಅನುಗುಣವಾಗಿಲ್ಲದಿರುವುದರಿಂದ ಅದು ಹೇಗೆ ತಾನೇ ಪರಿಣಾಮಕಾರಿಯಾಗಿರಲು ಸಾಧ್ಯ? ಶ್ರೀ ಕೃಷ್ಣನು ಈ ಪ್ರಶ್ನೆಗೆ ಬಹಳ ಸರಳವಾದ ಉತ್ತರ ನೀಡುತ್ತಾನೆ. ಜ್ಞಾನಿಯು ಕರ್ಮಫಲದ ಇಚ್ಛೆ ರಹಿತನಾಗಿರುತ್ತಾನೆ, ಬುದ್ಧಿಯೋಗದಿಂದ ಈಶ್ವರನ ಜೊತೆ ಏಕರೂಪ ಹೊಂದಿ ಕಾರ್ಯ ಮಾಡುತ್ತಾನೆ, ಅವನು ಜನ್ಮ ಬಂಧನದಿಂದ ಮುಕ್ತನಾಗುತ್ತಾನೆ. ಮಾನವನನ್ನು ಸಾಮಾನ್ಯವಾಗಿ ಕಾಡುವ ಆದಿ ವ್ಯಾಧಿ ತಾಪಗಳು ಅವನಿಗೆ ತಾಗುವುದೇ ಇಲ್ಲ. ಅವನು ಪೂರ್ಣ ಅವಸ್ಥೆಯನ್ನು ಪಡೆಯುತ್ತಾನೆ ಪದಂ ಗಚ್ಛಂತ್ಯನಾಮಯಂ.

ಅಂಥವನು ಹೋಗಿ ತಲುಪುವುದು ಬ್ರಾಹ್ಮೀಸ್ಥಿತಿಯನ್ನು, 'ಏಷಾ ಬ್ರಾಹ್ಮೀಸ್ಥಿತಿಃ'. ಅವನು ಸಂಪೂರ್ಣವಾಗಿ ಬ್ರಹ್ಮ ವಸ್ತುವಿನಲ್ಲಿ ನೆಲೆ ನಿಲ್ಲುತ್ತಾನೆ. ಅದೊಂದು ಸಂಪೂರ್ಣ ಪ್ರಜ್ಞಾ ಪಲ್ಲಟದ ಸ್ಥಿತಿ, ಅವನ ಅನುಭವ, ಜ್ಞಾನ. ಜೀವನ ಮೌಲ್ಯಗಳು ಇತರ ಜೀವರಾಶಿಗಳನ್ನು ಅವನು ನೋಡುವ ದೃಷ್ಟಿ ಎಲ್ಲವೂ ಬದಲಾಗುತ್ತದೆ. ಸಾಮಾನ್ಯ ಜನರ ಜೀವನ ದ್ವಂದ್ವಗಳಿಂದ ಕೂಡಿದೆ, ಅವರ ಜೀವನ, ಅವರ ಜಾಗೃತ ಪ್ರಜ್ಞೆ, ಅವರ ಕ್ರಿಯೆ, ಜ್ಞಾನ, ಎಲ್ಲವೂ ಯೋಗಿಗೆ ಕತ್ತಲೆಯಂತೆಯೇ ಕಾಣುತ್ತದೆ, ಅದೊಂದು ರೀತಿಯ ಅಸ್ವಸ್ಥ ನಿದ್ರೆಯಂತೆ ತೋರುತ್ತದೆ. ಅದು ಜೀವಾತ್ಮನ ನಿದ್ರಾವಸ್ಥೆ ಎಂದೇ ತೋರುತ್ತದೆ. ಸಾಮಾನ್ಯ ಲೌಕಿಕ ಜನರ ಜಾಗ್ರ ಅವಸ್ಥೆ ಅವನಿಗೆ ನಿದ್ರೆಯ ಮಬ್ಬಿನಂತೆ ಭಾಸವಾಗುತ್ತದೆ. ಯಾವುದು ಪ್ರಾಪಂಚಿಕರಾದವರಿಗೆ ರಾತ್ರಿಯೋ, ಜ್ಞಾನ, ಸಂಕಲ್ಪಗಳ ಲಯವೋ, ಅದು ಯೋಗಿಗೆ ನಿಜವಾದ ಹಗಲು; ನೈಜ ಸತ್ವ, ಜ್ಞಾನ, ಸಾಮರ್ಥ್ಯ ಪೂರ್ಣ ಪ್ರದೀಪ್ತ

ಹಗಲು ಅವರಿಗೆ. ಸಾಮಾನ್ಯ ಜನರ ಜೀವನವು ಕಲುಷಿತ ನೀರನ್ನು ಕದಡಿದಂತೆ, ಒಂದು ಸಣ್ಣ ಆಶೆ ಬಂದಿತೋ ಮತ್ತೆ ಕದಡಿ ದೋಷಿತವಾಗುತ್ತದೆ. ಅದು ತಿಳಿಯಾಗುವುದೇ ಇಲ್ಲ. ಆದರೆ ಸಮಾಧಿಸ್ಥನಾದ ಯೋಗಿಯೋ ಅವನು ಚೈತನ್ಯದ, ಅಸ್ತಿತ್ವದ ಮಹಾಸಾಗರ, ಅದು ಯಾವಾಗಲೂ ತುಂಬಿರುತ್ತದೆ. ಆದರೂ ನಿಶ್ಚಲವಾಗಿರುತ್ತದೆ. ಅವನ ಆತ್ಮ ಕೂಡ ಸಾಗರದಂತೆ ಸಮತೆ ಹೊಂದಿರುತ್ತದೆ. ಜಗತ್ತಿನ ಎಲ್ಲ ಬಗೆಯ ಇಚ್ಛೆಗಳೂ ಅವನೊಳಗೆ ಪ್ರವೇಶಿಸುತ್ತವೆ, ಆದರೆ ಎಲ್ಲ ನದಿಗಳ ನೀರು ಸಮುದ್ರ ಸೇರಿದಂತೆ, ಅವನು ಮಾತ್ರ ವಿಚಲಿತನಾಗುವುದಿಲ್ಲ. ಜನರಿಗೆ ಅಹಂಭಾವ ಇದೆ, ಅದೇ ಅವರನ್ನು ತೊಂದರೆಗೀಡುಮಾಡುತ್ತದೆ. ಆದರೆ ಯೋಗಸ್ಥನಾದವನಲ್ಲಿ ಅಹಂ ಇಲ್ಲ, ನಾನು, ನೀನು ಎಂಬ ಭೇದವಿಲ್ಲ. ಅವನು ಎಲ್ಲರಲ್ಲೂ ಇರುವ 'ಆತ್ಮ'ದ ಜೊತೆ ಒಂದಾಗಿದ್ದಾನೆ. ಅವನು ಇತರರಂತೆಯೇ ಕೆಲಸ ಕಾರ್ಯ ಮಾಡುತ್ತಾನೆ. ಆದರೆ ಅವನಲ್ಲಿ ಯಾವ ಇಚ್ಛೆಗಳೂ ಇಲ್ಲ, ಬೇಕೆಂಬ ಬಯಕೆಯೂ ಇಲ್ಲ. ಅವನಲ್ಲಿ ಅಪಾರ ಶಾಂತಿ ಲಭಿಸಿದೆ. ಅವನನ್ನು ಈ ತೋರಿಕೆಯ ಬಾಹ್ಯ ಜಗತ್ತು ವಂಚಿಸದು. ಅವನಲ್ಲಿ ವೈಯಕ್ತಿಕ ಅಹಂ ಎಂಬುದೇ ಇಲ್ಲ, ಅವನು ಪರಮಾತ್ಮನಲ್ಲಿ ಸ್ಥಿತನಾಗಿದ್ದಾನೆ, ಕೊನೆಗೆ ಬ್ರಹ್ಮ ನಿರ್ವಾಣವನ್ನೇ ಅವನು ಹೊಂದುತ್ತಾನೆ. ಅದು ಬುದ್ಧನ ಏನೂ ಇಲ್ಲದ ಶೂನ್ಯ ನಿರ್ವಾಣವಲ್ಲ, ಆತ್ಮನಿಲ್ಲದ ಬಯಲು ನಿರ್ವಾಣವಲ್ಲ, ಅದು ಏಕಮೇವ, ಅನಂತ, ನಿರ್ವೈಯಕ್ತಿಕ ಅಸ್ತಿತ್ವದಲ್ಲಿ ಜೀವಾತ್ಮ ಕರಗಿಹೋಗುವ ಪೂರ್ಣಸ್ಥಿತಿ.

ಈ ರೀತಿ ಗೀತೆಯು ಸಾಂಖ್ಯ ಯೋಗ, ವೇದಾಂತಗಳನ್ನು ಒಟ್ಟಿಗೆ ಸೇರಿಸಿ ಏಕರೂಪಗೊಳಿಸುತ್ತದೆ. ಅದರ ಬುನಾದಿಯ ಮೇಲೆ ಗೀತೆಯ ಬೋಧನೆ ಆರಂಭವಾಗುತ್ತದೆ. ಆದರೆ ಇಲ್ಲಿಗೆ ಅದರ ಬೋಧನೆ ಮುಗಿದು ಹೋಗುವುದಿಲ್ಲ. ಗೀತೆ ಇನ್ನೂ ಬೇಕಾದಷ್ಟು ವಿಷಯಗಳನ್ನು ಹೇಳುತ್ತದೆ. ಆದರೆ ಪ್ರಾಥಮಿಕವಾಗಿ ಕರ್ಮ ಮತ್ತು ಅದರ ಅವಶ್ಯಕತೆಯನ್ನು ಹೇಳಿ, ಕರ್ಮವನ್ನು ಜ್ಞಾನ ಯೋಗದ ಜೊತೆ ಸಮನ್ವಯ ಮಾಡಿ, ಪುನಃ ಅದರ ಪೂರ್ಣತೆಗಾಗಿ ದೈವೀ ಪ್ರೇಮ, ಮುಕುಟ ಪ್ರಾಯತತ್ವವಾದ ತೀವ್ರ ದೈವೀ ಪ್ರೀತಿಯನ್ನೂ ಸೇರಿಸುತ್ತದೆ. ಹೀಗೆ ಮೂರೂ ತತ್ವಗಳನ್ನು ಸಮನ್ವಯ ಮಾಡುವುದೇ ಗೀತೆಯ ಮುಖ್ಯ ಉಪದೇಶವಾಗಿದೆ.

(ಸಶೇಷ)

## ಶ್ರೀ ಅರವಿಂದರ
## ‘ತಾಂತ್ರಿಕಸಿದ್ಧಿ ಪ್ರಕರಣಂ’

**– ಅನುವಾದ: ಪುಟ್ಟು ಕುಲಕರ್ಣಿ**

[ಶ್ರೀ ಅರವಿಂದರಿಂದ ರಚಿತಗೊಂಡಿರುವ ಈ **“ತಾಂತ್ರಿಕಸಿದ್ಧಿ ಪ್ರಕರಣಂ”** ಎನ್ನುವ ಸಂಸ್ಕೃತ ಗ್ರಂಥವು, ಪೂರ್ತಿಗೊಂಡಿಲ್ಲ ಎನ್ನುವ ಅಭಿಪ್ರಾಯವಿದೆ. 1911–12 ರ ಅವಧಿಯಲ್ಲಿ ಒಂದು ನೋಟ್ ಬುಕ್ಕಿನಲ್ಲಿ ಬರೆಯಲಾದ ಈ ಕೃತಿಯು ತದನಂತರದಲ್ಲಿ ಬೆಳಕಿಗೆ ಬಂದಿದೆ. ಇಲ್ಲಿ ಕೇವಲ **36+1 ಸೂತ್ರಗಳು ಮಾತ್ರ ಇವೆ. ಇವುಗಳನ್ನು ಯಾವ ತಾರೀಖಿನಂದು ಬರೆಯಲಾಯಿತು ಎನ್ನುವದರ ಬಗೆಗೆ ದಾಖಲೆಗಳು ಲಭ್ಯವಾಗಿಲ್ಲ.** ಇದು ಅಪೂರ್ಣವೆನ್ನುವ ಅಭಿಪ್ರಾಯವನ್ನು ಮೊದಲು ಬಿಡಬೇಕಾಗಿದೆ. ಇಲ್ಲಿರುವ 36 ಶ್ಲೋಕಗಳೂ “ಶಕ್ತಿಮಾತೆಯ 36 ತತ್ತ್ವಗಳೇ” ಆಗಿವೆ. 37ನೇ ಶ್ಲೋಕದಲ್ಲಿ ಈ ಸಾಧನಾಕ್ರಮದಿಂದ ಲಭ್ಯಗೊಳ್ಳುವ ಅನುಭಾವವನ್ನು ಹೇಳಲಾಗಿದೆ. ‘ಸಾಧನಾ ಪಥ’ದಲ್ಲಿ ಕಾಳಿಮಾತೆಗೆ–ಶಕ್ತಿಮಾತೆಗೆ ಸಂಪೂರ್ಣವಾಗಿ ಆತ್ಮಸಮರ್ಪಣೆಯಲ್ಲಿ ರಚಿತಗೊಂಡ ಉಕ್ತಿಗಳು ಇವು.] – ಸಂ

### “ತಾಂತ್ರಿಕಸಿದ್ಧಿ ಪ್ರಕರಣಂ”

**– ಶ್ರೀ ಅರವಿಂದರು**

### ತಸ್ಮಿನ್ನ್ಯ ಶಕ್ತಿಪ್ರಕರಣಂ

**ಶಕ್ತ್ಯುಪಾಸನಾ ತಾಂತ್ರಿಕಸಿದ್ಧಿಃ ।**

**ದ್ವಿವಿಧೋಪಾಸನಾ ಸಾಹಮಿತಿ ಸಾ ಪ್ರಕೃತಿರಹಂ ಪುರುಷ ಇತಿ। ಏತೆ ದ್ವೇ ಪೂರ್ಣೋ ಖಣ್ಡೋಪಾಸನಾಪ್ಯಸ್ತಿ ಭೇದಪ್ರಧಾನಾ ದ್ವೈತಮಯಿ ಸಾವಿದ್ಯೋಪಾಸನಾ ನ ಪ್ರವರಾ ।**

**ಸಾಧ್ಯನ್ತು ಕಾಲೀಭಾವೋ ವಾ ವಿಭೂತಿಭಾವೋ ವಾ ।**

**ಸಾಹಮಿತಿ ಸಾಧನಸ್ಯ ಕಾಲೀಭಾವೋ ವಿಭೂತಿಭಾವಸ್ತು ಪ್ರಕೃತಿಸಾಧನಸ್ಯ ।**

**ದ್ವಯೋರಪಿ ಸಾಧನಾಮಾತ್ಮಸಮರ್ಪಣಮ್ ।**

**ನ ಮೇ ಸಾಧನಂ ತವೈವ ಸಾಧನಂ ನ ಮೆ ಭಾರಸ್ತವೈವ ಭಾರಸ್ತ್ವಮೇಹಿ ತ್ವಂ ಕರ್ತ್ರೀ ಶಕ್ತಿರ್ನಾಹಂ ಕರ್ತಾ ನಾಹಂ ಶಕ್ತಸ್ತ್ವಮೇವ ಸಾಧನಂ ಕುರು ಕಾಲೀತ್ಯಾತ್ಮಸಮರ್ಪಣಮ್ ।**

ತಸ್ಯ ಧರ್ಮಾಧರ್ಮಪಾಪಪುಣ್ಯಮಙ್ಗಲಪ್ರಿಯವಿಚಾರಂ ಪರಿತ್ಯಜ್ಯ ನಿಶ್ಚೇಷ್ಟಸ್ಯ ಸುಖಾಸೀನಸ್ಯ ಕಾಲೀ ಶರೀರಂ ಪ್ರವಿಶತಿ ।

ಹುಂಕಾರಾಟ್ಟಹಾಸಸಿಂಹನಾದದರ್ಶನಶಕ್ತಿಬೋಧೈರ್ಜ್ಞಾತಂ ಭವತಿ ಪ್ರವೇಶನಮ್।

ಯೋಗಕ್ರಿಯಾಪ್ರವರ್ತನೇನ ವಾ।

ಸಾ ಪ್ರವಿಷ್ಟಾಹಂಕಾರಮಪನುದತಿ ।

ತಾಮಸಂ ನಿಕೃಷ್ಟಮಹಂಕಾರಮಪನುದತಿ ।

ರಾಜಸಂ ತದನನ್ತರಮಹಂಕಾರಪನುದತಿ ।

ಪರಸ್ತಾದ್ರಾಜಸತಾಮಸಮಿತಿ ಮಿಶ್ರಮಪನುದತಿ ।

ಸಾತ್ತ್ವಿಕಮಹಂಕಾರಮಪನುದತಿ ।

ಗುಣತ್ರಯಾತೀತಂ ಕರೋತಿ ।

ಸರ್ವಾನಶುದ್ಧಾನ್ ಸಂಸ್ಕಾರಾನಪನುದತಿ ।

ಏತದೇವ ಚಿತ್ತಶೋಧನಮ್ ।

ನ ಸಾಧುಭಾವಾಶ್ಚಿತ್ತಶುದ್ಧಿರಹಂಕಾರವರ್ಜನಂ ತು ಸಂಸ್ಕಾರಶೋಧನಂ ಚ ಲಕ್ಷಣಮ್ ।

ಸಾಧುರ್ಹ್ಯಾಹಂಕಾರಂ ಸಾತ್ತ್ವಿಕಂ ರಕ್ಷತಿ ನ ತದರ್ಪಯತಿ ಭಗವತೇ ।

ಏತತ್ಪುಣ್ಯಮೇತತಪಾಪಮೇತತತ್ಕರಿಷ್ಯಾಮಿ ನೈತತ್ಕರಿಷ್ಯಾಮಿತಿ ಪಾಪಪುಣ್ಯಬೋಧ ಸಿದ್ಧಿವಿಘ್ನಕರಃ ।

ಅಜ್ಞಾನಜೋ ಹಿ ನಾಸ್ತಿ ಪಾಪಂ ನಾಸ್ತಿ ಪುಣ್ಯಮೀಶ್ವರೇಚ್ಛಾ ವರ್ತತೇ ತ್ವಾಶ್ರಿತ್ಯ ಸ್ವಭಾವಮ್ ।

ನ ಪಾಪಚಿತ್ತಸ್ತಾನ್ತ್ರಿಕಃ ಸಿದ್ಧೋ ಭವತಿ ನ ಪುಣ್ಯಚಿತ್ತಸ್ತಾಚ್ಚಿತ್ತಸ್ತು ಸಿದ್ಧೋ ಭವತಿ ಸ ಏವ ತಾನ್ತ್ರಿಕಃ ।

ಕಷ್ಟಾ ತು ಚಿತ್ತಶೋಧನಕ್ರಿಯಾನನ್ದಮಯೀ ಚಿತ್ತಶುದ್ಧಿರ್ಧೈರ್ಯಂ ಕರ್ತವ್ಯಂ ಶ್ರದ್ಧಾ ಕರ್ತವ್ಯಾ ನ ವ್ಯಾಕುಲತಾ ನ ಸಾಧನಫಲಾಕಾಂಕ್ಷಾ ಕಥಂ ನ ಭವತೀತಿ ಪಷ್ಟಮದ್ಯ ಭವೇದಿತಿ ।

**ಸಾ ಪ್ರವಿಷ್ಟಾ ಜ್ಞಾನಂ ದದಾತಿ ಶಕ್ತಿಂ ದದಾತಿ ಪ್ರೇಮ ದದಾತಿ ದದಾತ್ಯಾನನ್ದಂ ।**

**ಅಪೂರ್ಣಾನಿ ತ್ವೇತಾನಿ ಚಾಸ್ಥಿರಾಣಿ ಚಿತ್ತಶೋಧನೇ ಶುದ್ಧ್ಯಾಂತು ಪೂರ್ಣಾನಿ ಭವನ್ತಿ ।**

**ನ ಸಾ ಪೂರ್ಣತಾ ಸಿದ್ಧಿಃ ಸಿದ್ಧಿಪ್ರತಿಷ್ಠಾ ತು ಸಿದ್ಧಿಪ್ರವರ್ತೇನ ಚ ಕಾಲೀಸಂಗಮಃ ಸಿದ್ಧಿಃ ।**

**ಸಾಧರ್ಮ್ಯಮೇವ ತತ್ ಪ್ರತಿಷ್ಠಾ ಸಾಧರ್ಮ್ಯಂ ಸಿದ್ಧೇಃ ।**

**ತತ್ಸಾಧರ್ಮ್ಯಸ್ಯ ಚತುಷ್ಟಯಚತುಷ್ಕಂ ಲಕ್ಷಣಮ್ ।**

**ತದ್ಯಥಾ ಶುದ್ಧಿಚತುಷ್ಟಯಂ ಶಕ್ತಿಚತುಷ್ಟಯಂ ಜ್ಞಾನಚತುಷ್ಟಯಂ ಸೌನ್ದರ್ಯಚತುಷ್ಟಯಂ ಚ ।**

**ಸಮತಾ ಶಾಂತಿಃ ಸುಖಂ ಹಾಸ್ಯಂ ಶುದ್ಧಿಚತುಷ್ಟಯಮ್।**

**ಫಲತ್ಯಾಗಃ ಕರ್ಮತ್ಯಾಗಃ ಕಾಮನಾತ್ಯಾಗ ಇತಿ ಸಮತಾ ।**

**ನ ತ್ವಪ್ರವೃತ್ತಿಸ್ತ್ಯಾಗಃ ಸಾ ಹಿ ತಾಮಸೀ ಭಗವತಿ ತು ಸನ್ಯಾಸೋ ಬುದ್ಧೌ ನಿರ್ಲಿಪ್ತಬುದ್ಧಿರೇವ ಸಮೋ ನ ತ್ಯಕ್ತಪ್ರವೃತ್ತಿಃ ಸ ಜಡೋ ನ ಸಮಃ ।**

**ತದ್ಯಥಾ ತ್ವಂ ಯತ್ಪ್ರವೃತ್ತಿಂ ದಾಸ್ಯಸಿ ತತ್ಕರ್ಮ ಕರಿಷ್ಯತಿ ಶಕ್ತಿರ್ಯತ್ಫಲಂ ದಾಸ್ಯಸಿ ತದ್ಭೋಕ್ಷ್ಯತಿ ಯಂ ಕಾಮಂ ಪ್ರಾಣೇ ದಾಸ್ಯಸಿ ತತ್ಕಾಮಯಿಷ್ಯತಿ ನಾಹಂ ಕರ್ತಾ ನಾಹಂ ಕಾಮವಿದ್ಧೋ ಜ್ಞಾತಾಹಂ ಭೋಕ್ತಾಹಂ ಪುರುಷೋತ್ತಮೋನುಮನ್ತಾ ತಸ್ಯಾನುಮತಂ ಕಾಲೀ ಕರೋತಿ ತಸ್ಯಾಃ ಕರ್ಮ ಕಾಮಂ ಫಲಮಹಂ ಜ್ಞಾಸ್ಯಾಮಿ ಭೋಕ್ಷ್ಯಾಮಿ ಚ ಸಮಭಾವೇನ ಸುಖಮಾನನ್ದ ಇತಿ।**

**ಸ್ಥೈರ್ಯಮನುದ್ವೇಗೋ ಧೈರ್ಯಮಿತಿ ಶಾನ್ತಿಃ ।**

**ತದಾಪಿ ಚಿತ್ತೇ । ಉಗ್ರಭಾವೋಽಪಿ ರುದ್ರಕರ್ಮಾ ಶಾನ್ತಿಸಮ್ಪನ್ನೋ ಭವೇತ್ ।**

---

**ಅಡಿಟಿಪ್ಪಣಿಗಳು:**

**1. ತಾಂತಿಕ ಸಿದ್ಧಿ;**

'ತಾಂತ್ರಿಕ ಸಿದ್ಧಿ ಪ್ರಕರಣಂ'ದ ಆಂತರ್ಯವನ್ನು ಅರಿತುಕೊಳ್ಳಲು ನಾವು ಯಂತ್ರ–ತಂತ್ರ–ಮಂತ್ರದ ಕುರಿತು ಪೂರ್ಣ ಅಧ್ಯಯನ ಮಾಡಬೇಕಾಗುತ್ತದೆ.

ಇಲ್ಲಿ ಯಂತ್ರವೆನ್ನುವದು ನಮ್ಮ ದೇಹ; ತಂತ್ರವೆನ್ನುವದು ವಿಶ್ವ ಶಕ್ತಿ. ಈ ಯಂತ್ರದಲ್ಲಿ ಅನುಷ್ಠಾನಗೊಳಿಸುವ ಪ್ರಕ್ರಿಯೆ; ಮಂತ್ರವೆನ್ನುವದು ವೈಶ್ವಿಕ ಸತ್ಯ ಅಥವಾ ಋತ. ಇದನ್ನೇ ಶ್ರೀ ಅರವಿಂದರು ಋತ–ಚೇತನವೆಂದು ಅಭಿವ್ಯಕ್ತಿಸುತ್ತಾರೆ. ಈ ಋತ–ಚೇತನದ ಜೊತೆಗೆ ಮಾನವನ ಜೀವನವೂ ಸಮ್ಮಿಲನಗೊಳ್ಳಬೇಕೆಂಬುದೇ ಮಾನವ–ಯಂತ್ರದ ಸ್ವರೂಪವಿದೆ. ಇದು ಜಡದಂತೆ ಕಂಡರೂ, ಅದರ ಅಂತರಂಗದಲ್ಲಿ ಇರುವ 'ಪ್ರಾಣಶಕ್ತಿ'ಯು ಆ ವಿಶ್ವ ಶಕ್ತಿಯ ಅಂಶಾಂಶವೇ ಆಗಿರುವದರಿಂದ, ಸೂಕ್ತವಾದ ಸಾಧನೆಯ ಮೂಲಕ, ಆತ್ಮಸಮರ್ಪಣೆಯ ಕರ್ಮ ಯೋಗದ ಮೂಲಕ ಆ ತರಂಗಾಂತರಂಗದೊಡನೆ ಸಂಪರ್ಕ ಸಾಧಿಸಬಹುದು ಎನ್ನುವದು ಈ ತಾಂತ್ರಿಕ ಸಿದ್ಧಿಯ ಗಮ್ಯವಾಗಿದೆ. ಇದನ್ನು ಶಕ್ತ್ಯುಪಾಸನಾ ಸಂದರ್ಭಗಳಲ್ಲಿ ಅತ್ಯಂತ ನಿಯಮ–ನಿಷ್ಠೆಯ ಸ್ವರೂಪದಲ್ಲಿಯೇ ಬೋಧಿಸಲಾಗುತ್ತದೆ. ಇಲ್ಲಿ ಬೋಧನೆಗಿಂತ ಹೆಚ್ಚಿನ ಮಹತ್ವವಿರುವದು ಆಯಾ ವ್ಯಕ್ತಿಯು ಹೊಂದಿದ ಅಭೀಪ್ಸೆ ಹಾಗೂ ಅವನ ಆತ್ಮ ಸಮರ್ಪಣಾ ಹಂತಗಳು ಎನ್ನುವದು ಅನುಭವಜನ್ಯ ವಿಷಯಗಳಾಗಿವೆ.

ಶ್ಯಾಮಲಾ ದಂಡಕದಲ್ಲಿಯೂ ಸಹಿತ 'ಸರ್ವ ಯಂತ್ರಾತ್ಮಿಕೆ ಸರ್ವ ತಂತ್ರಾತ್ಮಿಕೆ ಸರ್ವ ಮಂತ್ರಾತ್ಮಿಕೆ' ಎನ್ನುವ ಶ್ಲೋಕಗಳಿವೆ. ಇವುಗಳ ಮೂಲಕವೇ' ಸರ್ವ ಸರ್ವಾತ್ಮಿಕೆ'ಯ ಕೃಪೆಗೆ ಪಾತ್ರರಾಗುವ ವಿವರಗಳು ಇವೆ.

1911–12 ರಲ್ಲಿ ಶ್ರೀ ಅರವಿಂದರು ಯೋಗ ಸಾಧನಾ ಪಥದಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವದರರ ಕುರಿತು ಎಲ್ಲ ಅಂಶಗಳೂ ಲಭ್ಯವಿವೆ. 1910–11 ರ ವರೆಗೆ ಅವರು ಕಂಡುಕೊಂಡ ಅನುಭವ–ಅನುಭಾವಗಳನ್ನು 'ಪ್ರಾರಂಭಿಕ ಕವನಗಳಲ್ಲಿ' ದಾಖಲಿಸಿದ್ದಾರೆ.

ಈ 'ತಾಂತ್ರಿಕ ಸಿದ್ಧಿ ಪ್ರಕರಣಂ'ದ ವಿಷಯದಲ್ಲಿ, ಅದರಲ್ಲೂ ಈ ಯಂತ್ರ–ತಂತ್ರ–ಮಂತ್ರದ ವಿಷಯದಲ್ಲಿ, ಮಾನವನು ಹೊಂದಿರಲೇಬೇಕಾದ 'ಆತ್ಮ ಸಮರ್ಪಣೆ'ಯ ಕುರಿತು ಈ ರೀತಿಯಲ್ಲಿ ಉಲ್ಲೇಖಿಸುತ್ತಾರೆ; 'ಓ ಮಾತೆ, ನೀನೇ ಸರ್ವಸ್ವ, ನಾನು ಯಾರಿಗೆ ಉಪಕರಣವಾಗಿ(ಯಂತ್ರವಾಗಿ) ಈ ಮನುಜ ಜನ್ಮಕ್ಕೆ ಬಂದಿದ್ದೇನೆಯೋ, ಅಂತಹ ಸುವರ್ಣಾವಕಾಶವನ್ನು ಒದಗಿಸಿಕೊಟ್ಟ ಓ ಮಾತೆಯೇ, ನೀನೇ ಈ ಗುಹ್ಯ–ಪರಮ ಆತ್ಮಜ್ಯೋತಿಯಾಗಿದ್ದೀಯಾ ಜೊತೆಗೆ ಈ ಪ್ರಕೃತಿಯಲ್ಲಿ ನೆಲೆಸಲೆಂದೇ ನೀನಿರುವಾಗ, ನನ್ನ ಮೃಣ್ಮಯದ ಸರ್ವ

ಕರ್ಮಗಳೆಲ್ಲವೂ ನಿನ್ನೊಡನೆ ಸಮ್ಮಿಲಗೊಳ್ಳುವಂತೆಯೇ ನನಗೆ ಹರಸು. ನಿನ್ನ ಚಿರಂತನವಾದ ಭವ್ಯತೆಯನ್ನು–ದಿವ್ಯತೆಯನ್ನು ದಯಪಾಲಿಸಿ ನಾನೂ ಶೋಭಾಯಮಾನನಾಗುವಂತೆ ಹರಸು' ಎಂದು ಅಪ್ರತಿಮ ಪ್ರತಿಮಾ ವಿಧಾನದಲ್ಲಿ ಪ್ರಾರ್ಥಿಸುತ್ತಾರೆ.

ಈ ರೀತಿಯ ವಿಶೇಷ ವ್ಯವಸ್ಥೆಯಲ್ಲಿ ಸ್ಪಂದನಗೊಳ್ಳಲು ಸಿದ್ಧವಿರುವ 'ಯಂತ್ರ'ದಲ್ಲಿ, ವಿಶ್ವ ಶಕ್ತಿಯು ಆಯಾ ವ್ಯಕ್ತಿಯ–ಯಂತ್ರದ–ಪಾತ್ರವನ್ನು ಅವಲಂಬಿಸಿ, ಅದರಲ್ಲಿ ಸೂಕ್ತವಾದ ಶಕ್ತಿಯನ್ನು ತುಂಬುತ್ತಾಳೆ. ಈ ಪ್ರಕ್ರಿಯೆಯೇ 'ತಂತ್ರ'ವಾಗಿದೆ. ಇದು 'ಮಂತ್ರದ' ಮೂಲಕವೇ ಘಟಿಸುತ್ತದೆ. ಮಂತ್ರವೆಂದರೆ ಋತದ ಸ್ಪಂದವಾಗಿರುವ ನಾದವಾಗಿದೆ; ಇದು ವೈಶ್ವಿಕ ನಾದ. ಅದರ ಅಗಾಧ–ಭೂಮ–ವಿಸ್ತಾರ ಮತ್ತು ಅನಂತತೆಯನ್ನು ಧಾರಣ ಮಾಡಿಕೊಳ್ಳುವ ಸಾಮರ್ಥ್ಯ ಈ 'ಮನುಜ–ಯಂತ್ರವಾಗಿರುವ ದೇಹಕ್ಕೆ ಇರುವದಿಲ್ಲ. ಹೀಗಾಗಿ ಈ ಯಂತ್ರವು ಧಾರಣ ಮಾಡಿಕೊಳ್ಳುವ ಪ್ರಮಾಣದ ಶಕ್ತಿಯನ್ನು ಜಗನ್ಮಾತೆಯು ಕರುಣಿಸುತ್ತಾಳೆ.'

ಈ ರೀತಿಯ ಕರುಣೆಯು ಪ್ರಾಪ್ತವಾಯಿತು ಎಂದರೆ, ಆ ಚಿನ್ಮಯದ ಜ್ಯೋತಿಯ ಸ್ಪರ್ಶವಾಯಿತು ಎಂದರೆ, ಈ ಯಂತ್ರವೂ ಸಹಿತ ಪರುಷಮಣಿಯಾಗುತ್ತದೆ. ಆ ರೀತಿಯಲ್ಲಿ ಮಾನವನಲ್ಲಿಯೂ ಅನುರಣನಗೊಳ್ಳುತ್ತದೆ. ಈ ಜಗತ್ತನ್ನು ನೇರ್ಪುಗೊಳಿಸಲು, ಆ ದೇವತೆಯೇ ಮಾನವನ ಸ್ವರೂಪದಲ್ಲಿ ಅವತರಿಸಿ ಬಂದಂತೆ, ಈ 'ಯಂತ್ರ'ವು ರೂಪಾಂತರಗೊಳ್ಳುತ್ತದೆ. ಆ ವ್ಯಕ್ತಿಯ ಮನೋ–ಕೋಶಗಳೆಲ್ಲವೂ ಜಗನ್ಮಾತೆಯ – ವಿಶ್ವಚೈತನ್ಯದ ಕಾಂತಿಮಯಕಿರಣಗಳಿಂದ ಬೆಳಗುತ್ತವೆ. ಈ ರೀತಿಯಲ್ಲಿ ಬೆಳಗಬೇಕೆನ್ನುವದೇ ಮಾನವ ಹೃದಯದ, ಅವನ ಆತ್ಮದ ಅಭೀಪ್ಸೆಯೂ ಆಗಿದೆ.

ಶ್ರೀ ಅರವಿಂದರು ಪ್ರತಿಪಾದಿಸುತ್ತಿರುವ ಮಹಾಲಕ್ಷ್ಮೀ, ಮಹಾ ಸರಸ್ವತೀ, ಮಹಾಮಾಯಾ ಮತ್ತು ಮಹಾಕಾಳೀ ಸ್ವರೂಪದ ಬೀಜಮಂತ್ರವಾಗಿ ಈ "ತಾಂತ್ರಿಕಸಿದ್ಧಿ ಪ್ರಕರಣಂ" ಇದೆ. ಇದರ ಅನುಸಂಧಾನವನ್ನು ಈ ಮೂಲಕ ರೂಪಿಸುವ ಪ್ರಯತ್ನವನ್ನು ಇಲ್ಲಿ ಅನುಷ್ಠಾನಿಸಲಾಗುತ್ತಿದೆ.

(ಸಶೇಷ)

## ಶ್ರೀ ಅರವಿಂದರ ಕಾವ್ಯ
## "ಈಲಿಯನ್"

**– ಅನುವಾದ: ಡಾ॥ ಬಿ.ಆರ್.ಭೀಡ್, ರಾಯಚೂರು**

### ಮೊದಲ ಹೊತ್ತಿಗೆ: ಆಗಮನದ ಹೊತ್ತಿಗೆ (1/3)

ನಿದ್ರೆಯಿಂದ ಎದ್ದೇಳುವ ಮನಸ್ಸೇ ಡೀಫೋಬಸ್‌ಗೆ ಇರಲಿಲ್ಲ. ಒಲ್ಲದ
ಮನಸ್ಸಿನಿಂದ ಎದ್ದು ಬಂದ.
ಕನಸ್ಸಿನಲ್ಲಿ ಯಾವು ಯಾವುದೋ ದೂರದೂರದ ದೇಶಗಳಿಗೆ ಹೋಗಿದ್ದವನು
ಹಠಾತ್ತಾಗಿ ತಿರುಗಿ ಬರುವಂತಾಯಿತು.
ಸ್ಥಳ–ಕಾಲ–ನಿರ್ಬಂಧಗಳಿಲ್ಲದ ಸ್ವಚ್ಛಂದ ಲೋಕಗಳು ಅವು. ನಮ್ಮ
ಲೋಕಗಳಲ್ಲಿ ಇರುವಂಥ ಸಾಮಾನ್ಯ ಹೋರಾಟ, ಕದನ, ಶ್ರಮ,
ಅನಿಶ್ಚಿತತೆ ಯಾವುವೂ ಅಲ್ಲಿಲ್ಲ. ಅಲ್ಲಿ ಹೋರಾಟ ಇಲ್ಲ, ಭಯ ಇಲ್ಲ.

ಆದರೆ ಅವನು ಬಲವಂತವಾಗಿ ಈ ಲೋಕಕ್ಕೆ ಮರಳಿ ಬರಲೇಬೇಕಾಯಿತು.
ನಿದ್ರೆ ಅನ್ನುವುದು ಕಾಲಸಂಜಾತ ಜೀವಿಗಳಿಗೆ ನೀಡಲಾದ ವರ;
ದಣಿದ ಜೀವಕ್ಕೆ ವಿಶ್ರಾಂತಿ ಬೇಕೇ ಬೇಕು.
ಸದ್ಯಕ್ಕೆ ಮಾತ್ರ ಅದನ್ನು ತೊರೆದು ಡೀಫೋಬಸ್ ಮರಳಿ ಯುದ್ಧ, ಕಾಳಗ,
ಗಾಯ ಹಾಗೂ ಭೂಮಿಯ ಮೇಲಿನ ಎಲ್ಲ ಸಂಘಾತಗಳಿಗೆ
ಎದೆಯೊಡ್ಡಿ ನಿಲ್ಲಲೇಬೇಕಾದ ಪ್ರಸಂಗ ಬಂದಿತು.

ಡೀಫೋಬಸ್ ಧಡೂತಿ ಆಳು. ಅವನದು ದೈತ್ಯ ಶರೀರ. ॥ 1.26 ॥

ಸುತ್ತಲೆಲ್ಲ ತ್ವರಿತವಾಗಿ ಕಣ್ಣಾಡಿಸಿದ. ಯುದ್ಧದ ಚಿತ್ರಣವೆಲ್ಲ ಕಣ್ಣಮುಂದೆ ಬಂದಿತು. ಯುದ್ಧ ಉಡುಪು, ಕವಚ ಸರಿಪಡಿಸಿಕೊಂಡ, ಹಿರಿಯರು ಬಾಳಿಬದುಕಿದ ಮನೆಯ ವೀಥಿಗಳಗುಂಟ ಸಾಗಿ ಪರ್ಗಮಾದ Pergama ಹೆಬ್ಬಾಗಿಲಿಗೆ ಬಂದು ನಿಂತ. ವಿಧಿಯು ಎಳೆದೊಯ್ದಂತೆ ಅಲ್ಲಿಗೆ ಬಂದು ನಿಂತಂತಾಯಿತು. ದೇವತೆಗಳು ಮೇಲಿನಿಂದ ನೋಡುತ್ತಿದ್ದಂತೆ ಸಭಾ ಮಂಟಪದ ಮುಂದುಗಡೆ ಅವನು ನಡೆದು ಬಂದ.

•ಇಲ್ಲಿಂದ ಮುಂದೆ ತುಸು ವಿಷಯಾಂತರವಾಗುತ್ತದೆ. ಯುದ್ಧದ ಹಿನ್ನೆಲೆಯ ವರ್ಣನೆ ಬರುತ್ತದೆ. ಬಹುಶಃ ಜಗತ್ತಿನ ಇತಿಹಾಸದಲ್ಲೇ ಅತಿ ದೀರ್ಘಕಾಲದ ಯುದ್ಧ ಅದು. ಅತಿ ಮಹತ್ತರವಾದ ಸತ್ಯಗಳನ್ನು ಅತಿ ಸರಳವಾಗಿ ಹೇಳಿರುವುದನ್ನು ನಾವಿಲ್ಲಿ ಕಾಣುತ್ತೇವೆ.

ಅತಿ ದೀರ್ಘವಾದ ಯುದ್ಧ. ಒಂಬತ್ತು ವರ್ಷ ಕಳೆದು ಹತ್ತನೆಯದು ಕಾಲಿಡುತ್ತಿದೆ. ಈ ಅವಧಿಯಲ್ಲಿ ಸರಿಸುಮಾರು ಎಲ್ಲ ದೇವತೆಗಳ ಕ್ರೋಧ, ದ್ವೇಷ ಪ್ರಕಟವಾಗಿದೆ. ಎರಡೂ ಕಡೆಗಿನ ಯೋಧರು ನಲುಗಿ ಹೋಗಿದ್ದಾರೆ. ಎರಡೂ ಕಡೆಗೆ ಸೋಲು ಗೆಲುವುಗಳಾಗಿವೆ. ಸಾವು ನೋವು ಅಪಾರ ಹಾನಿ ಎರಡೂ ಕಡೆಗೆ ಸಂಭವಿಸಿದೆ. ಟ್ರಾಯ್‌ನ ರಕ್ಷಣಾ ಗೋಡೆಗಳಂತೂ ಅಪಾರ ಹಾನಿ ಅನುಭವಿಸಿವೆ.

•ಇಲ್ಲೊಂದು ಸಣ್ಣ ಕಥೆ ಬರುತ್ತದೆ. ಇದು ತಿಳಿದಿರಬೇಕು. ಇಲ್ಲವಾದರೆ, ಮುಂದಿನ ಸಾಲುಗಳಿಗೆ ಅರ್ಥ ಸಿಗುವುದಿಲ್ಲ, ತುಸು ಗೊಂದಲವಾಗುತ್ತದೆ.

ಟ್ರಾಯ್ ಪಟ್ಟಣದ ಸುತ್ತಲು ಭದ್ರವಾದ ರಕ್ಷಣಾ ಕೋಟೆಯನ್ನು ನಿರ್ಮಿಸಿದ್ದು ಪೊಸೈಡಾನ್ Poseidon ಎಂಬ ಸಮುದ್ರ ದೇವತೆ. ಅಪೋಲೋ Apolloನ ನೆರವು ಪಡೆದು ಟ್ರಾಯ್ ಸುತ್ತ ರಕ್ಷಣಾ ಗೋಡೆ ಕಟ್ಟಿದ್ದು ಈ ಪೊಸೈಡಾನ್‌ನ ಅದ್ಭುತ ವೈಜ್ಞಾನಿಕ ಕೌಶಲ್ಯಕ್ಕೆ ಸಾಕ್ಷಿ. ಆದರೆ ಆಗಿನ ಟ್ರಾಯ್ ದೊರೆ ಲೋಮೆಡನ್ Laomedon ಅವನಿಗೆ ಪ್ರತಿಫಲ ನೀಡದೇ ವಂಚಿಸಿದ.

ಇದರಿಂದ ಕ್ರುದ್ಧನಾದ ಪೊಸೈಡಾನ್ ಓರ್ವ ಭಯಾನಕ ಸಮುದ್ರ ರಾಕ್ಷಸನನ್ನು ಸೃಷ್ಟಿಸಿ ಟ್ರಾಯ್‌ನ ದುರ್ಗವನ್ನು ರಾಜ್ಯವನ್ನು ಧ್ವಂಸ ಮಾಡಲು ಆದೇಶಿಸಿದ. ಆದರೆ ಆಗ ಟ್ರಾಯ್ ಜನರ ಸಹಾಯಕ್ಕೆ ಬಂದ ಹೆರಾಕ್ಲಿಸ್ Hercules (ಇವನನ್ನು ಕೆಲವರು ಹರ್ಕ್ಯೂಲಸ್ ಅಂತಲೂ ಕರೆಯುತ್ತಾರೆ Hercules) ಎಂಬ ಜಗಜಟ್ಟಿಯು ಆ ಭಯಾನಕ ಜೀವಿಯನ್ನು ಕೊಂದುಹಾಕಿದನಲ್ಲದೇ ಇಡೀ ನಗರವನ್ನು, ರಾಜ್ಯವನ್ನು ವಿನಾಶದಿಂದ ಕಾಪಾಡಿದ. ಆದರೆ ಆ ಹೆರಾಕ್ಲಿಸ್‌ನಿಗೂ ಈ ಅರಸು ಮೋಸ ಮಾಡಿದ. ಅವನಿಗೂ ಏನೂ ಕೊಡಲಿಲ್ಲ.

ಆಗ ಯಮಸಿಟ್ಟಿನಿಂದ ಹೆರಾಕ್ಲಿಸ್ ಅರಸನನ್ನು ಕೊಂದದ್ದಲ್ಲದೇ ಅವನ ಎಲ್ಲ ಮಕ್ಕಳನ್ನೂ ಕೊಂದುಹಾಕಿಬಿಟ್ಟ. ಆದರೆ ತೀರ ಹಸುಳೆಯಾಗಿದ್ದ ಪ್ರಾಯಮ್ (Priam)ನನ್ನು ಮಾತ್ರ ಏನೂ ಮಾಡದೇ ಹಾಗೆಯೇ ಬಿಟ್ಟುಬಿಟ್ಟ.

ಆ ಪ್ರಾಯಮ್‌ನೇ ಈಗ ಟ್ರಾಯ್‌ನ ರಾಜನಾಗಿದ್ದ. ಇದಿಷ್ಟು ಹಿನ್ನೆಲೆ. ಈಗ ಮತ್ತೆ ಟ್ರಾಯ್‌ನ ಕಥೆ ಮುಂದುವರಿಯುತ್ತದೆ.

ಗ್ರೀಕ ವೀರರು ಯುದ್ಧೋತ್ಸಾಹದಿಂದ ಟೆನೆಡಾಸ್(Tenedos) ಎಂಬ ಸಣ್ಣ ದ್ವೀಪವನ್ನು ಬಳಸಿಕೊಂಡು ಟ್ರಾಯ್ ಸಮೀಪ ಪ್ರೈಜಿಯನ್(Phrygean) ದಂಡೆಯ ಮೇಲೆ ಬೀಡಾರ ಹಾಕಿದರು. ಆರಂಭದ ಯುದ್ಧದಲ್ಲಿ ಗ್ರೀಕ ವೀರ

ಆರ್ಗೈವ(Argive) ಮರಣ ಹೊಂದಿದ. ಮೊದಲ ಗ್ರೀಕ ವೀರ ಸತ್ತದ್ದು ಹೀಗೆ. ಈ ಒಂಬತ್ತು ವರ್ಷಗಳ ಅವಧಿಯಲ್ಲಿ ಟ್ರೋಜನರ ಭದ್ರವಾದ ರಕ್ಷಣಾ ಕೋಟೆಯನ್ನು ಭೇದಿಸಿ ಒಳನುಗ್ಗುವುದು ಗ್ರೀಕರಿಂದ ಸಾಧ್ಯವಾಗಲಿಲ್ಲ.

ಗ್ರೀಕರೂ ಬಿಡಲಿಲ್ಲ. ಮತ್ತೆ ಮತ್ತೆ ಮೇಲೇರಿ ಬರುತ್ತಲೇ ಇದ್ದರು. ಆಕ್ರಮಣ ಮಾಡಿಯೇ ಮಾಡಿದರು. ಟ್ರೋಜನರು ಕೂಡ ಅಷ್ಟೇ. ತಮ್ಮ ಹಠ ಬಿಡಲೊಲ್ಲರು, ಹಿಂದೆ ಸರಿಯಲೊಲ್ಲರು. ತಮ್ಮ ರಾಜ್ಯವನ್ನು ಕಾಪಾಡಿಕೊಳ್ಳುವಲ್ಲಿ ಅವರು ಎಳ್ಳುಕಾಳ ಮೊನೆಯಷ್ಟು ಕೂಡ ಹಿಂದೆ ಬೀಳಲಿಲ್ಲ. ॥ 1.28 ॥

'ಪ್ರತಿಫಲವು ಅನಗತ್ಯವಾಗಿ ವಿಳಂಬವಾದರೆ, ಅಥವಾ ಬಹು ದೀರ್ಘಕಾಲದ ವರೆಗೆ ಕೊನೆಯೇ ಇಲ್ಲದಂತೆ ನಿಷ್ಫಲವಾಗಿ ದುಡಿಯಬೇಕಾಗಿ ಬಂದರೆ, ಮಾನವನ ಹೃದಯ ಸಹಿಸದು, ಭರಿಸದು.' ॥ 1.29 ॥

ಆಕ್ರಮಣಕಾರರಿಗೂ ಬೇಜಾರಾಗಿದೆ. ಬರೀ ಯುದ್ಧ! ಮನೆ, ಮಠ, ಮಡದಿ ಮಕ್ಕಳು ಎಲ್ಲ ಬಿಟ್ಟು ಎಲ್ಲೋ ಬಂದಾಗಿದೆ. ಬರೀ ಯುದ್ಧ ಸಾಕಾಗಿ ಹೋಗಿದೆ. 'ಇದೊಂದು ಮುಗಿದುಬಿಡಲಿ, ತಮ್ಮ ತಮ್ಮ ಮನೆಗೆ ಬೇಗನೇ ಹೋಗುವಂತಾಗಲಿ' ಎಂದು ದೇವರನ್ನು ಸದಾ ಪ್ರಾರ್ಥಿಸುತ್ತಿದ್ದಾರೆ.

ಫ್ರೈಜಿಯನ್ ಮರಳ ದಂಡೆಯ ಮೇಲಿನ ಸುಂದರ ನಗರದ ಜನರೂ ಸಹ (ಈಲಿಯನ್) ಅಷ್ಟೇ. ಯುದ್ಧ ಅವರಿಗೂ ಸಾಕಾಗಿಹೋಗಿದೆ.

'ಈ ಭಯಾನಕ ವಾತಾವರಣ ತಗ್ಗಲಿ, ಅಪಾಯದ ಕ್ಷಣ ಕರಗಲಿ, ಮಾರಣಾಂತಿಕ ಯುದ್ಧ ಅಂತ್ಯಗೊಳ್ಳಲಿ ಎಂದು ಅವರೂ ಸಹ ದೇವರನ್ನು ಪ್ರಾರ್ಥನೆ ಮಾಡುತ್ತಿದ್ದಾರೆ. ॥ 1.30 ॥

ಗ್ರೀಸ ದೇಶದಿಂದ ಬಂದ ಹಡಗುಗಳು ಫ್ರೈಜಿಯನ್ ದಡದ ಮೇಲೆ ಬೀಡುಬಿಟ್ಟು ಸುಮಾರು ವರ್ಷಗಳಾಗಿವೆ, ಸನಿಹ ಸನಿಹ 10 ವರ್ಷಗಳಾಗುತ್ತ ಬಂದಿದೆ. ಬಹುಕಾಲ ಅವು ನೀರಿಗಿಳಿದೇ ಇಲ್ಲ. ಅವೇನು ತೇಲುವುದನ್ನೇ ಮರೆತು ಬಿಟ್ಟಿವೆಯೋ ಏನೋ! ॥ 1.31 ॥

ಗ್ರೀಕರಲ್ಲಿ ಕೆಲವರು ಮನೆ ಮಠ ಸಂಸಾರ ಎಲ್ಲ ಬಿಟ್ಟು ಬಂದಿದ್ದರೆ, ಕೆಲವರು ಮಡದಿ ಮಕ್ಕಳು ಸಂಸಾರ ಸಮೇತ ಬಂದವರಿದ್ದಾರೆ. ಅಂಥವರ ಮಕ್ಕಳಿಗೆ ಈಗ ಗ್ರೀಕ ದೇಶವೇ ಅನ್ಯ ದೇಶವಾಗಿ ಕಾಣುತ್ತಿದೆ. ಪರದೇಶ ಎನ್ನುವ ಹಾಗಾಗಿದೆ.

ಇದ್ದೀತು, ಗ್ರೀಸ ದೇಶ, ಅಲ್ಲಿನ ಜೀವನ ಒಂದು ಹಳೆಯ ಕಾಲದ ನೆನಪು. ನೆನಪು ಮಾಡಿಕೊಂಡರೆ ಮಾತ್ರ ಸತ್ಯ, ಅನ್ಯಥಾ ಅದೆಲ್ಲವೂ ಕನಸೇ. ಅದೆಲ್ಲ ಬೇರೆ(ಯವರ) ಕಥೆ ಏನೋ ಅನ್ನುವಂತಾಗಿ ಹೋಗಿದೆ. ॥ 1.32 ॥

ಅನೇಕರು ತಮ್ಮ ಸಂಸಾರವನ್ನು ಹಿಂದೆ ಬಿಟ್ಟು ಬಂದಿದ್ದಾರೆ. ಅವರ ಆಯುಷ್ಯದ ಅತಿ ದೀರ್ಘಾವಧಿ ಕಾಲ ಈ ಫ್ರೈಜಿಯನ್ ಸಮುದ್ರ ದಂಡೆಯ ಮೇಲೆಯೇ ಕಳೆದಿದೆ. ಎಲ್ಲರಿಗೂ ಅತ್ಯಂತ ಬೇಸರವಾಗಿದೆ. ಪ್ರಕೃತಿ ತನ್ನ ಕಾರ್ಯ ಮಾಡುತ್ತಲೇ ಇದೆ. ಇಲ್ಲಿನವರಿಗೂ ವಯಸ್ಸಾಗುತ್ತಿದೆ, ಅಲ್ಲಿನವರಿಗೂ ವಯಸ್ಸಾಗುತ್ತಿದೆ. ಹಿಂದೆ ಬಿಟ್ಟು ಬಂದ ತಮ್ಮ ಪ್ರೀತಿಪಾತ್ರರ ಮುಖಗಳು ಮಾಸುತ್ತಿದೆ, ನೆನಪು ಮಸುಕಾಗುತ್ತಿದೆ.

ಆದರೆ ಕನಸು ಕಾಣುವುದು, ಅವರನ್ನು ನೆನೆದು ಸಂತಸ ಪಡುವುದು ಇದಾವುದೂ ತಪ್ಪಿಲ್ಲ.

ತಮ್ಮ ಮಾತೃಭೂಮಿಗೆ (glebe) ಮರಳಿ ಹೋಗಬೇಕು, ಆರಾಮವಾಗಿ ಬೆಂಕಿ ಕಾಯಿಸುತ್ತ ಬೆಚ್ಚನೆ ಕುಳಿತಿರಬೇಕೆಂಬ ಬಯಕೆ ಹೆಚ್ಚುತ್ತಿದೆ. ಹೆಲ್ಲಾಸ್(Hellas) ಆಖಾತಗಳಲ್ಲಿ ತಿರುಗಾಡಬೇಕೆಂಬ ಬಯಕೆ ಅನೇಕ ಯೋಧರಲ್ಲಿ ತೀವ್ರವಾಗಿ ಕಾಡುತ್ತಿದೆ. ॥ 1.33 ॥

ಸಮುದ್ರದ ತೆರೆಗಳು ತೊನೆತೊನೆದು ಬರುವಾಗ ಸುಂದರವಾದ ಬಣ್ಣ ಬಣ್ಣದ ಕಲ್ಲು, ಶಂಖ, ಸಿಂಪಿ ಮುಂತಾದವನ್ನು ತಂದು ದಂಡೆಯ ಮೇಲೆ ಚೆಲ್ಲುತ್ತವೆ. ಆದರೆ ಮರಳಿ ಹೋಗುವಾಗ ಮತ್ತೆ ಅವನ್ನೆಲ್ಲ ಹಿಂದಕ್ಕೆ ಒಯ್ಯುತ್ತವೆ.

ಟ್ರೋಜನರ ಯುದ್ಧ ಕೂಡ ಇದೇ ರೀತಿ; ಮುಗಿಯಲೂ ಒಲ್ಲದು, ಬಿಡಲೂ ಒಲ್ಲದು. ಕೆಲಕಾಲ ವಿರಾಮ, ಮತ್ತೆ ಘೋರ ಕದನ, ಹತ್ತು ವರ್ಷಗಳಿಂದ ಇದೇ ರೀತಿ ಟ್ರೋಜನರಿಗೂ ಆರ್ಗೈವರಿಗೂ ಯುದ್ಧ ನಡೆದೇ ಇದೆ.

ಕೆರಿಯಾ(Caria), ಲೈಸಿಯಾ (Lycia), ಥ್ರೇಸ (Thrace) ಇವರು ಟ್ರೋಜನರ ಸಹಾಯಕರು; ಬಲಿಷ್ಠರಾದ ಗ್ರೀಕರ ಜೊತೆಗೆ ಅಖೈಯಾ (Achaia) ಸೇರಿದ್ದಾರೆ. ಹೀಗಾಗಿ ಯಾರ ಕಡೆಗೂ ಜಯ ದೊರೆಯದೇ ಸತತ ಯುದ್ಧ ನಡೆದುಕೊಂಡೇ ಇದೆ. ಮುಗಿಯುವ ಲಕ್ಷಣ ಕಾಣುತ್ತಲೇ ಇಲ್ಲ. ॥ 1.34 ॥

ಭಯಾನಕವಾದ ಸಾವು, ನೋವು, ಮಾರಣಾಂತಿಕ ಗಾಯಗಳು, ಕೆಲವೆಡೆ ಸೋಲಿನ ಹತಾಶೆ, ಕೆಲವೆಡೆ ಗೆಲುವಿನ ಸಂಭ್ರಮ, ಕೆಲವೆಡೆ ಆಕ್ರಂದನ, ಭಯ,

ಭರವಸೆ, ನೆನಪುಗಳು, ಹೃದಯಗಳ ತೊಳಲಾಟ, ಕಳವಳ, ಯೋಧರ ಪ್ರಾಣ, ದೇಶ ದೇಶಗಳ ಬಲ ಎಲ್ಲವನ್ನೂ ನಿರ್ಲಕ್ಷ್ಯತನದಿಂದ ಬೀಸಾಡಿದಂತಾಗಿದೆ. ವಿಧಿಯ ತಕ್ಕಡಿಯಲ್ಲಿ ಇವನ್ನೆಲ್ಲ ಬೇಕಾಬಿಟ್ಟಿ ಹರಡಿದಂತಾಗಿದೆ. ಆದರೆ ತಕ್ಕಡಿ ಮಾತ್ರ ಸಮಕ್ಕೆ ಬರುತ್ತಲೇ ಇಲ್ಲ.

ಅದೃಶ್ಯ ಹಸ್ತಗಳ ಕೈವಾಡವೇನೋ! ತಕ್ಕಡಿ ನಿಲ್ಲುತ್ತಲೇ ಇಲ್ಲ, ಒಮ್ಮೆ ಆ ಕಡೆಗೆ ಒಮ್ಮೆ ಈ ಕಡೆಗೆ ಓಲಾಡುತ್ತಲೇ ಇದೆ. ॥ 1.35 ॥

ಮುಖ್ಯವಾಗಿ ಈ ಯುದ್ಧದಲ್ಲಿ ಕೇವಲ ಮನುಷ್ಯರಷ್ಟೇ ಹೋರಾಡುತ್ತಿಲ್ಲ. ಕೇವಲ ವೀರರು heroes half-divine ಮಹಾಬಲಶಾಲಿಗಳು ಮಾತ್ರ ಹೋರಾಡುತ್ತಿಲ್ಲ; ದೇವತೆಗಳೂ ಇದರಲ್ಲಿ ಪಾಲ್ಗೊಂಡಿದ್ದಾರೆ. ಹೀಗಾಗಿ ಗೆಲುವು ಒಮ್ಮೆ ಆ ಕಡೆಗೆ ಅನಿಸಿದರೆ ಮತ್ತೊಮ್ಮೆ ಈ ಕಡೆಗೆ ಅನಿಸುತ್ತದೆ. ಪರಿಣಾಮದ ತಕ್ಕಡಿ ಒಂದೇ ಕಡೆಗೆ ನಿಲ್ಲದೇ ತೂಗಾಡುತ್ತಲೇ ಇದೆ.

ಓಲಿಂಪಸ್(Olympus) ಎಂಬುದು ಗ್ರೀಸ ದೇಶದಲ್ಲಿನ ಅತಿ ಎತ್ತರದ ಬೆಟ್ಟ. ಅದೇ ರೀತಿ ಟ್ರಾಯ್‌ನಲ್ಲಿ ಇಡಾ(Ida) ಅತಿ ಎತ್ತರದ ಪರ್ವತ ಶ್ರೇಣಿ. ವಿಜಯವು ಈ ಓಲಿಂಪಸ್ ಮತ್ತು ಇಡಾಗಳ ಮಧ್ಯೆ ಓಲಾಡುತ್ತಿತ್ತು. ಈ ಪರ್ವತಗಳ ಮೇಲೆ ದೇವತೆಗಳು ವಾಸವಾಗಿದ್ದರೆಂದು ಗ್ರೀಕ ಪುರಾಣಗಳು ಹೇಳುತ್ತವೆ. ಉದಾಹರಣೆಗೆ, ಇಡಾ ಪರ್ವತದ ಮೇಲೆ ಸ್ಯೂಸ್(Zeus) ದೇವತೆ ವಾಸವಾಗಿದ್ದನು. ಆ ದೇವತೆಗಳೇ ಕೆಳಿಗಿಳಿದು ಬಂದು ಯುದ್ಧದಲ್ಲಿ ಪಾಲ್ಗೊಳ್ಳುತ್ತಿದ್ದರು ಎಂದು ಬಹುತೇಕ ಎಲ್ಲರೂ ಒಪ್ಪುತ್ತಾರೆ. ॥ 1.36 ॥

ದೇವತೆಗಳು ಸ್ವತಃ ಬಂದು ಈ ಯುದ್ಧದಲ್ಲಿ ಭಾಗವಹಿಸಿದ್ದು ನಿಜ. ಮಾನವರ ಕಣ್ಣೆದುರು ಅವರು ಸುಲಭವಾಗಿ ಕಾಣಿಸಿಕೊಳ್ಳುವುದಿಲ್ಲವೆಂಬುದು ನಿಜ; ಆದರೆ, ಯಾರೂ ತಮ್ಮನ್ನು ಗುರುತಿಸದಂತೆ ಪ್ರಚ್ಛನ್ನ ರೂಪದಲ್ಲಿ ಬಂದು ಅವರು ಯುದ್ಧ ಮಾಡುತ್ತಿದ್ದರು. ಅವರು ಮರಣರಹಿತರು, ಸುಂದರಾಂಗರು; ಕಣ್ಣಿಗೆ ಕಾಣಿಸಿದ್ದೇ ಆದರೆ ಅವರನ್ನು ಗುರುತಿಸದೇ ಇರುವುದು ಸಾಧ್ಯವೇ ಇಲ್ಲ.

ಆದರೆ ವೇಷ ಮರೆಸದೇ ಯೋಧರ ನಡುವೆ ಯೋಧರಾಗಿ ಯುದ್ಧ ಮಾಡುತ್ತಿದ್ದರೂ ಯಾರೂ ಅಷ್ಟು ವ್ಯವಧಾನ ಪೂರ್ವಕವಾಗಿ ಗಮನಿಸಿ ಗುರುತಿಸಬಹುದಾದ ಸಾಧ್ಯತೆ ಕಡಿಮೆಯೇ. ಆದರೆ, ಅಸದಳವಾದ ಅವರ ಪರಾಕ್ರಮ, ಸಾಹಸಗಳನ್ನು ಕಂಡವರು ಮಾತ್ರ ಅವರನ್ನು ಕಂಡ ಮಾತ್ರಕ್ಕೆ ಬೆಚ್ಚಿಬೀಳುತ್ತಿದ್ದರು.

ದೇವತೆಗಳೇ ಯುದ್ಧ ಮಾಡುತ್ತಿದ್ದಾರೆ ಎಂಬ ಸಂಗತಿಯೇ ಅನೇಕರ ಜಂಘಾಬಲ ಉಡುಗಿಸಿತ್ತು. ಕಣ್ಣಿಗೆ ಕಾಣದ, ಕಿವಿಗಳಿಗೆ ಕೇಳದ ಅವರ ಜೊತೆ ಯುದ್ಧ ಮಾಡುವುದು ಹೇಗೆ? ಬೈತಿರಿಸಿಕೊಂಡರೂ ಬೈತಿಡಲಾಗದ ಅವರ ಮಹತ್ತರ ತೇಜಸ್ಸನ್ನು ಮರೆ ಮಾಡಬಲ್ಲವರು ಯಾರು?

ಮೇಲಾಗಿ ಜನನ ಮರಣಗಳಿಗೆ ಅತೀತರಾಗಿರುವ ಅವರು ಯುದ್ಧದಲ್ಲಿ ಭಾಗಿಯಾಗಿದ್ದಾರೆ ಎಂಬ ಸಂಗತಿಯೇ ಅನೇಕರನ್ನು ಕಂಗೆಡಿಸಿತ್ತು. ಇನ್ನು ಹೆದರಿಕೆ ಬರದೇ ಇರಲು ಸಾಧ್ಯವೇ?

•ಮೂಲ ಪಾಠವನ್ನು ಓದಿದರೆ ಅಲ್ಲಿರುವ ಪ್ರಾಸ, ಲಯ ಇವುಗಳ ಸೌಂದರ್ಯದ ಪರಿಚಯವಾಗುತ್ತದೆ. ಅನುವಾದದಲ್ಲಿ, ಅದೂ ಗದ್ಯಾನುವಾದದಲ್ಲಿ ಮೂಲ ಸೌಂದರ್ಯವನ್ನು ತಂದು ತೋರಿಸುವುದು ಯಾರಿಂದಲೂ ಸಾಧ್ಯವಿಲ್ಲ.

ವಿಶ್ವದೆತ್ತರದ ಕವಿಗೆ ಕೈಗಳನೆತ್ತಿ ಕೈಮುಗಿಯಬಹುದು, ಅಷ್ಟೇ. ॥ 1.37 ॥

ದೇವತೆಗಳು ವಾಸಿಸುವ ತಾಣ ದುಃಖರಹಿತವಾದುದು. ಕ್ಲೇಶ, ದುಃಖ ಅಲ್ಲಿ ಏನೂ ಇಲ್ಲ. ಮುಕ್ತ, ಸ್ವಚ್ಛಂದ ಲೋಕಗಳಿಂದ ಲೋಕಗಳಿಂದ ಬಂದ ಬಲಶಾಲಿಗಳಾದ ಅನೇಕ ದೇವತೆಗಳು ಅಗೋಚರರಾಗಿಯೂ ಯುದ್ಧದಲ್ಲಿ ಪಾಲ್ಗೊಂಡಿದ್ದರು. ॥ 1.38 ॥

ವಿಶಾಲವಾದ ಸಾಗರ, ಅಲ್ಲೋಲಕಲ್ಲೋಲ ಅಲೆಗಳು, ಅವುಗಳ ಅಂಚಿಗೆ ನೀಲನಭವರ್ಣದ ಥಳಕಿನ ಕುಚ್ಚು, ಕಡುನೀಲವರ್ಣದ ಆಗಸದ ಹಿನ್ನೆಲೆಯಲ್ಲಿ ಇದು ಸಿಂಹದ ಆಯಾಲಿನಂತೆ ಭಾಸವಾಗುತ್ತಿತ್ತು. ಇದು ನಯನಮನೋಹರ ದೃಶ್ಯದ ಜೊತೆಗೆ ಭಯಾವಹವೂ ಆಗಿತ್ತು.

ಇದು ಪೊಸೈಡಾನ್‌ನ ಅಧಿಕಾರದಲ್ಲಿರುವ ಆಯುಧ. ಇದರ ಮೂಲಕ ಅವನು ಮಹಾ ಭೂಕಂಪವನ್ನೇ ಸೃಷ್ಟಿಸುತ್ತಾನೆ. ತನ್ನ ತ್ರಿಶೂಲದಿಂದ ತಿವಿದು ಡ್ರಾಗನ್ ರಾಕ್ಷಸ ಪಕ್ಷಿಯನ್ನು ಎಚ್ಚರಿಸಿದರೆ ತೀರಿತು, ಪ್ರಳಯ ಸದೃಶ ಅನಾಹುತ ಶತಸಿದ್ಧ. ಪ್ರಕೃತಿಯ ಗುಹೆಗಳಲ್ಲಿ ನಿದ್ರಿಸುತ್ತಿರುವ ದುಷ್ಟ ದೈತ್ಯ ಶಕ್ತಿಗಳನ್ನೆಲ್ಲ ಕೆಣಕಿ ಎಚ್ಚರಿಸಿ ಯುದ್ಧಕ್ಕೆ ಕಳಿಸಿದ ಹಾಗೆ ಇದು. ಸರ್ವನಾಶ ಖಂಡಿತ. ಅವನು ಟ್ರಾಯ್ ಜನರ ಮೇಲೆ ಯುದ್ಧ ಮಾಡಿದ್ದೇ ಹೀಗೆ.

•ಪೊಸೈಡಾನ್(Poseidon) ಇವನು ಸಮುದ್ರ ರಾಜ. ಜಲ ಸಾಗರವನ್ನೇ ಆಳುವ ಸಾಮ್ರಾಟ್ ಇವನು. ನಮ್ಮ ಭಾರತೀಯ ಪುರಾಣಗಳ ಪ್ರಕಾರ ಇವನು ವರುಣ.

ಇತ್ತೀಚಿಗೆ ಮಳೆಯನ್ನು ವರಣನ ಆರ್ಭಟ ಎಂದು ಹೇಳುತ್ತ ಇವನನ್ನು ಮಳೆಯ ದೇವತೆ ಅನ್ನುವ ಹಾಗೆ ಬಿಂಬಿಸಲಾಗಿದೆ. ಆದರೆ ನಿಜವಾಗಿ ಮಳೆಯ ಅಧಿದೇವತೆ ಇಂದ್ರ. ಮಿಂಚು ಇವನ ಆಯುಧ.

ಭೂಮಿಯ ಮೇಲಿನ ಜಲ ಸಂಪತ್ತು ವರುಣನ ಆಧೀನ. ಅದು ಅವನ ಶಕ್ತಿ. ಚಂಡ ಮಾರುತ, ಸುನಾಮಿ, ಭೂಕಂಪದಂಥ ಅನಾಹುತಗಳೇ ಅವನ ಆಯುಧ.

•ಡ್ರಾಗನ್(Dragon) ಇದು ಕಾಲ್ಪನಿಕ ಭಯಾನಕ ರಾಕ್ಷಸ ಪಕ್ಷಿ. ಗ್ರೀಕರ ಪುರಾಣಗಳಲ್ಲಿ ಪದೇ ಪದೇ ಉಕ್ತವಾಗುವ ಅತಿ ಕ್ರೂರ ದೈತ್ಯ ಶಕ್ತಿಯ ಪಕ್ಷಿ ಇದು. ಇದು ಪ್ರಾಣಿಯೂ ಹೌದು, ಪಕ್ಷಿಯೂ ಹೌದು. ಭಯಾನಕ ಹಲ್ಲಿ (monster lizard) ಅಥವಾ ಮಹಾ ಘಟಸರ್ಪ, ತೀಕ್ಷ್ಣ ಪಂಜುಗಳಿರುವ ಕಾಲುಗಳು, ಹಾರಲು ರಾಕ್ಷಸ ರೆಕ್ಕೆಗಳು; ಇದು ಮಹಾ ದುಷ್ಟ ಶಕ್ತಿಯ ಸಂಕೇತ. ವರುಣನು ಈ ದೈತ್ಯ ಪಕ್ಷಿಯನ್ನೇ ತಿವಿದು ಎಚ್ಚರಿಸಿ ಯುದ್ಧಕ್ಕೆ ಬಿಡುವುನು.

•ಇಲ್ಲಿ metaphor ಪ್ರಯೋಗವಿದೆ. ॥ 1.39 ॥

ಐಜೀಸ್(Aegis) ಅನ್ನುವುದು ಸ್ಯೂಸ್(Zeus) ಹಾಗೂ ಅಥೀನಾ (Athena) ದೇವತೆಗಳ ಯುದ್ಧ ಕವಚ. ಈ ಕವಚ ಧರಿಸಿ ಹೀರಾ(Hera) ಯುದ್ಧದಲ್ಲಿ ಅದೃಶ್ಯಳಾಗಿ ಪಾಲ್ಗೊಳ್ಳುತ್ತಾಳೆ.

ವಿಧಿಯ ಸಂಕಲ್ಪ ನಮಗೆ ಅರಿವಾಗದಿರುವ ಕಾರಣ ಇದೇ. ಕಾಣದ ಕವಚ ಧರಿಸಿಯೇ ಹೀರಾ ಸಂಕಲ್ಪದ ರೂಪದಲ್ಲಿ ಮನುಷ್ಯರ ಮಧ್ಯೆ ಬರುತ್ತಾಳೆ. ಈಕೆ ಸ್ಯೂಸ್‌ನ ಪತ್ನಿ. (ನಮ್ಮ ಇಂದ್ರನ ಪತ್ನಿ ಶಚಿ ಇದ್ದ ಹಾಗೆ) ಈಕೆ ಬರುವುದು ವಿಧಿಯ ಕಾಣದ ಸಂಕಲ್ಪದ ರೂಪದಲ್ಲಿ. ಎಲ್ಲರೂ ವಿಧಿ ಎಂಬ ಶಸ್ತ್ರದ ಎದಿರು ತಲೆಬಾಗಲೇ ಬೇಕು, ಅದನ್ನು ಬದಲಾಯಿಸಲಾಗದು, ಅದು ಅಪರಿಹಾರ್ಯವೆನ್ನುವಂತೆ ವ್ಯವಸ್ಥೆ ರೂಪಿಸಿ ಹೀರಾ ಕೆಲಸ ಮಾಡುತ್ತಾಳೆ.

ಶಾಂತ, ನಿಶ್ಚಲ, ಮೌನ ಆದರೆ ಖಚಿತ ಪರಿಣಾಮ ಕಾರಕ ವಿಧಿಯ ಸಂಕಲ್ಪದ ಪ್ರತಿರೂಪವಾಗಿ ಹೀರಾ ಯುದ್ಧದಲ್ಲಿ, ವಿನಾಶದ ಕಾರ್ಯದಲ್ಲಿ ಪಾಲ್ಗೊಳ್ಳುತ್ತಾಳೆ. ॥ 1.40 ॥

(ಸಶೇಷ)

# ವಾರ್ತಾಪತ್ರ

## ಶ್ರೀ ಅರವಿಂದ ಸಂಕೀರ್ಣ

ಜೆ.ಪಿ. ನಗರ 1ನೇ ಹಂತ, ಬೆಂಗಳೂರು.

ದಿನಾಂಕ 10ನೇ ಜುಲೈ 2022 ಭಾನುವಾರ, ಬೆಳಿಗ್ಗೆ 9.30 ರಿಂದ 12.30 ರವರೆಗೆ ಶ್ರೀ ಅರವಿಂದೊ ಸಂಕೀರ್ಣ ಟ್ರಸ್ಟ್ (ರಿ.) ಮತ್ತು ಶ್ರೀ ಅರವಿಂದೋ ಸೊಸೈಟಿ ರಾಜ್ಯ ಸಮಿತಿ ಕರ್ನಾಟಕ ಜಂಟಿಯಾಗಿ "Man in the Universe" ವಿಷಯವಾಗಿ ಅರ್ಧ ದಿನದ ಕಾರ್ಯಗಾರವನ್ನು ಸಂಪನ್ಮೂಲ ವ್ಯಕ್ತಿ ಡಾ॥ ಅಜಿತ್ ಸಬ್ನೀಸ್‌ರವರು ನಡೆಸಿಕೊಟ್ಟರು. ವಿವಿಧ ಕ್ಷೇತ್ರಗಳಿಂದ ಆಗಮಿಸಿದ ಇಂಜಿನಿಯರ್‌ಗಳು, ತಂತ್ರಜ್ಞರು, ಶಿಕ್ಷಕರು ಮತ್ತು ಶ್ರೀಮಾತಾರವಿಂದರ ಭಕ್ತರು ಕಾರ್ಯಗಾರದಲ್ಲಿ ಭಾಗವಹಿಸಿ ತರಬೇತಿ ಪಡೆದುಕೊಂಡರು.

ದಿನಾಂಕ 23ನೇ ಜುಲೈ ಶನಿವಾರ ಸಂಜೆ 4.00 ರಿಂದ 5.30 ಗಂಟೆಯ ವರೆಗೆ ಶ್ರೀ ನೀಲೇಶ್ ಮಾರಿಕ್‌ರವರು ಶ್ರೀ ಅರವಿಂದರ 150ನೇ ಜನ್ಮ ವಾರ್ಷಿಕೋತ್ಸವ ಅಂಗವಾಗಿ "The Psychic Transformation" ಕುರಿತು ಆನ್‌ಲೈನ್ ಮೂಲಕ ಪ್ರವಚನ ನೀಡಿದರು. ಜೂಮ್ ಲಿಂಕ್/ಯುಟ್ಯೂಬ್ ಮೂಲಕ ಅನೇಕ ಗುರು–ಬಂಧುಗಳು ಮತ್ತು ಶ್ರೀಮಾತಾರವಿಂದರ ಭಕ್ತರು ಆಸಕ್ತಿಯಿಂದ ಭಾಗವಹಿಸಿದರು.

ಶ್ರೀ ಅರವಿಂದೋ ಸೊಸೈಟಿ ರಾಜ್ಯ ಸಮಿತಿ ಕರ್ನಾಟಕ ಮತ್ತು ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.) ಜಂಟಿಯಾಗಿ ದಿನಾಂಕ 7ನೇ ಆಗಸ್ಟ್ 2022, ಭಾನುವಾರ, ಬೆಂಗಳೂರಿನ ನಿಮ್ಹಾನ್ಸ್ ಕನ್ವೆನ್ಷನ್ ಸೆಂಟರ್‌ನಲ್ಲಿ ಶ್ರೀಅರವಿಂದರ 150ನೇ ಜನ್ಮದಿನದ ಸ್ಮರಣಾರ್ಥ ಹಾಗೂ 75ನೇ ಭಾರತದ ಸ್ವಾತಂತ್ರ್ಯೋತ್ಸವ ಆಚರಣೆ ಅಂಗವಾಗಿ ವಿಷಯ – 'ಶ್ರೀ ಅರವಿಂದರ ಬೆಳಕಿನಲ್ಲಿ ಭಾರತದ ಪುನರುತ್ಥಾನ ಮತ್ತು ಭಾರತೀಯ ರಾಷ್ಟ್ರೀಯತೆ' ಕುರಿತು ಒಂದು ದಿನದ ರಾಷ್ಟ್ರೀಯ ಸಮ್ಮೇಳನವನ್ನು ಬೆಳಗ್ಗೆ 9.00 ರಿಂದ ರಾತ್ರಿ 9.00ರ ವರೆಗೂ ಆಯೋಜಿಸಲಾಗಿತ್ತು. ಸಮ್ಮೇಳನಕ್ಕೆ ಗೌರವಾನ್ವಿತ ಬೆಂಗಳೂರು ದಕ್ಷಿಣ ಕ್ಷೇತ್ರದ ಲೋಕಸಭಾ ಸದಸ್ಯರಾದ ಶ್ರೀ ಎಲ್.ಎಸ್. ತೇಜಸ್ವಿ ಸೂರ್ಯರವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಗೌರವ ಅತಿಥಿಗಳಾಗಿ ಶ್ರೀ ಚಕ್ರವರ್ತಿ ಸೂಲಿಬೆಲೆ, ಡಾ॥ ಮಕರಂದ ಪರಾಂಜಪೆ, ಡಾ॥ ಅಲೋಕ್ ಪಾಂಡೆ, ಶ್ರೀ ಆರ್ಯಮುನಿ

ಮತ್ತು ಶ್ರೀಶ್ರೀಶ್ರೀ ವೀರೇಶಾನಂದ ಸರಸ್ವತಿ ಸ್ವಾಮಿ ರವರುಗಳು ವೇದಿಕೆ ಮೇಲೆ ಉಪಸ್ಥಿತರಿದ್ದರು. ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ ಧರ್ಮದರ್ಶಿ ಡಾ॥ ರ.ವಿ. ಜಹಾಗೀರದಾರ ಇವರು ಸಹ ವೇದಿಕೆ ಮೇಲೆ ಉಪಸ್ಥಿತರಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಅರವಿಂದೋ ಸೊಸೈಟಿ ರಾಜ್ಯ ಸಮಿತಿ ಅಧ್ಯಕ್ಷರು ಹಾಗೂ ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ ಕಾರ್ಯನಿರ್ವಾಹಕ ಧರ್ಮದರ್ಶಿಗಳಾದ ಡಾ॥ ಅಜಿತ್ ಸಬ್ನೀಸ್‌ರವರು ವಹಿಸಿದರು. ಕಾರ್ಯಕ್ರಮವು ದೀಪ ಬೆಳಗುವುದರೊಂದಿಗೆ ಉದ್ಘಾಟನೆಯಾಯಿತು. ಮುಖ್ಯ ಅತಿಥಿಗಳಾಗಿ ಆಗಮಿಸಿದ ಶ್ರೀ ಎಲ್.ಎಸ್. ತೇಜಸ್ವಿ ಸೂರ್ಯರವರು 'ಸ್ವಾತಂತ್ರ್ಯ ಸಂಗ್ರಾಮದಲ್ಲಿ ಶ್ರೀ ಅರವಿಂದರ ಪಾತ್ರ ಮತ್ತು ಭಾರತೀಯ ರಾಷ್ಟ್ರೀಯತೆ' ಕುರಿತು ಅತಿ ಸೊಗಸಾಗಿ ಮಾತನಾಡಿದರು. ನಂತರ ಶ್ರೀ ಚಕ್ರವರ್ತಿ ಸೂಲಿಬೆಲೆ, ಡಾ॥ ಮಕರಂದ ಪರಾಂಜಪೆ, ಡಾ॥ ಅಲೋಕ್ ಪಾಂಡೆ ಹಾಗೂ ತುಮಕೂರು ರಾಮಕೃಷ್ಣ–ವಿವೇಕಾನಂದ ಅಶ್ರಮದ ಶ್ರೀಶ್ರೀಶ್ರೀ ವೀರೇಶಾನಂದ ಸರಸ್ವತಿ ಸ್ವಾಮಿ ಇವರುಗಳು ಸಹ ಶ್ರೀ ಅರವಿಂದರ ಕುರಿತು ಪ್ರವಚನ ನೀಡಿದರು. ಕಾರ್ಯಕ್ರಮದ ಸಮಾರೋಪ ಭಾಷಣವನ್ನು ಸಂಸ್ಥೆಯ ಅಧ್ಯಕ್ಷರಾದ ಡಾ॥ ಅಜಿತ್ ಸಬ್ನೀಸ್‌ರವರು ನೆರವೇರಿಸಿದರು.

ಕಾರ್ಯಕ್ರಮದಲ್ಲಿ ರಾಜ್ಯಮಟ್ಟದ ಪ್ರಬಂಧ ಹಾಗೂ ಭಾಷಣ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನಗಳನ್ನು ವಿತರಿಸಲಾಯಿತು. ಆನಂತರ, ಬೆಂಗಳೂರಿನ ಪ್ರಭಾತ್ ಕಲಾವಿದರು 'ಧರ್ಮ ಭೂಮಿ' ಹಾಗೂ ಪೂಣೆಯ ಅಂಜಲಿ ಬಾಗಲ್ ತಂಡದವರು 'ಭವಾನಿ ಭಾರತಿ' ಶೀರ್ಷಿಕೆ ಅಡಿಯಲ್ಲಿ ಸಾಂಸ್ಕೃತಿಕ ಕಾರ್ಯಕ್ರಮವನ್ನು ಪ್ರದರ್ಶಿಸಿದರು. ಈ ಕಾರ್ಯಕ್ರಮಕ್ಕೆ ಸುಮಾರು ಒಂದು ಸಾವಿರ ಇನ್ನೂರು ಜನ ಆಸಕ್ತಿಯಿಂದ ಬೆಳಿಗ್ಗೆಯಿಂದ ಸಂಜೆವರೆಗೂ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ದಿನಾಂಕ 15ನೇ ಆಗಸ್ಟ್ ಸೋಮವಾರ ಮೀರಾಂಬಿಕ ಸ್ಕೂಲ್ ಫಾರ್ ನ್ಯೂ ಏಜ್ ಶಿಕ್ಷಣ ಸಂಸ್ಥೆಯಲ್ಲಿ 75ನೇ ಸ್ವಾತಂತ್ರ್ಯದ ಅಮೃತ ಮಹೋತ್ಸವ ಮತ್ತು ಶ್ರೀ ಅರವಿಂದರ 150ನೇ ಜನ್ಮದಿನಾಚರಣೆಯನ್ನು ಆಚರಿಸಲಾಯಿತು. ಶಾಲೆಯ ಅಧ್ಯಕ್ಷರಾದ ಡಾ॥ ಅಜಿತ್ ಸಬ್ನೀಸ್ ಧ್ವಜಾರೋಹಣ ಮಾಡಿ ವಿದ್ಯಾರ್ಥಿಗಳಿಗೆ ಸ್ವಾತಂತ್ರ್ಯದ ಮಹತ್ವವನ್ನು ತಿಳಿಸಿದರು. ಪ್ರಾಂಶುಪಾಲರು, ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಸಂಭ್ರಮದಿಂದ ಭಾಗವಹಿಸಿದರು. ವಿದ್ಯಾರ್ಥಿಗಳು ಸ್ವಾತಂತ್ರ್ಯ

ಹೋರಾಟದಲ್ಲಿ ತ್ಯಾಗ, ಬಲಿದಾನ ಮಾಡಿದ ಮಹನೀಯರ ಬಗ್ಗೆ ಮಾತನಾಡಿದರು. ವಿವಿಧ ಬಗೆಯ ಕವಾಯಿತಗಳನ್ನು ವಿದ್ಯಾರ್ಥಿಗಳು ಪ್ರದರ್ಶಿಸಿದರು.

ದಿನಾಂಕ 15ನೇ ಆಗಸ್ಟ್ ಸೋಮವಾರ ಶ್ರೀ ಅರವಿಂದೋರವರ ಜನ್ಮ ದಿನಾಚರಣೆ ಕಾರ್ಯಕ್ರಮವನ್ನು ಶ್ರೀ ಅರವಿಂದ ಸಂಕೀರ್ಣದಲ್ಲಿ ಏರ್ಪಡಿಸಲಾಗಿತ್ತು. ಬೆಳಿಗ್ಗೆ 10.30 ರಿಂದ 11.00 ರವರೆಗೆ ಸಾಮೂಹಿಕ ಧ್ಯಾನ, ಪ್ರಸಾದ ವಿನಿಯೋಗ ಹಾಗೂ ಸಂದೇಶ ಪತ್ರವನ್ನು ವಿತರಿಸಲಾಯಿತು. ತತ್ಸಂಬಂಧ 11.10 ರಿಂದ 12.10 ರವರೆಗೆ **"**The Transformation - A documentary film on Sri Aurobindo**"** ವಿಷಯದ ಬಗ್ಗೆ ವೀಡಿಯೊ ಪ್ರದರ್ಶನವನ್ನು ಪ್ರದರ್ಶಿಸಲಾಯಿತು. ಕಾರ್ಯಕ್ರಮಕ್ಕೆ ಅನೇಕ ಗುರು–ಬಂಧುಗಳು, ಶ್ರೀ ಅರವಿಂದೋ ಸಂಕೀರ್ಣದ ಸಿಬ್ಬಂದಿ ಹಾಗೂ ಇತರರು ಹಾಜರಿದ್ದರು.

ದಿನಾಂಕ 28ನೇ ಆಗಸ್ಟ್ ಭಾನುವಾರ ಬೆಳಿಗ್ಗೆ 10.30 ರಿಂದ 12.00 ರವರೆಗೆ ಶ್ರೀ ಸಿ.ಹೆಚ್. ನಿರಾಕಾರ್‌ರವರು ಶ್ರೀ ಅರವಿಂದರ 150ನೇ ಜನ್ಮವಾರ್ಷಿಕೋತ್ಸವ ಅಂಗವಾಗಿ **"**Question & Answer Session on The Integral Yoga**"** ಕುರಿತು ಉಪನ್ಯಾಸ ನೀಡಿದರು. ಜೂಮ್ ಲಿಂಕ್/ಯುಟ್ಯೂಬ್ ಮೂಲಕವೂ ಅನೇಕ ಗುರು–ಬಂಧುಗಳು ಮತ್ತು ಶ್ರೀಮಾತಾರವಿಂದರ ಭಕ್ತರು ಆಸಕ್ತಿಯಿಂದ ಭಾಗವಹಿಸಿದರು.

**"**Sri Aurobindo's Sacred Relics**"** ವಿಷಯ ಕುರಿತು ದಿನಾಂಕ 10ನೇ ಆಗಸ್ಟ್ 2022 ರಿಂದ 20ನೇ ಅಕ್ಟೋಬರ್ 2022 ವರೆಗೂ ಶ್ರೀ ಅರವಿಂದ ಸಂಕೀರ್ಣದ ಸಾಂಸ್ಕೃತಿಕ ಸಭಾ ಭವನದಲ್ಲಿ ಫೋಟೋ ಚಿತ್ರಪ್ರದರ್ಶನ ಆಯೋಜಿಸಲಾಗಿದೆ.



ಫೋಟೊ: ಇಮೇಜಿಂಗ್ ಸಾವಿತ್ರಿ

ನಭೋನೀಲಮಯ ಸರೋವರವನ್ನು ರಜತವರ್ಣಗೊಳಿಸಿ
ಗಗನಗಮನದಲಿ ಆತ್ಮಹಂಸವದು ಮಂದಗಮನವಿರಿಸಿ
ಮಂತ್ರಮೋಹಕದ ಧವಳ ಸಾಕಾರ, ಸ್ವಪ್ನ ಪಥದೊಳಗೆ ತೇಲಿ
ಸಂಲಗ್ನಗೊಂಡು ಲಹರಿಗಳ–ಭಾವ–ಜಲ–ನಿನದ ನಾದಗಳಲಿ

**– ಪುಟ್ಟು ಕುಲಕರ್ಣಿ**

**(ಶ್ರೀ ಅರವಿಂದರ 'ಸಾವಿತ್ರಿ'; ದಳ 5 ರೇಣು 3 ಪುಟ 405)**

**RNI No. 22511/1971**
No. of Pages **76 + 4 (Cov. Page)**
KAR Reg No.: RNP/KA/BGS/368/2021-2023
Kannada Monthly Magazine
Date of Publication on 7th of Every Month
Permitted to Post 10th of Every Month. Reg. Valid till: 31-12-2023
Licensed to Post at BG PSO, Mysuru Road, Bengaluru - 560 026



ಫೋಟೊ: ಇಮೇಜಿಂಗ್ ಸಾವಿತ್ರಿ

ನಾನಿರುವೆ ದುರ್ಗೆ, ಅಭಿಮಾನಿ ದೇವಿ ತೇಜದಲಿ ಜ್ಯೋತಿಯಾಗಿ
ನಾನಿರುವೆ ದುರ್ಗೆ, ಶಕ್ತಿಯಧಿದೇವಿ ದೃಢತೆಯಲಿ ಗಾಢವಾಗಿ.

**– ಪುಟ್ಟು ಕುಲಕರ್ಣಿ**

**(ಶ್ರೀ ಅರವಿಂದರ 'ಸಾವಿತ್ರಿ'; ದಳ 7 ರೇಣು 4 ಪುಟ 509)**

Ed: Sri Puttu Parashuram Kulkarni, Pub: Dr. Ajit Sabnis
Ptd. by M/s. Seshaasai e-forms Pvt. Ltd.,
on behalf of Sri Aurobindo Complex Trust, 'Sri Aurobindo Marg',
J.P. Nagar I Phase, Bengaluru - 560 078. Phone: 080 - 22449882.